ಸಂಜೆವಾಣಿ 1982

ಬೆಂಗಳೂರು - ಹುಬ್ಬಳ್ಳಿ - ಕಲಬುರಗಿ - ಬಳ್ಳಾರಿ - ಮೈಸೂರು - ಮಂಗಳೂರು - ರಾಯಚೂರು - ದಾವಣಗೆರೆ - ಶಿವಮೊಗ್ಗ

www.sanjevani.com contact @sanjevani.com PH: 080 22868882



# 43 ಲಕ್ಷ ಮೌಲ್ಯದ ಡ್ರಗ್ಸ್ ವಶ: ಇಬ್ಬರ ಬಂಧನ

ಬೆಂಗಳೂರು,ಸೆ.23–ಡ್ರಗ್ಸ್ ವಿರುದ್ಧದ ಕಾರ್ಯಾಚರಣೆಯನ್ನು ತೀವ್ರಗೊಳಿಸಿರುವ ಪೂರ್ವ ವಿಭಾಗದ ಪೊಲೀಸರು ಇಬ್ಬರು ಡ್ರಗ್ಸ್ ಪೆಡ್ಲರ್ ಗಳನ್ನು ಬಂಧಿಸಿ 43 ಲಕ್ಷ ಮೌಲ್ಯದ ಮಾಲುಗಳನ್ನು ಜಪ್ತಿ ಮಾಡಿದ್ದಾರೆ.

ವಿವೇಕನಗರದ ಅಬ್ದುಲ್ ಜಬ್ಬೀರ್(28) ಹಾಗೂ ಆಸ್ಗರ್(31) ಬಂಧಿತ ಆರೋಪಿಗಳಾಗಿದ್ದು, ಇಬ್ಬರಿಂದ 43 ಲಕ್ಷ ಮೌಲ್ಯದ 150 ಗ್ರಾಂ ಆಯಂಫೆಟಮೈನ್ 264 ಗ್ರಾಂ ಅನುಮಾನಾಸ್ಪದ ಮಾದಕವಸ್ತು,ಬೈಕ್ ಹಾಗೂ 02 ಮೊಬೈಲ್ ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಕಳೆದ ಸೆ.19ರಂದು ದೊಮ್ಮಲೂರು ರಿಂಗ್ ರಸ್ತೆಯ ಸರ್ವೀಸ್ ರಸ್ತೆಯ ಬಳಿಯ ಖಾಲಿ ಜಾಗದಲ್ಲಿ ನಿಷೇಧಿತ ಮಾದಕ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿದೆ ಎಂಬ ಖಚಿತ ಮಾಹಿತಿ ಜೀವನ್ ಭೀಮಾನಗರ ಪೊಲೀಸರಿಗೆ ಲಭ್ಯವಾಗಿತ್ತು.

ಮಾಹಿತಿ ಆಧರಿಸಿ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಸ್ಥಳಕ್ಕೆ ತೆರಳಿ ದಾಳಿ ನಡೆಸಿದ್ದಾರೆ.

ಈ ವೇಳೆ 32 ಗ್ರಾಂ ಆಯಂಫೆಟಮೈನ್, ಒಂದು ದ್ವಿಚಕ್ರ ವಾಹನ ಹಾಗೂ ಎರಡು ಮೊಬೈಲ್ ಫೋನ್‌ಗಳೊಂದಿಗೆ ಇಬ್ಬರನ್ನು ವಶಕ್ಕೆ ಪಡೆಯಲಾಗಿತ್ತು. ವಿಚಾರಣೆ ವೇಳೆ ಹೆಚ್ಚಿನ ಹಣ ಗಳಿಸುವ ಉದ್ದೇಶದಿಂದ ರಾಜ್ಯದ ಅಪರಿಚಿತ ವ್ಯಕ್ತಿಗಳಿಂದ ಕಡಿಮೆ ಬೆಲೆಗೆ ಮಾದಕ ವಸ್ತುಗಳನ್ನು ಖರೀದಿಸಿ, ಸಾರ್ವಜನಿಕರು ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದುದಾಗಿ ಆರೋಪಿಗಳು ತಿಳಿಸಿರುವುದಾಗಿ ಹೇಳಿದರು.

ತನಿಖೆ ಮುಂದುವರಿಸಿದ ಪೊಲೀಸರು ಆರೋಪಿಗಳ ಮಾಹಿತಿ ಆಧರಿಸಿ ವಿವೇಕನಗರದಲ್ಲಿ ಮತ್ತಷ್ಟು ಶೋಧ ನಡೆಸಿ, ಹೆಚ್ಚುವರಿ ಆಯಂಫೆಟಮೈನ್ ಸೇರಿದಂತೆ ಒಟ್ಟು 150 ಗ್ರಾಂ ಆಯಂಫೆಟಮೈನ್ ಹಾಗೂ 264 ಗ್ರಾಂ ಅನುಮಾನಾಸ್ಪದ ಮಾದಕ ವಸ್ತುವನ್ನು ವಶಪಡಿಸಿಕೊಂಡಿದ್ದಾರೆ.

ಸೆಪ್ಟೆಂಬರ್ 20ರಂದು ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಐದು ದಿನಗಳ ಕಾಲ ಪೊಲೀಸ್ ವಶಕ್ಕೆ ಪಡೆಯಲಾಗಿತ್ತು. ಬಳಿಕ ಸೆಪ್ಟೆಂಬರ್ 22ರಂದು ಮತ್ತೆ ನ್ಯಾಯಾಲಯಕ್ಕೆ ಹಾಜರುಪಡಿಸಿದಾಗ, ನ್ಯಾಯಾಲಯವು ಇಬ್ಬರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಈ ಕಾರ್ಯಾಚರಣೆಯನ್ನು ಪೂರ್ವ ವಿಭಾಗದ ಉಪ ಪೊಲೀಸ್ ಆಯುಕ್ತ ಡಾ. ವಿಕ್ರಮ್ ಆಮಟೆ ಮಾರ್ಗದರ್ಶನದಲ್ಲಿ ಜೀವನ್‌ಭೀಮಾನಗರ ಪೊಲೀಸ್ ಇನ್ಸ್‌ಪೆಕ್ಟರ್ ಪ್ರವೀಣ್ ಕುಮಾರ್ ಟಿ.ಎಲ್. ಹಾಗೂ ಸಿಬ್ಬಂದಿ ತಂಡ ಪ್ರಕರಣವನ್ನು ಭೇದಿಸಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ ಎಂದು ತಿಳಿಸಿದರು.

# ಜೈನ್ ಕಾಲೇಜು ಆಟೋನಮಸ್‌ನಲ್ಲಿ ‘ಸಂಹಿತಾ 2026 - ಕಾಲಚಕ್ರ’

ಬೆಂಗಳೂರು: ,ಸೆ.23–ಜೈನ್ ಕಾಲೇಜು ಆಟೋನಮಸ್ ವತಿಯಿಂದ ‘ಸಂಹಿತಾ 2026 ? ಕಾಲಚಕ್ರ’ ಕಾರ್ಯಕ್ರಮವನ್ನು ಸೆಪ್ಟೆಂಬರ್ 23ರಂದು ನಿಮ್ಹಾನ್ಸ್ ಕನ್ವೆನ್ಷನ್ ಆಡಿಟೋರಿಯಂನಲ್ಲಿ ಆಯೋಜಿಸಲಾಯಿತು.

2026–27ನೇ ಶೈಕ್ಷಣಿಕ ಸಾಲಿನ ಬಿ.ಕಾಂ, ಬಿಬಿಎ ಹಾಗೂ ಬಿಸಿಎ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ತಮ್ಮಲ್ಲಿರುವ ಪ್ರತಿಭೆ ಹಾಗೂ ಸೃಜನಶೀಲತೆಯನ್ನು ಪ್ರದರ್ಶಿಸಲು ‘ಸಂಹಿತಾ 2026’ ಅತ್ಯುತ್ತಮ ವೇದಿಕೆಯನ್ನು ಒದಗಿಸಿತು. ವಿವಿಧ ಸಾಂಸ್ಕೃತಿಕ ಹಾಗೂ ಪಠ್ಯೇತರ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಉತ್ಸಾಹದಿಂದ ಅನಾವರಣಗೊಳಿಸಿದರು.

ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಜೈನ್ ಕಾಲೇಜು ಆಟೋನಮಸ್‌ನ ಪ್ರಾಂಶುಪಾಲರಾದ ಡಾ. ನವೀನ್ ಕುಮಾರ್ ಸಿ.ಎಂ. ಅವರು, ವಿದ್ಯಾರ್ಥಿಗಳು ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಪಠ್ಯೇತರ ಹಾಗೂ ಸಹಪಠ್ಯ ಚಟುವಟಿಕೆಗಳಲ್ಲಿಯೂ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು. ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಪಠ್ಯಕ್ರಮದ ಜ್ಞಾನ ಮಾತ್ರವಲ್ಲದೆ, ಪ್ರತಿಭೆ, ಸೃಜನಶೀಲತೆ, ನಾಯಕತ್ವ ಗುಣ ಹಾಗೂ ತಂಡದೊಂದಿಗೆ ಕಾರ್ಯನಿರ್ವಹಿಸುವ ಸಾಮರ್ಥ್ಯವೂ ಅತ್ಯಂತ ಮುಖ್ಯವೆಂದು ಅವರು ತಿಳಿಸಿದರು.

‘ಸಂಹಿತಾ 2026 ? ಕಾಲಚಕ್ರ’ ಕಾರ್ಯಕ್ರಮದ ಯಶಸ್ಸಿಗೆ ಶುಭ ಹಾರೈಸಿದ ಪ್ರಾಂಶುಪಾಲರು, ಎಲ್ಲ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಆತ್ಮವಿಶ್ವಾಸದಿಂದ ಪ್ರದರ್ಶಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಆಶಿಸಿದರು.

# ಆನೇಕಲ್‌ನಲ್ಲಿ ದೊಣ್ಣೆಯಿಂದ ಹೊಡೆದು ವ್ಯಕ್ತಿ ಹತ್ಯೆ

ಆನೇಕಲ್,ಸೆ.23–ದೊಣ್ಣೆಯಿಂದ ಹೊಡೆದು ಸುಮಾರು 30 ವರ್ಷದ ವ್ಯಕ್ತಿಯನ್ನು ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ಆನೇಕಲ್ ತಾಲ್ಲೂಕಿನ ರಾಮಕೃಷ್ಣಪುರ ಗ್ರಾಮದ ಮುಖ್ಯರಸ್ತೆಯಲ್ಲಿ ನಡೆದಿದೆ.

ರಸ್ತೆ ಬದಿಯ ಪೊದೆಯಲ್ಲಿ ವ್ಯಕ್ತಿಯ ಮೃತದೇಹ ಪತ್ತೆಯಾಗಿದ್ದು, ಮೃತದೇಹದ ಪಕ್ಕದಲ್ಲೇ ದೊಣ್ಣೆಯೊಂದು ಪತ್ತೆಯಾಗಿದ್ದು, ರಾತ್ರಿ 1 ಗಂಟೆ ಸುಮಾರಿಗೆ ಘಟನೆ ನಡೆದಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ಮೃತದೇಹದ ಮೇಲೆ ಇರುವೆಗಳು ತುಂಬಿಕೊಂಡಿದ್ದವು. ರಸ್ತೆಯಲ್ಲಿ ಸಂಚರಿಸುತ್ತಿದ್ದವರು ಮೃತದೇಹವನ್ನು ಗಮನಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಮಾಹಿತಿ ತಿಳಿದು ಸೂರ್ಯನಗರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸದ್ಯ ಮೃತನ ಗುರುತು ಪತ್ತೆಹಚ್ಚುವ ಕಾರ್ಯದಲ್ಲಿ ಪೊಲೀಸರು ತೊಡಗಿದ್ದಾರೆ.

### ಘಟನಾ ಸ್ಥಳಕ್ಕೆ ಅಡಿಷನಲ್ ಎಸ್ಪಿ ಭೇಟಿ:

ಘಟನಾ ಸ್ಥಳಕ್ಕೆ ಬೆಂಗಳೂರು ಗ್ರಾಮಾಂತರ ಅಡಿಷನಲ್ ಎಸ್ಪಿ ವೆಂಕಟೇಶ್ ಪ್ರಸನ್ನ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸೂರ್ಯನಗರ ಪೊಲೀಸರಿಂದ ಘಟನೆಯ ಕುರಿತು ಮಾಹಿತಿ ಪಡೆದ ಅವರು, ಸ್ಥಳದಲ್ಲಿನ ಪರಿಸ್ಥಿತಿಯನ್ನು ಪರಿಶೀಲಿಸಿದರು.

ಇನ್ನು, ಘಟನಾ ಸ್ಥಳದಲ್ಲಿ ಸೋಕೋ ತಂಡ ಸಾಕ್ಷ್ಯಗಳನ್ನು ಸಂಗ್ರಹಿಸುವ ಕಾರ್ಯ ನಡೆಸುತ್ತಿದೆ. ಹತ್ಯೆಗೆ ಕಾರಣವೇನು ಹಾಗೂ ಆರೋಪಿಗಳು ಯಾರು ಎಂಬುದರ ಕುರಿತು ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

# ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಇನ್ನೂ ಸಿಕ್ಕಿಲ್ಲ: ಶೂ, ಸಾಕ್ಸ್, ಸ್ವೆಟರ್

ಬೆಂಗಳೂರು, ಸೆ.23–ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಆದ್ಯತೆ ನೀಡುತ್ತಿರುವ ನಡುವೆಯೇ, ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಶಾಲಾ–ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಬಡ ವಿದ್ಯಾರ್ಥಿಗಳಿಗೆ ದೊರೆಯಬೇಕಾದ ಮೂಲಭೂತ ಸೌಲಭ್ಯಗಳು ಮಾತ್ರ ವಿಳಂಬವಾಗುತ್ತಿವೆ ಎಂಬ ಆರೋಪ ಕೇಳಿಬಂದಿದೆ.

ಶೈಕ್ಷಣಿಕ ವರ್ಷ ಆರಂಭವಾಗಿ ಸುಮಾರು ನಾಲ್ಕು ತಿಂಗಳು ಕಳೆದರೂ ಜಿಬಿಎ ವ್ಯಾಪ್ತಿಯ ನಗರಪಾಲಿಕೆ ಶಾಲೆ–ಕಾಲೇಜುಗಳ ಸುಮಾರು 23 ಸಾವಿರ ವಿದ್ಯಾರ್ಥಿಗಳಿಗೆ ಶೂ, ಸಾಕ್ಸ್, ಶಾಲಾ ಬ್ಯಾಗ್ ಹಾಗೂ ಸ್ವೆಟರ್ ವಿತರಣೆ ಮಾಡಿಲ್ಲ ಎನ್ನಲಾಗಿದೆ. ಇದರಿಂದ ಬಡ ಹಾಗೂ ಕೂಲಿ ಕಾರ್ಮಿಕರ ಕುಟುಂಬಗಳಿಗೆ ಸೇರಿದ ವಿದ್ಯಾರ್ಥಿಗಳು ಸಮಸ್ಯೆ ಎದುರಿಸುವಂತಾಗಿದೆ.

ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಉಚಿತವಾಗಿ ಅಗತ್ಯ ಶೈಕ್ಷಣಿಕ ಪರಿಕರಗಳನ್ನು ಒದಗಿಸುವ ಯೋಜನೆಗಳಿದ್ದರೂ, ಅವುಗಳ ಅನುಷ್ಠಾನದಲ್ಲಿನ ವಿಳಂಬ ಪೋಷಕರ ಅಸಮಾಧಾನಕ್ಕೆ ಕಾರಣವಾಗಿದೆ. ಮಕ್ಕಳಿಗೆ ಸಮಯಕ್ಕೆ ಸೌಲಭ್ಯ ಸಿಗಬೇಕಾದರೆ ಟೆಂಡರ್ ಪ್ರಕ್ರಿಯೆಯನ್ನು ತ್ವರಿತಗೊಳಿಸಬೇಕು ಎಂಬ ಒತ್ತಾಯ ಕೇಳಿಬರುತ್ತಿದೆ.

### ಎರಡು ಬಾರಿ ಟೆಂಡರ್... ಸ್ಪಂದನೆಯೇ ಇಲ್ಲ!

ಜಿಬಿಎ ಶಿಕ್ಷಣ ಇಲಾಖೆಯ ಮೂಲಗಳ ಪ್ರಕಾರ, ವಿದ್ಯಾರ್ಥಿಗಳಿಗೆ ಶೂ, ಸಾಕ್ಸ್ ಮತ್ತು ಬ್ಯಾಗ್ ಒದಗಿಸಲು ಟೆಂಡರ್ ಆಹ್ವಾನಿಸಲಾಗಿತ್ತು. ಆದರೆ ಎರಡು ಬಾರಿ ಟೆಂಡರ್ ಕ–ರೆದರೂ ಗುತ್ತಿಗೆದಾರರು ಭಾಗವಹಿಸಿಲ್ಲ ಎನ್ನಲಾಗಿದೆ. ಇದೀಗ ಮೂರನೇ ಬಾರಿ ಟೆಂಡರ್ ಆಹ್ವಾನಿಸಲಾಗಿದೆ.

ಮೂರನೇ ಟೆಂಡರ್‌ಗೆ ಗುತ್ತಿಗೆದಾರ–ರಿಂದ ಸ್ಪಂದನೆ ದೊರೆತರೆ, ಮುಂದಿನ ಹಂತದಲ್ಲಿ ಟೆಂಡರ್ ಅಂತಿಮಗೊಳಿಸಿ ವಿದ್ಯಾರ್ಥಿಗಳಿಗೆ ಅಗತ್ಯ ವಸ್ತುಗಳನ್ನು ವಿತರಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ ಎನ್ನಲಾಗಿದೆ.

ಇದರಿಂದ ಶೈಕ್ಷಣಿಕ ವರ್ಷ ಆರಂಭವಾದರೂ ಮಕ್ಕಳಿಗೆ ಸಿಗಬೇಕಾದ ಸೌಲಭ್ಯಗಳು ಟೆಂಡರ್ ಪ್ರಕ್ರಿಯೆಯಲ್ಲೇ ಸಿಲುಕಿರುವಂತಾಗಿದೆ.

### ಸ್ವೆಟರ್‌ಗೂ ಇದೇ ಕಥೆ!

ಇನ್ನು ಶೂ ಮತ್ತು ಸ್ವೆಟರ್ ಖರೀದಿಗೆ ಹಣವನ್ನು ಪೋಷಕರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡುವ ಕುರಿತು ಸರ್ಕಾರದ ಮಟ್ಟದಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಪೋಷಕರ ಬ್ಯಾಂಕ್ ಖಾತೆ ವಿವರಗಳನ್ನು ಸಂಗ್ರಹಿಸುವ ಪ್ರಕ್ರಿಯೆಯೂ ನಡೆಯುತ್ತಿದೆ. ಆದರೆ ಈ ಪ್ರಕ್ರಿಯೆಗೆ ಸುಮಾರು ಮೂರು ತಿಂಗಳ ಕಾಲಾವಕಾಶ ಬೇಕಾಗಬಹುದು ಎನ್ನಲಾಗಿದ್ದು, ಅಷ್ಟರೊಳಗೆ ಮಕ್ಕಳಿಗೆ ಸೌಲಭ್ಯಗಳು ದೊರೆಯಲಿವೆಯೇ ಎಂಬ ಪ್ರಶ್ನೆ ಎದುರಾಗಿದೆ.

ಕಳೆದ ಶೈಕ್ಷಣಿಕ ವರ್ಷದಲ್ಲೂ ಸ್ವೆಟರ್ ವಿತರಣೆಗೆ ಟೆಂಡರ್ ಕರೆದಿದ್ದರೂ, ಶೈಕ್ಷಣಿಕ ವರ್ಷ ಮುಗಿಯುವವರೆಗೂ ಹಲವು ವಿದ್ಯಾರ್ಥಿಗಳಿಗೆ ಸ್ವೆಟರ್ ಸಿಕ್ಕಿರಲಿಲ್ಲ ಎಂಬ ಆರೋಪವೂ ಕೇಳಿಬಂದಿದೆ.

### ವಿಳಂಬಕ್ಕೆ ಕಾರಣವೇನು?

ವಿದ್ಯಾರ್ಥಿಗಳಿಗೆ ಅಗತ್ಯ ವಸ್ತುಗಳನ್ನು ಒದಗಿಸುವ ಪ್ರಕ್ರಿಯೆಯಲ್ಲಿ ಪದೇಪದೇ ಟೆಂಡರ್ ವಿಫಲವಾಗುತ್ತಿರುವುದಕ್ಕೆ ಕಾರಣವೇನು ಎಂಬ ಪ್ರಶ್ನೆ ಇದೀಗ ಎದುರಾಗಿದೆ. ಟೆಂಡರ್‌ನಲ್ಲಿ ಗುತ್ತಿಗೆದಾರರು ಭಾಗವಹಿಸದಿರುವುದಕ್ಕೆ ಕಾರಣವೇನು? ದರ ನಿಗದಿ ಅಥವಾ ಷರತ್ತುಗಳಲ್ಲಿ ಸಮಸ್ಯೆಯಿದೆಯೇ? ಎಂಬ ಬಗ್ಗೆ ಜಿಬಿಎ ಶಿಕ್ಷಣ ಇಲಾಖೆ ಸ್ಪಷ್ಟನೆ ನೀಡಬೇಕೆಂಬ ಆಗ್ರಹ ಕೇಳಿಬಂದಿದೆ.

ಇನ್ನು ಟೆಂಡರ್ ಪ್ರಕ್ರಿಯೆಯಲ್ಲಿ ಅನಗತ್ಯ ವಿಳಂಬ ಅಥವಾ ಅಕ್ರಮಗಳಿಗೆ ಅವಕಾಶವಿದೆಯೇ ಎಂಬ ಬಗ್ಗೆಯೂ ಕೆಲವರು ಅನುಮಾನ ವ್ಯಕ್ತಪಡಿಸಿದ್ದಾರೆ. ಈ ಆರೋಪಗಳ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಸ್ಪಷ್ಟ ಮಾಹಿತಿ ನೀಡಬೇಕಾಗಿದೆ.

### ಮಕ್ಕಳಿಗೆ ಸೌಲಭ್ಯ ಯಾವಾಗ?

ಖಾಸಗಿ ಶಾಲೆಗಳಿಗೆ ಸರಿಸಾಟಿಯಾಗಿ ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣದ ಜತೆಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವುದಾಗಿ ಸರ್ಕಾರ ಹೇಳುತ್ತಿದೆ. ಆದರೆ ಶೂ, ಸಾಕ್ಸ್, ಬ್ಯಾಗ್ ಹಾಗೂ ಸ್ವೆಟರ್‌ನಂತಹ ಮೂಲಭೂತ ಸೌಲಭ್ಯಗಳನ್ನೇ ಶೈಕ್ಷಣಿಕ ವರ್ಷದ ಆರಂಭದಲ್ಲೇ ಒದಗಿಸಲು ಸಾಧ್ಯವಾಗದಿರುವುದು ವ್ಯವಸ್ಥೆಯ ಕಾರ್ಯವೈಖರಿ ಬಗ್ಗೆ ಪ್ರಶ್ನೆ ಮೂಡಿಸಿದೆ.

ಬಡ ಕುಟುಂಬಗಳ ಮಕ್ಕಳು ಸರ್ಕಾರಿ ಶಾಲೆಗಳ ಉಚಿತ ಸೌಲಭ್ಯಗಳನ್ನೇ ಅವಲಂಬಿಸಿರುವುದರಿಂದ, ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಯಾವುದೇ ವಿಳಂಬವಿಲ್ಲದೆ ಮಕ್ಕಳಿಗೆ ಅಗತ್ಯ ಪರಿಕರಗಳನ್ನು ಒದಗಿಸಬೇಕು ಎಂಬುದು ಪೋಷಕರ ಆಗ್ರಹವಾಗಿದೆ. ಜಿಬಿಎ ಅಧಿಕಾರಿಗಳು ಈ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳುತ್ತಾರೆಯೇ ಎಂಬುದನ್ನು ಕಾದು ನೋಡಬೇಕಿದೆ.

# ರಾತ್ರಿ ವಾಹನ ಚಾಲನೆ ವೇಳೆ ಹೆಡ್‌ಲೈಟ್ ಬಳಕೆಯಲ್ಲಿ ಎಚ್ಚರ: ಹೈ ಬೀಮ್‌ನಿಂದ ಅಪಘಾತದ ಅಪಾಯ

ಬೆಂಗಳೂರು,ಸೆ.23–ರಾಜ್ಯದಲ್ಲಿ ದಿನೇ ದಿನೇ ರಸ್ತೆ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿರುವ ಬೆನ್ನಲ್ಲೇ ರಾತ್ರಿ ವೇಳೆಯಲ್ಲಿ ನಡೆಯುವ ಹೆಚ್ಚಿನ ರಸ್ತೆ ಅಪಘಾತಗಳಿಗೆ ವಾಹನ ಸವಾರರ ‘ಹೆಡ್‌ಲೈಟ್’ ಬಳಕೆಯ ಅರಿವಿನ ಕೊರತೆಯೇ ಪ್ರಮುಖ ಕಾರಣವಾಗಿದೆ. ಚಾಲನೆ ಮಾಡುವಾಗ ಯಾವ ಸಮಯದಲ್ಲಿ ‘ಹೈ ಬೀಮ್’ ಹಾಗೂ ‘ಲೋ ಬೀಮ್’ ಬಳಸಬೇಕು ಎನ್ನುವ ಕನಿಷ್ಠ ಜ್ಞಾನವಿಲ್ಲದೆ ವಾಹನ ಚಲಾಯಿಸುವುದು ಎದುರಿಗೆ ಬರುವ ಸವಾರರ ಪ್ರಾಣಕ್ಕೆ ಕಂಟಕವಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಸಂಚಾರ ಪೊಲೀಸರು ಹಾಗೂ ಸಾರಿಗೆ ಇಲಾಖೆ ರಾತ್ರಿ ವೇಳೆ ವಾಹನ ಚಾಲನೆ ಮಾಡುವವರಿಗೆ ಲೈಟ್ ಬಳಕೆಯ ಕುರಿತು ಕಟ್ಟುನಿಟ್ಟಿನ ಸೂಚನೆ ಹಾಗೂ ಜಾಗೃತಿ ಮಾರ್ಗದರ್ಶನಗಳನ್ನು ಬಿಡುಗಡೆ ಮಾಡಿದ್ದಾರೆ.

### ಹೈ ಬೀಮ್ ಮಾರಕ:

ನಗರ ಪ್ರದೇಶಗಳಲ್ಲಿ ಹಾಗೂ ರಸ್ತೆ ದೀಪಗಳಿರುವ ರಸ್ತೆಗಳಲ್ಲಿ ಅನೇಕ ಸವಾರರು ಅನಗತ್ಯವಾಗಿ ಹೆಡ್‌ಲೈಟ್ ಅನ್ನು ‘ಹೈಬೀಮ್’ನಲ್ಲೇ ಇಟ್ಟುಕೊಂಡು ಚಲಾಯಿಸುತ್ತಾರೆ. ಎದುರಿನಿಂದ ಬರುವ ವಾಹನದ ಹೈ ಬೀಮ್ ಬೆಳಕು ಚಾಲಕನ ಕಣ್ಣಿಗೆ ನೇರವಾಗಿ ಬಿದ್ದಾಗ 3 ರಿಂದ 5 ಸೆಕೆಂಡುಗಳ ಕಾಲ ಕಣ್ಣುಗಳು ಸಂಪೂರ್ಣ ಮಂಜಾಗುತ್ತವೆ. ಗಂಟೆಗೆ 60 ಕಿ.ಮೀ ವೇಗದಲ್ಲಿ ಚಲಿಸುವ ವಾಹನವು ಈ 3 ಸೆಕೆಂಡುಗಳಲ್ಲಿ ಬರೋಬ್ಬರಿ 50 ಮೀಟರ್‌ಗೂ ಹೆಚ್ಚು ದೂರ ನಿಯಂತ್ರಣವಿಲ್ಲದೆ ಸಾಗುತ್ತದೆ.

ಇದು ಭೀಕರ ಅಪಘಾತಕ್ಕೆ ನಾಂದಿ ಹಾಡುತ್ತದೆ. ಹಿಂದಿನಿಂದ ಬರುವ ವಾಹನ ಹೈ ಬೀಮ್‌ನಲ್ಲಿದ್ದರೆ, ಮುಂದೆ ಹೋಗುವ ವಾಹನದ ‘ರಿಯರ್ ವ್ಯೂ ಮಿರರ್’ ಮೂಲಕ ಆ ಬೆಳಕು ಚಾಲಕನ ಕಣ್ಣಿಗೆ ಬಿದ್ದು ಗಮನ ಭಂಗವಾಗುತ್ತದೆ.

### ಭಾರಿ ದಂಡ ಹಾಗೂ ಕೇಸ್:

ಅನಗತ್ಯವಾಗಿ ಹೈ ಬೀಮ್ ಬಳಸಿ ಚಾಲನೆ ಮಾಡುವುದು ಹಾಗೂ ಜಗಮಗಿಸುವ ಎಲ್‌ಇಡಿ ಲೈಟ್‌ಗಳನ್ನು ಹಾಕಿ ಎದುರಿನ ಚಾಲಕರಿಗೆ ತೆ–ೂಂದರೆ ನೀಡುವುದರ ವಿರುದ್ಧ ಸಂಚಾರ ಪೊಲೀಸರು ವಿಶೇಷ ಕಾರ್ಯಾಚರಣೆ ಆರಂಭಿಸಿದ್ದಾರೆ.

ನಿಯಮ ಉಲ್ಲಂಘಿಸುವ ವಾಹನ ಸವಾರರಿಗೆ ಮೋಟಾರು ವಾಹನ ಕಾಯ್ದೆಯಡಿ ದಂಡ ವಿಧಿಸಲಾಗುತ್ತಿದ್ದು, ಪದೇ ಪದೇ ನಿಯಮ ಉಲ್ಲಂಘಿಸಿದರೆ ಚಾಲನಾ ಪರವಾನಗಿ (ಡಿಎಲ್) ರದ್ದುಗೊಳಿಸುವ ಎಚ್ಚರಿಕೆಯನ್ನೂ ನೀಡಲಾಗಿದೆ.

ರಾತ್ರಿ ಚಾಲನೆ ವೇಳೆ ಹೆಡ್‌ಲೈಟ್‌ಗಳನ್ನು ಸರಿಯಾಗಿ ಬಳಸುವುದು ಕೇವಲ ಸಂಚಾರ ನಿಯಮ ಪಾಲನೆಯಲ್ಲ; ಇತರ ವಾಹನ ಸವಾರರ ಸುರಕ್ಷತೆ–ಯ ದೃಷ್ಟಿಯಿಂದಲೂ ಅತ್ಯಂತ ಮುಖ್ಯವಾಗಿದೆ.

### ಪ್ರಮುಖ ನಿಯಮಗಳು:

*ನಗರ ಮತ್ತು ದೀಪವಿರುವ ರಸ್ತೆಗಳಲ್ಲಿ ‘ಲೋ ಬೀಮ್’ ಕಡ್ಡಾಯ: ನಗರ ಪ್ರದೇಶದ ರಸ್ತೆಗಳಲ್ಲಿ, ಸರ್ಕಲ್‌ಗಳಲ್ಲಿ ಹಾಗೂ ಕತ್ತಲಿಲ್ಲದ ಬೀದಿಗಳಲ್ಲಿ ಸದಾ ‘ಲೋ ಬೀಮ್’ ಲೈಟ್ ಮಾತ್ರ ಬಳಸಬೇಕು.

*ಎದುರಿನಿಂದ ವಾಹನ ಬಂದಾಗ ಡಿಪ್ಪರ್ ಬಳಸಿ: ಹೈವೇ ಅಥವಾ ಕತ್ತಲಿರುವ ರಸ್ತೆಯಲ್ಲಿ ಹೈಬೀಮ್‌ನಲ್ಲಿ ಚಲಿಸುತ್ತಿದ್ದರೂ, ಎದುರಿನಿಂದ ಮತ್ತೊಂದು ವಾಹನ ಬರುತ್ತಿರುವುದು ಕಂಡುಬಂದರೆ ತಕ್ಷಣವೇ ‘ಲೋ ಬೀಮ್’ ಮಾಡಬೇಕು.

*ಮುಂದಿನ ವಾಹನವನ್ನು ಹಿಂಬಾಲಿಸುವಾಗ: ನಿಮ್ಮ ವಾಹನವು ಮತ್ತೊಂದು ವಾಹನದ ಹಿಂದೆ 200 ಮೀಟರ್‌ಗಿಂತ ಕಡಿಮೆ ಅಂತರದಲ್ಲಿದ್ದರೆ, ಲೋ ಬೀಮ್‌ನಲ್ಲೇ ಇರಲಿ. ಇದರಿಂದ ಮುಂಭಾಗದ ಚಾಲಕನಿಗೆ ಚಾಲನೆ ಮಾಡಲು ತೊಂದರೆಯಾಗುವುದಿಲ್ಲ.

*ಮಂಜು ಹಾಗೂ ಮಳೆಯ ಸಮಯದಲ್ಲಿ ‘ಫಾಗ್ ಲ್ಯಾಂಪ್’: ದಟ್ಟ ಮಂಜು ಅಥವಾ ಭಾರಿ ಮಳೆಯಿದ್ದಾಗ ಹೈ ಬೀಮ್ ಬೆಳಕು ಮಂಜಿನಲ್ಲಿ ಪ್ರತಿಫಲಿಸಿ ನಿಮಗೇ ರಸ್ತೆ ಕಾಣಿಸದಂತೆ ಮಾಡುತ್ತದೆ. ಇಂತಹ ಸಮಯದಲ್ಲಿ ಲೋ ಬೀಮ್ ಹಾಗೂ ‘ಫಾಗ್ ಲ್ಯಾಂಪ್’ ಮತ್ತು ಇಂಡಿಕೇಟರ್‌ಗಳನ್ನು ಬಳಸಬೇಕು.

*ಅನಗತ್ಯ ಎಲ್‌ಇಡಿ ಮತ್ತು ಆಫ್ಟರ್‌ಮಾರ್ಕೆಟ್ ಲೈಟ್‌ಗಳಿಗೆ ನಿಷೇಧ: ಕಂಪನಿ ನೀಡಿರುವ ಲೈಟ್‌ಗಳಿಗಿಂತ ಹೆಚ್ಚು ತೀವ್ರತೆಯುಳ್ಳ ಬಿಳಿ ಬಣ್ಣದ ಎಲ್‌ಇಡಿ ಹಾಗೂ ಹ್ಯಾಲೊಜೆನ್ ಲೈಟ್‌ಗಳನ್ನು ಅಳವಡಿಸುವುದು ಮೋಟಾರು ವಾಹನ ಕಾಯ್ದೆಯಡಿ ಅಪರಾಧವಾಗಿದೆ.

# ಸಾಲದ ವಾಹನ ಅಡಮಾನವಿಟ್ಟುಕೊಂಡು ವಂಚನೆ: 23 ವಾಹನಗಳ ಜಪ್ತಿ

ಬೆಂಗಳೂರು,ಸೆ.23–ಸಾಲದ ಮೇಲಿರುವ ವಾಹನಗಳನ್ನು ಕಡಿಮೆ ಬೆಲೆಗೆ ಅಡಮಾನ ಇರಿಸಿಕೊಂಡು, ಬಳಿಕ ಅದೇ ವಾಹನಗಳನ್ನು ಹೆಚ್ಚಿನ ಮೊತ್ತಕ್ಕೆ ಬೇರೆಯವರಿಗೆ ಅಡಮಾನ ಅಥವಾ ಮಾರಾಟ ಮಾಡಿ ವಂಚಿಸುತ್ತಿದ್ದ ಖದೀಮ ಕಾರ್ ಡೀಲರ್ ನೊಬ್ಬನನ್ನು ಅನ್ನಪೂರ್ಣೇಶ್ವರಿನಗರ ಪೊಲೀಸರು ಬಂಧಿಸಿ 1.51 ಕೋಟಿ ಮೌಲ್ಯದ ವಾಹನಗಳನ್ನು ಜಪ್ತಿ ಮಾಡಿದ್ದಾರೆ.

ಜ್ಞಾನಭಾರತಿಯ ಎನ್‌ಜಿಇಎಫ್ ಲೇಔಟ್‌ನ ಅಜಯ್ ಕುಮಾರ್(28) ಬಂಧಿತ ಆರೋಪಿಯಾಗಿದ್ದು, ಆತನಿಂದ 1.51 ಕೋಟಿ ಮೌಲ್ಯದ 14 ಕಾರುಗಳು, 1 ಗೂಡ್ಸ್ ವಾಹನ, 2 ಆಟೋರಿಕ್ಷಾ, 6 ದ್ವಿಚಕ್ರ ವಾಹನಗಳು ಸೇರಿ 23 ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಅನ್ನಪೂರ್ಣೇಶ್ವರಿನಗರದ ಎನ್‌ಜಿಇಎಫ್ ಲೇಔಟ್ ನಿವಾಸಿಯೊಬ್ಬರು ಕಳೆದ ಆಗಸ್ಟ್ 13ರಂದು ಠಾಣೆಗೆ ದೂರು ನೀಡಿ ಹೊಸ ಕಾರೊಂದನ್ನು ಲೋನ್‌ನಲ್ಲಿ ಖರೀದಿಸಿದ್ದು, ಹಣದ ಅವಶ್ಯಕತೆ ಇದ್ದ ಹಿನ್ನೆಲೆಯಲ್ಲಿ 2025ರ ಜುಲೈನಲ್ಲಿ ಲೋನ್ ಕಟ್ಟಿಕೊಂಡು ಹೋಗುವಂತೆ ತಿಳಿಸಿ, ಕಾರಿನ ದಾಖಲೆಗಳ ಸಮೇತ ಆರೋಪಿಗೆ ನೀಡಿದ್ದರು.

ಆದರೆ, ಆರೋಪಿಯು ಲೋನ್ ಹಣವನ್ನು ಪಾವತಿಸದೆ ಕಾರನ್ನೂ ಹಿಂದಿರುಗಿಸಿರಲಿಲ್ಲ. ಕಾರನ್ನು ವಾಪಸ್ ನೀಡುವಂತೆ ಕೇಳಿದಾಗ ಬೆದರಿಕೆ ಹಾಕಿ, ವಾಹನವನ್ನು ಹಿಂದಿರುಗಿಸದೆ ವಂಚಿಸಿರುವುದಾಗಿ ದೂರಿನಲ್ಲಿ ಆರೋಪಿಸಲಾಗಿತ್ತು.

ಈ ಸಂಬಂಧ ಅನ್ನಪೂರ್ಣೇಶ್ವರಿನಗರ ಪೊಲೀಸ್ ಠಾಣೆಯಲ್ಲಿ ವಂಚನೆ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡ ಪೊಲೀಸರು ವಿವಿಧ ಆಯಾಮಗಳಲ್ಲಿ ಪರಿಶೀಲನೆ ನಡೆಸಿ, ಆಗಸ್ಟ್ 30ರಂದು ಉಲ್ಲಾಳದ ವಿಶ್ವೇಶ್ವರಯ್ಯ ಲೇಔಟ್‌ನ ಮನೆಯಿಂದ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದರು. ವಿಚಾರಣೆ ವೇಳೆ ಇತರೆ ಸಹಚರರೊಂದಿಗೆ ಸೇರಿಕೊಂಡು ಇದೇ ರೀತಿಯ ಕೃತ್ಯಗಳನ್ನು ನಡೆಸಿರುವುದಾಗಿ ಆರೋಪಿ ಒಪ್ಪಿಕೊಂಡಿದ್ದಾನೆ ಎಂದು ತಿಳಿಸಿದರು.

ಆಗಸ್ಟ್ 31ರಂದು ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ 12 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಯಿತು.

ಈ ವೇಳೆ ಲೋನ್ ಇರುವ ಹಲವು ವಾಹನಗಳನ್ನು ಕಡಿಮೆ ಬೆಲೆಗೆ ಅಡಮಾನ ಇರಿಸಿಕೊಂಡು, ಬಳಿಕ ಅದೇ ವಾಹನಗಳನ್ನು ಬೇರೆಯವರಿಗೆ ಹೆಚ್ಚಿನ ಮೊತ್ತಕ್ಕೆ ಅಡಮಾನ ಅಥವಾ ಮಾರಾಟ ಮಾಡುತ್ತಿದ್ದುದಾಗಿ ಆರೋಪಿ ಮಾಹಿತಿ ನೀಡಿದ್ದಾನೆ.

ಆರೋಪಿಯು ನೀಡಿದ ಮಾಹಿತಿಯ ಆಧಾರದ ಮೇಲೆ ಸೆಪ್ಟೆಂಬರ್ 1ರಿಂದ 21ರವರೆಗೆ ಕಾರ್ಯಾಚರಣೆ ನಡೆಸಿದ ಪೊಲೀಸರು, ವಾಹನಗಳನ್ನು ಖರೀದಿಸಿದ್ದ ವ್ಯಕ್ತಿಗಳಿಂದ 14 ಕಾರುಗಳು, 1 ಗೂಡ್ಸ್ ವಾಹನ, 2 ಆಟೋರಿಕ್ಷಾ ಹಾಗೂ 6 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

ಪ್ರಕರಣದಲ್ಲಿ ತಲೆಮರೆಸಿಕೊಂಡಿರುವ ಆರೋಪಿಯ ಸಹಚರರ ಪತ್ತೆ ಕಾರ್ಯ ಮುಂದುವರಿದಿದ್ದು, ತನಿಖೆ ಪ್ರಗತಿಯಲ್ಲಿದೆ. ಸೆಪ್ಟೆಂಬರ್ 10ರಂದು ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ನ್ಯಾಯಾಲಯವು ಜಾಮೀನಿನ ಮೇಲೆ ಬಿಡುಗಡೆ ಮಾಡಿದೆ ಎಂದು ತಿಳಿಸಿದರು. ಈ ಕಾರ್ಯಾಚರಣೆಯನ್ನು ಪಶ್ಚಿಮ ವಿಭಾಗದ ಉಪ ಪೊಲೀಸ್ ಆಯುಕ್ತರಾದ ಯತೀಶ್.ಎನ್ ಮಾರ್ಗದರ್ಶನದಲ್ಲಿ ಅನ್ನಪೂರ್ಣೇಶ್ವರಿನಗರ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಲತೇಶ್ ಕುಮಾರ್.ಡಿ.ಕೆ. ಮತ್ತವರ ಸಿಬ್ಬಂದಿ ಕೈಗೊಂಡಿದ್ದರು ಎಂದು ತಿಳಿಸಿದರು.

# ಕಾವೇರಿ ನೀರು: ಹಿತರಕ್ಷಣಾ ಸಮಿತಿ ಅರ್ಜಿ ವಜಾ

ನವದೆಹಲಿ.ಸೆ.23– ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ಕರ್ನಾಟಕಕ್ಕೆ ಮತ್ತೊಂದು ಹಿನ್ನಡೆಯಾಗಿದೆ.

ತಮಿಳುನಾಡಿನ ಪಾಲಿನ 70.91 ಟಿಎಂಸಿ ನೀರನ್ನು ಕರ್ನಾಟಕಕ್ಕೆ ವರ್ಗಾಯಿಸುವಂತೆ ಕೋರಿ ಕಾವೇರಿ ನದಿ ಹಿತರಕ್ಷಣಾ ಸಮಿತಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ನ್ಯಾಯಮೂರ್ತಿ ವಿಕ್ರಂನಾಥ್ ಹಾಗೂ ನ್ಯಾಯಮೂರ್ತಿ ಸಂದೀಪ್ ಮೆಹ್ತಾ ಅವರ ಪೀಠವು ಅರ್ಜಿಯನ್ನು ವಜಾಗೊಳಿಸಿದೆ.

ಪ್ರಸ್ತುತ ಜಾರಿಯಲ್ಲಿರುವ ಕಾವೇರಿ ನೀರು ಹಂಚಿಕೆ ಸೂತ್ರದಲ್ಲಿ ಲೋಪಗಳಿವೆ ಎಂದು ಸಮಿತಿ ಅರ್ಜಿಯಲ್ಲಿ ವಾದಿಸಿತ್ತು. ಕರ್ನಾಟಕದ ಕುಡಿಯುವ ನೀರು, ಕೈಗಾರಿಕೆ, ಏತ ನೀರಾವರಿ, ಎರಡನೆ ಬೆಳೆ ಹಾಗೂ ಪರಿಸರ ಸಂರಕ್ಷಣೆಗೆ ಅಗತ್ಯವಿರುವ ನೀರನ್ನು ಪರಿಗಣಿಸಬೇಕು ಎಂದು ಮನವಿ ಮಾಡಲಾಗಿತ್ತು.

ಮಳೆಯ ಪ್ರಮಾಣ ಮತ್ತು ವೈಜ್ಞಾನಿಕ ಅಂಶಗಳನ್ನು ಆಧರಿಸಿ ಸಂಕಷ್ಟದ ಸಂದರ್ಭದಲ್ಲಿ ನೀರು ಹಂಚಿಕೆ ಮಾಡುವ ಸೂತ್ರವನ್ನು ರೂಪಿಸುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಅರ್ಜಿಯಲ್ಲಿ ಕೋರಲಾಗಿತ್ತು.

ಆದರೆ, ಕರ್ನಾಟಕ ಮತ್ತು ತಮಿಳುನಾಡಿನ ನಡುವಿನ ಕಾವೇರಿ ನೀರು ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ ಈಗಾಗಲೇ ಕಾನೂನು ಹೋರಾಟ ಮುಂದುವರಿದಿದೆ. ಈ ಹಿನ್ನೆಲೆಯಲ್ಲಿ ರಾಜ್ಯಗಳ ನಡುವಿನ ವಿವಾದಗಳಲ್ಲಿ ವಿವಿಧ ಸಂಘಟನೆಗಳು ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸುತ್ತಾ ಹೋದರೆ ಇಂತಹ ವ್ಯಾಜ್ಯಗಳಿಗೆ ಕೊನೆಯೇ ಇರುವುದಿಲ್ಲ ಎಂದು ಪೀಠ ಅಭಿಪ್ರಾಯಪಟ್ಟಿತು.

ಈ ಹಿನ್ನೆಲೆಯಲ್ಲಿ ಸಮಿತಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿತು.

# ಓರ್ಝೋನ್ ಅರ್ಬಾನಾ ವಿರುದ್ಧದ ಇಡಿ ಪ್ರಕರಣ ರದ್ದತಿಗೆ ಹೈಕೋರ್ಟ್ ನಕಾರ

ಬೆಂಗಳೂರು,ಸೆ.23–ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ‘ಓರ್ಝೋನ್ ಅರ್ಬಾನಾ’ ಟೌನ್‌ಶಿಪ್ ಅಭಿವೃದ್ಧಿಪಡಿಸುವುದಾಗಿ ಹೇಳಿ ಗ್ರಾಹಕರಿಂದ ಕೋಟ್ಯಂತರ ರೂಪಾಯಿ ಮುಂಗಡ ಪಡೆದು ವಂಚನೆ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಡೆವಲಪರ್ ಕಂಪನಿ ‘ಓರ್ಝೋನ್ ಅರ್ಬಾನಾ ಇನ್ಫ್ರಾ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್’ ವಿರುದ್ಧ ಜಾರಿ ನಿರ್ದೇಶನಾಲಯ (ಇಡಿ) ದಾಖಲಿಸಿರುವ ಪ್ರಕರಣವನ್ನು ರದ್ದುಗೊಳಿಸಲು ಹೈಕೋರ್ಟ್ ನಿರಾಕರಿಸಿದೆ.

ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ವಾಸುದೇವನ್ ಸತ್ಯಮೂರ್ತಿ ಅವರು ತಮ್ಮ ವಿರುದ್ಧದ ಇಡಿ ಪ್ರಕರಣ ರದ್ದು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿ ವಜಾಗೊಳಿಸಿದೆ. ಇದೇ ವೇಳೆ, ಕಂಪನಿ ವಿರುದ್ಧ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿನ ಠೇವಣಿದಾರರ ಹಿತರಕ್ಷಣಾ ಕಾಯ್ದೆ 2004 (ಕೆಪಿಐಡಿ) ಅಡಿ ಪ್ರಕರಣ ಮುಂದುವರಿಸುವ ಪ್ರಕ್ರಿಯೆಯನ್ನು ರದ್ದುಪಡಿಸಿ ಆದೇಶಿಸಿದೆ.

### ಖರೀದಿದಾರರ ವಿಶ್ವಾಸಕ್ಕೆ ಧಕ್ಕೆ

ಮನೆ ಖರೀದಿಸುವ ಉದ್ದೇಶದಿಂದ ಸಾಮಾನ್ಯ ನಾಗರಿಕರು ತಮ್ಮ ಜೀವಮಾನದ ಉಳಿತಾಯವನ್ನು ಹೂಡಿಕೆ ಮಾಡುತ್ತಾರೆ. ಡೆವಲಪರ್ ಮನೆ ಖರೀದಿದಾರರಿಂದ ಸಂಗ್ರಹಿಸಿದ ಹಣವನ್ನು ಬೇರೆಡೆಗೆ ವರ್ಗಾಯಿಸಿರುವ ಆರೋಪ ಎದುರಾದಾಗ, ಅದು ಕೇವಲ ವಿತ್ತೀಯ ವಿಚಾರವಾಗಿ ಉಳಿಯುವುದಿಲ್ಲ. ಇಂತಹ ಪ್ರಕರಣಗಳು ವಾಣಿಜ್ಯ ಮತ್ತು ಆರ್ಥಿಕ ವ್ಯವಸ್ಥೆಯ ಮೇಲಿನ ಸಾರ್ವಜನಿಕರ ವಿಶ್ವಾಸಕ್ಕೂ ಧಕ್ಕೆ ಉಂಟುಮಾಡುತ್ತವೆ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಖರೀದಿದಾರರು ಈಗಾಗಲೇ ರಿಯಲ್ ಎಸ್ಟೇಟ್ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ರೇರಾ), ದಿವಾಳಿತನ ಮತ್ತು ದಿವಾಳಿತನ ಸಂಹಿತೆ 2016 ಸೇರಿದಂತೆ ವಿವಿಧ ಕಾನೂನುಬದ್ಧ ಪರಿಹಾರಗಳನ್ನು ಆಶ್ರಯಿಸಿರುವುದರಿಂದ ಕಂಪನಿ ವಿರುದ್ಧದ ಅಪರಾಧ ಪ್ರಕರಣಗಳನ್ನು ರದ್ದುಗೊಳಿಸಲು ಸಾಧ್ಯವಿಲ್ಲ ಎಂದು ಪೀಠ ತಿಳಿಸಿದೆ.

### 423.38 ಕೋಟಿ ಮೌಲ್ಯದ ಆಸ್ತಿ ಜಪ್ತಿ

ತನಿಖೆಯ ವೇಳೆ ಇಡಿ ಕಂಪನಿಗೆ ಸೇರಿದ 423.38 ಕೋಟಿ ಮೌಲ್ಯದ ಸ್ಥಿರಾಸ್ತಿಗಳನ್ನು ಜಪ್ತಿ ಮಾಡಿದೆ. ವಂಚನೆ ಅಥವಾ ನಂಬಿಕೆಯ ಭಂಗಕ್ಕೆ ಸಂಬಂಧಿಸಿದ ಅಂಶಗಳು ಕಂಡುಬಂದಿರುವ ಸಂದರ್ಭದಲ್ಲಿ ಅಪರಾಧ ತನಿಖೆಯನ್ನು ತಡೆಯಲು ಸಾಧ್ಯವಿಲ್ಲ ಎಂದು ನ್ಯಾಯಾಲಯ ಹೇಳಿದೆ.

ಜಪ್ತಿ ಪ್ರಕ್ರಿಯೆ ಇನ್ನೂ ತಾತ್ಕಾಲಿಕ ಹಂತದಲ್ಲಿರುವುದರಿಂದ ಈ ಹಂತದಲ್ಲಿ ನ್ಯಾಯಾಲಯ ಮಧ್ಯಪ್ರವೇಶಿಸುವುದು ಅಕಾಲಿಕ ಮತ್ತು ಅನಗತ್ಯ ಎಂದು ಪೀಠ ಅಭಿಪ್ರಾಯಪಟ್ಟಿದೆ. ದೊಡ್ಡ ಪ್ರಮಾಣದ ಹಣಕಾಸು ವ್ಯವಹಾರಗಳು ಹಾಗೂ ಮನೆ ಖರೀದಿದಾರರ ಹಕ್ಕುಗಳಿಗೆ ಸಂಬಂಧಿಸಿದ ಆರೋಪಗಳಿರುವ ಹಿನ್ನೆಲೆಯಲ್ಲಿ ತನಿಖೆಯ ಆರಂಭಿಕ ಹಂತದಲ್ಲೇ ನ್ಯಾಯಾಲಯ ಮಧ್ಯಪ್ರವೇಶಿಸುವುದು ಸೂಕ್ತವಲ್ಲ ಎಂದು ತಿಳಿಸಿ ಅರ್ಜಿಯನ್ನು ವಜಾಗೊಳಿಸಿದೆ.

### 180ಕ್ಕೂ ಹೆಚ್ಚು ಖರೀದಿದಾರರಿಂದ ದೂರು

ಯೋಜನೆಯನ್ನು ಪೂರ್ಣಗೊಳಿಸಿ 2015 16ರಲ್ಲೇ ಫ್ಲ್ಯಾಟ್‌ಗಳನ್ನು ಹಂಚಿಕೆ ಮಾಡಬೇಕಾಗಿದ್ದರೂ, ಕಂಪನಿ ಯೋಜನೆ ಪೂರ್ಣಗೊಳಿಸುವಲ್ಲಿ ಹಾಗೂ ಖರೀದಿದಾರರಿಗೆ ಫ್ಲ್ಯಾಟ್‌ಗಳ ಸ್ವಾಧೀನ ನೀಡುವಲ್ಲಿ ವಿಳಂಬ ಮಾಡಿದೆ ಎಂದು ಆರೋಪಿಸಲಾಗಿದೆ.

ಈ ಸಂಬಂಧ 180ಕ್ಕೂ ಹೆಚ್ಚು ಖರೀದಿದಾರರು 2019ರಲ್ಲಿ ಬೆಂಗಳೂರಿನ ವಿವಿಧ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಿಸಿದ್ದರು. ಪ್ರಕರಣಗಳಿಗೆ ಸಂಬಂಧಿಸಿದ ಎಫ್‌ಐಆರ್‌ಗಳಲ್ಲಿ ಕಂಪನಿಯ ಸಿಇಒ ಶ್ರೀನಿವಾಸ ಗೋಪಾಲನ್, ನಿರ್ದೇಶಕರಾದ ವಾಸುದೇವನ್ ಸತ್ಯಮೂರ್ತಿ, ಪ್ರಿಯಾ ವಾಸುದೇವನ್, ರಾಜೀವ್ ಭಂಡಾರಿ, ಶಿವಸಾಗರ್ ನೇಮಿಚನ್, ದರ್ಬುಕುಲ ವಂಶಿ, ಎಸ್. ಭಾಸ್ಕರನ್, ಗ್ರೇಟಾ ಹಾಗೂ ಎಚ್‌ಡಿಎಫ್‌ಸಿ ಬ್ಯಾಂಕ್ ಅಧಿಕಾರಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ?1860ರ ಕಲಂ 419, 420 ಮತ್ತು 120ಬಿ ಅಡಿ ಪ್ರಕರಣ ದಾಖಲಿಸಲಾಗಿತ್ತು.

ಈ ಪ್ರಕರಣಗಳ ಆಧಾರದ ಮೇಲೆ ಇಡಿ 2025ರ ಅಕ್ಟೋಬರ್ 4ರಂದು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ 2002 (ಪಿಎಂಎಲ್‌ಎ) ಅಡಿ ಇಸಿಐಆರ್ ದಾಖಲಿಸಿ ತನಿಖೆ ಆರಂಭಿಸಿತ್ತು.



ಐಎನ್‌ಟಿಯುಸಿ ಯ ರಾಷ್ಟ್ರೀಯ ಅಧ್ಯಕ್ಷ ಡಾ. ಜಿ ಸಂಜೀವ್ ರೆಡ್ಡಿರವರ ಹೈದರಾಬಾದ್ ನಲ್ಲಿರುವ ಅವರ ಸ್ವಗೃಹದಲ್ಲಿ ಭೇಟಿ ಮಾಡಿ ಪ್ರಸಕ್ತ ಬೆಳವಣಿಗೆಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿದರು. ಈ ಸಮಯದಲ್ಲಿ ಕಾರ್ನಾಟಕ ರಾಜ್ಯ ಐಎನ್‌ಟಿಸಿ ಉಪಾಧ್ಯಕ್ಷರಾದ ವೆಂಕಟರಾಮರೆಡ್ಡಿ, ಸಂಘಟನಾ ಕಾರ್ಯದರ್ಶಿಗಳಾದ ಜೆ. ಪಾಲ್, ಬೆಂಗಳೂರು ನಗರ ಪ್ರಧಾನ ಕಾರ್ಯದರ್ಶಿಗಳಾದ ವೆಂಕಟೇಶ್ವರ ಅರ್ ಉಪಸ್ಥಿತರಿದ್ದರು.

# ವಿಶ್ವಕರ್ಮ ಮಹೋತ್ಸವ ಆಚರಣೆ

ಬೆಂಗಳೂರುಸೆ.23–ಗೋವಿಂದರಾಜ ನಗರ ಕ್ಷೇತ್ರದಲ್ಲಿ ಜೈ ಕರ್ನಾಟಕ ವಿಶ್ವಕರ್ಮ ಸಮಾಜ ಸೇವಾ ಸಂಘದವತಿಯಿಂದ ಆಯೋಜಿಸಿದ್ದ ಶ್ರೀ ಭಗವಾನ ವಿಶ್ವಕರ್ಮ ಮಹೋತ್ಸವನ್ನು ಪೂಜಾ ವಿಧಿವಿಧಾನಗಳನ್ನು ಸಮಾಜದ ಸಮಸ್ತರು ಭಾಗಿಯಾಗಿ ಸಂಭ್ರಮಿಸಿದರು ಅಲ್ಲದೆ ವಿಶ್ವಕರ್ಮ ಸಮುದಾಯದ ಗೋವಿಂದ ರಾಜ ನಗರ ಕ್ಷೇತ್ರದ ವಾಸಿಗಳಿಗೆ ಸರಕಾರದ ಹಿಂದುಳಿದ ವರ್ಗಗಳ ಇಲಾಖೆ ಸೌಲತ್ತುಗಳು ಇತರ ಯೋಜನೆಗಳ ಕಲ್ಪಿಸಲು ವಿಶ್ವಕರ್ಮ ಮಹಾ ಒಕ್ಕೂಟದ ರಾಜ್ಯಧ್ಯಕ್ಷರು ಶಾಸಕರ ಗಮನ ತಂದರು..ಈ ಸಂದರ್ಭದಲ್ಲಿ ಗೋವಿಂದರಾಜ ನಗರ ಕ್ಷೇತ್ರದ ಶಾಸಕರು ಕ್ಷೇತ್ರದಲ್ಲಿ ನೆಲೆಸಿರುವ ವಿಶ್ವಕರ್ಮ ಸಮುದಾಯದ ಬಡವರಿಗೆ, ವಸತಿ, ಸರಕಾರದ ವಿವಿಧ ಯೋಜನೆಗಳನ್ನು ಕಲ್ಪಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದು ಎಂದು ಮುಖಂಡರಿಗೆ ಭರವಸೆ ನೀಡಿದರು..

ಈ ಸಂದರ್ಭದಲ್ಲಿ ಗೋವಿಂದ ರಾಜ ನಗರ ವಾರ್ಡಿನಲ್ಲಿ ಜೈ ಕರ್ನಾಟಕ ವಿಶ್ವಕರ್ಮ ಸಮಾಜ ಸೇವಾ ಸಂಘದ ಕಚೇರಿಯನ್ನು ಉದ್ಘಾಟಿಸಿದರು..ಈ ಸಂದರ್ಭದಲ್ಲಿ ವಿಶ್ವಕರ್ಮ ನಿಗಮದ ಅಧ್ಯಕ್ಷರದ ಸುಜ್ಞಾನ ಮೂರ್ತಿ, ಕಾರ್ಮಿಕ ಒಕ್ಕೂಟದ ದೇವರಾಜ, ಕಾಂಗ್ರೇಸ ಹಿರಿಯ ಮುಖಂಡರು ಹಾಗೂ ಸಮಾಜದ ಹಿತೈಷಿಗಳಾದ ಉಮಾಶಂಕರ, ಸಮಾಜದ ಅಧ್ಯಕ್ಷರಾದ ಅಂಬದಾಸ, ವೀರಣ್ಣ ಕಮಾಲಕರ, ರಾಜಶೇಖರ, ತರುಣಕುಮಾರ ಉಮೇಶ, ಇತರ ಸಮಾಜ ಮುಖಂಡರು ಉಪಸ್ಥಿತರಿದ್ದರು..



ಬೆಂಗಳೂರು ಬುಧವಾರ 23 ಸೆಪ್ಟೆಂಬರ್ 2026 I ಸಂಪುಟ 44 I ಸಂಚಿಕೆ 282 ಪುಟ 8 I ಬೆಲೆ 3.00

Sanjevani Kannada Daily I Bangalore I Wednesday I 23 September 2026 I Vol: 44 Issue 282 I Pages 8 I RNINo:36667/82 I Rs. 3.00

# ಸಂಜೆವಾಣಿ

1982

ಬೆಂಗಳೂರು - ಹುಬ್ಬಳ್ಳಿ - ಕಲಬುರಗಿ - ಬಳ್ಳಾರಿ - ಮೈಸೂರು - ಮಂಗಳೂರು - ರಾಯಚೂರು - ದಾವಣಗೆರೆ - ಶಿವಮೊಗ್ಗ

www.sanjevani.com contact @sanjevani.com PH: 080 22868882




# ಕೈ ಶಾಸಕನ ರಾಜೀನಾಮೆ

## ಬರಪೀಡಿತ ತಾಲ್ಲೂಕುಗಳ ಪಟ್ಟಿಗೆ ಇಂಡಿ ಸೇರಿಸದಿದ್ದಕ್ಕೆ ಬೇಸರ: ಸ್ಪೀಕರ್‌ಗೆ ಯಶವಂತರಾಯಗೌಡ ರಾಜೀನಾಮೆ ಸಲ್ಲಿಕೆ




**ಬೆಂಗಳೂರು,ಸೆ.23-** ಬರ ಪೀಡಿತ ತಾಲ್ಲೂಕುಗಳ ಪಟ್ಟಿಯಿಂದ ಇಂಡಿ ಮತ್ತು ಚಡಚಣ ತಾಲ್ಲೂಕು ಕೈ ಬಿಟ್ಟಿರುವುದಕ್ಕೆ ಬೇಸರಗೊಂಡು ಕಾಂಗ್ರೆಸ್‌ನ ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲ್ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ವಿಧಾನಸಭೆಯ ಅಧಿವೇಶನ ನಡೆಯುತ್ತಿರುವ


ಯಶವಂತರಾಯಗೌಡ ವಿ. ಪಾಟೀಲ
ಶಾಸಕರು,
ಇಂಡಿ ಮತಕ್ಷೇತ್ರ, ವಿಜಯಪುರ
ಕರ್ನಾಟಕ

Yashvanthraygoud V. Patil
M.L.A.
Indi Constituency
Vijayapura
Karnataka

ಕ್ರಮಾಂಕ : MLA/Indi/ 504 / 2026-27 ದಿನಾಂಕ: 22/09/2026

ಗೆ,
ಮಾನ್ಯ ಶ್ರೀ ಜಿ.ಎಸ್ ಪಾಟೀಲ್‌ರವರು,
ಮಾನ್ಯ ಸಭಾಧ್ಯಕ್ಷರು,
ಕರ್ನಾಟಕ ವಿಧಾನಸಭೆ, ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ:- ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿರುವ ಬಗ್ಗೆ.

[illegible]

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ,

(ಯಶವಂತರಾಯಗೌಡ ವಿ. ಪಾಟೀಲ)

Mobile : 9483120999, LH-4, Room No. 337, Bangalore E-mail: yypatilmlaofficebng@gmail.com



ಸಂದರ್ಭದಲ್ಲೇ ಅವರು ಇಂದು ವಿಧಾನಸಭಾಧ್ಯಕ್ಷ ಜಿ.ಎಸ್. ಪಾಟೀಲ್ ರವರನ್ನು ಭೇಟಿ ಮಾಡಿ ಶಾಸಕ ಸ್ಥಾನಕ್ಕೆ ರಾಜೀನಾಮೆ ಪತ್ರವನ್ನು ಸಲ್ಲಿಸಿದ್ದಾರೆ.

ರಾಜ್ಯ ಸರ್ಕಾರಕ್ಕೆ ಹಲವು ಬಾರಿ ಮನವಿ ಮಾಡಿದರೂ ಇಂಡಿ ಹಾಗೂ ಚಡಚಣ ತಾಲ್ಲೂಕು ಬರ ಘೋಷಣೆಯಾಗಿಲ್ಲ. ನಮ್ಮ ಮಾತಿಗೆ, ನಮ್ಮ ಭಾವನೆಗಳಿಗೆ ಬೆಲೆ ಇಲ್ಲದಂತಾಗಿದೆ. ಹಾಗಾಗಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ ಎಂದು ಅವರು ಹೇಳಿದ್ದಾರೆ.

ಈಗಿನ ರಾಜಕೀಯ ವಾತಾವರಣದಲ್ಲಿ ಬಲಾಢ್ಯರಿಗೆ, ಒತ್ತಡ ತಂತ್ರಗಳನ್ನು ಹೆಣೆಯುವವರಿಗೆ ಮನ್ನಣೆ ಇದೆ. ನಮ್ಮಂತಹ

ಪುಟ 7

## ರಾಜೀನಾಮೆ ಪತ್ರ: ವಿಧಾನಸಭೆಯಲ್ಲಿ ಗದ್ದಲ, ಕೋಲಾಹಲ

ಶಾಸಕ ಸ್ಥಾನಕ್ಕೆ ಯಶವಂತರಾಯಗೌಡ ಪಾಟೀಲ್ ರಾಜೀನಾಮೆ ನೀಡಿರುವ ವಿಚಾರದಲ್ಲಿ ವಿಧಾನಸಭೆಯಲ್ಲಿಂದು ಪ್ರಸ್ತಾಪವಾಗಿ ಆಡಳಿತ ಮತ್ತು ವಿಪಕ್ಷ ಸದಸ್ಯರ ನಡುವೆ ವಾಕ್ಸಮರವೇ ನಡೆದು ಸದನದಲ್ಲಿ ಗದ್ದಲ, ಕೋಲಾಹಲದ ವಾತಾವರಣ ರೂಪುಗೊಂಡಿತು.

ರಾಜ್ಯದ ಬರ ಪರಿಸ್ಥಿತಿಯ ಬಗ್ಗೆ ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ್ ಅವರು, ವಿಧಾನಸಭೆಯಲ್ಲಿ ಶಾಸಕ ಯಶವಂತರಾಯಗೌಡ ಪಾಟೀಲ್ ರವರ ರಾಜೀನಾಮೆ ವಿಷಯವನ್ನು ಪ್ರಸ್ತಾಪಿಸಿ, ಅವರು ರಾಜೀನಾಮೆ ನೀಡಿರುವ ಪತ್ರದ ಪ್ರತಿಯನ್ನು ಪ್ರದರ್ಶಿಸಿ, ಕಾಂಗ್ರೆಸ್ ಪಕ್ಷದ ಶಾಸಕರೇ ರಾಜೀನಾಮೆ ಕೊಟ್ಟಿದ್ದಾರೆ. ಈ ಸರ್ಕಾರಕ್ಕೆ ನಾಚಿಕೆ ಆಗಬೇಕು. ಬರ ನಿರ್ವಹಣೆಯಲ್ಲಿ ಈ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಹೇಳಿದಾಗ, ವಿಪಕ್ಷ ಸದಸ್ಯರುಗಳೆಲ್ಲಾ ಶೇಮ್.. ಶೇಮ್.. ಎಂದು ಕೂಗಿದರು.

ಈ ಹಂತದಲ್ಲಿ ಆಡಳಿತ ಮತ್ತು ವಿಪಕ್ಷ ಸದಸ್ಯರ ನಡುವೆ ದೊಡ್ಡಮಟ್ಟದ ಮಾತಿನ ಚಕಮಕಿ ನಡೆಯಿತು.

ಸಚಿವರಾದ ಯು.ಟಿ. ಖಾದರ್, ನರೇಂದ್ರ ಸ್ವಾಮಿ ಇವರುಗಳು ಎದ್ದುನಿಂತು ಇದು ನಮ್ಮ ಪಕ್ಷದ ವಿಚಾರ. ಅವರು ರಾಜೀನಾಮೆ ಕೊಟ್ಟಿದ್ದರೆ ನಮ್ಮ ಪಕ್ಷ ನೋಡಿಕೊಳ್ಳುತ್ತದೆ, ನಿಮಗೇಕೆ ಎಂದು ಹೇಳಿದರಾದರೂ ವಿಪಕ್ಷ ಸದಸ್ಯರು ಸರ್ಕಾರದ ವಿರುದ್ಧ ರಾಜೀನಾಮೆ ವಿಚಾರವನ್ನು ಮುಂದಿಟ್ಟುಕೊಂಡು ವಾಗ್ದಾಳಿ ನಡೆಸಿದರು.

ಗದ್ದಲದ ನಡುವೆಯೇ ಮಾತನಾಡಿದ ಬಿಜೆಪಿಯ ಸುನೀಲ್‌ಕುಮಾರ್ ರವರು ಸದನ ನಡೆಯುತ್ತಿದೆ. ರಾಜೀನಾಮೆ ಬಗ್ಗೆ ಸಭಾಧ್ಯಕ್ಷರು ಸದನಕ್ಕೆ ಮಾಹಿತಿ ಕೊಡಬೇಕು ಎಂದು ಮನವಿ ಮಾಡಿದರು.

ಸದನ ನಡೆಯುವಾಗ ರಾಜೀನಾಮೆ ಕೊಟ್ಟಿರುವುದು ಸರ್ಕಾರಕ್ಕೆ ದೊಡ್ಡ ಅಪಮಾನ. ಇದಕ್ಕಿಂತ ದೊಡ್ಡ ಅಪಮಾನ ಇನ್ನೊಂದಿಲ್ಲ ಎಂದರು.

ಪ್ರತಿಪಕ್ಷಗಳ ಮಾತಿಗೆ ತಿರುಗೇಟು ನೀಡಿದ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಇದಕ್ಕೆಲ್ಲಾ ನಿಮ್ಮ ಕೇಂದ್ರ ಸರ್ಕಾರವೇ ಕಾರಣ ಎಂದು ಹೇಳಿದ್ದು ಮತ್ತೆ ಸದನದಲ್ಲಿ ಆಡಳಿತ ಮತ್ತು ವಿಪಕ್ಷ ಸದಸ್ಯರ ನಡುವೆ ಮಾತಿನ ಚಕಮಕಿಗೆ ಕಾರಣವಾಯಿತು.

ನಂತರ ಮಾತು ಮುಂದುವರೆಸಿದ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್, ಕೇಂದ್ರ ಸರ್ಕಾರದ ಕೆಲವು ಮಾನದಂಡಗಳಿಂದ ಕೆಲವು ತಾಲ್ಲೂಕುಗಳನ್ನು ಬರಪೀಡಿತ ಪಟ್ಟಿಗೆ ಸೇರಿಸಲು ಆಗುತ್ತಿಲ್ಲ. ನಾವು ಪತ್ರ ಬರೆದಿದ್ದರೂ ಕೇಂದ್ರ ಸರ್ಕಾರ ನಿಯಮಾವಳಿಗಳಲ್ಲಿ ರಿಯಾಯ್ತಿ ನೀಡುತ್ತಿಲ್ಲ ಎಂದು ಹೇಳಿದರು.

ಈ ಹಂತದಲ್ಲಿ ಮಧ್ಯೆ ಪ್ರವೇಶಿಸಿ ಮಾತನಾಡಿದ ವಿಪಕ್ಷ ನಾಯಕ ಆರ್. ಅಶೋಕ್, ಈ ನಿಯಮಾವಳಿಗಳನ್ನು ಮಾಡಿದ್ದೇ ನಿಮ್ಮ ಯುಪಿಎ ಸರ್ಕಾರ ಎಂದರು.

ಈ ಹಂತದಲ್ಲಿ ಮತ್ತೆ ಆಡಳಿತ ಮತ್ತು ಪ್ರತಿಪಕ್ಷಗಳ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು. ಪ್ರತಿಪಕ್ಷ ನಾಯಕ ಆರ್. ಅಶೋಕ್ ಎದ್ದುನಿಂತು ಶಾಸಕರು ರಾಜೀನಾಮೆ ನೀಡಿದ್ದಾರೋ,

ಪುಟ 7

## ಎಸ್‌ಐಆರ್ ಭಿನ್ನಾಭಿಪ್ರಾಯವಿಲ್ಲ: ಆಯೋಗದ ಸ್ಪಷ್ಟನೆ



**ನವದೆಹಲಿ, ಸೆ. 23-** ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಖಐಖ) ವಿಚಾರದಲ್ಲಿ ಚುನಾವಣಾ ಆಯೋಗದೊಳಗೆ ಆಂತರಿಕ ಭಿನ್ನಾಭಿಪ್ರಾಯ ಉಂಟಾಗಿದೆ ಎಂಬ ವರದಿಗಳನ್ನು ಚುನಾವಣಾ ಆಯೋಗದ ಮೂಲಗಳು ತಳ್ಳಿಹಾಕಿವೆ. ಎಸ್‌ಐಆರ್ ಸೇರಿದಂತೆ ಆಯೋಗ ಕೈಗೊಂಡಿರುವ ಎಲ್ಲ ನಿರ್ಧಾರಗಳೂ ಮುಖ್ಯ ಚುನಾವಣಾ ಆಯುಕ್ತ (ಅಇಅ) ಜ್ಞಾನೇಶ್ ಕುಮಾರ್ ಹಾಗೂ ಇಬ್ಬರು ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಅವರ ಅನುಮೋದನೆಯೊಂದಿಗೆ ಸರ್ವಾನುಮತದಿಂದಲೇ ಕೈಗೊಳ್ಳಲಾಗಿದೆ ಎಂದು ಮೂಲಗಳು ಸ್ಪಷ್ಟಪಡಿಸಿವೆ.

ಚುನಾವಣಾ ಆಯೋಗದ ಮೂಲಗಳ ಪ್ರಕಾರ, ಯಾವುದೇ ವಿಷಯದಲ್ಲಿ ಆಯುಕ್ತರಿಗೆ ವೈಯಕ್ತಿಕ ಅಭಿಪ್ರಾಯಗಳಿರಬಹುದು. ಆದರೆ ಆಯೋಗದ ಅಂತಿಮ ನಿರ್ಧಾರಗಳು ಸರ್ವಾನುಮತದಿಂದಲೇ ಆಗಿವೆ. ಈ ಸ್ಪಷ್ಟನೆ, ಇಬ್ಬರು ಚುನಾವಣಾ ಆಯುಕ್ತರು ಹಲವು ನಿರ್ಧಾರಗಳಿಗೆ ಆಕ್ಷೇಪ ವ್ಯಕ್ತಪಡಿಸಿದ್ದರು ಎಂಬ ದಿ ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಹಿನ್ನೆಲೆಯಲ್ಲಿ ಬಂದಿದೆ.

ದಿ ಇಂಡಿಯನ್ ಎಕ್ಸ್‌ಪ್ರೆಸ್ ತನಿಖಾ ವರದಿ ಪ್ರಕಾರ, ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಹಾಗೂ ವಿವೇಕ್ ಜೋಶಿ ಅವರು ಕಳೆದ 10 ತಿಂಗಳಲ್ಲಿ ಕನಿಷ್ಠ 14 ಬಾರಿ ಆಯೋಗದ ಕೆಲವು

ಪುಟ 7

## ಸದನಕ್ಕೆ ಸಚಿವರು, ಶಾಸಕರ ಗೈರು ವಿಪಕ್ಷಗಳ ಆಕ್ರೋಶ

**ಬೆಂಗಳೂರು,ಸೆ.23-** ವಿಧಾನಸಭೆಯಲ್ಲಿಂದು ಆಡಳಿತ ಪಕ್ಷದ ಬಹುತೇಕ ಸಚಿವರು ಹಾಗೂ ಶಾಸಕರ ಗೈರು ಹಾಜರಿ ವಿಪಕ್ಷಗಳ ಆಕ್ಷೇಪ, ಆಕ್ರೋಶಕ್ಕೆ ಕಾರಣವಾಗಿ ಸದನವನ್ನು 10 ನಿಮಿಷ ಕಾಲ ಮುಂದೂಡಲಾಯಿತು.

ಇಂದು ವಿಧಾನಸಭೆ ಆರಂಭವಾಗುತ್ತಿದ್ದಂತೆಯೇ ಸಭಾಧ್ಯಕ್ಷ ಜಿ.ಎಸ್. ಪಾಟೀಲ್ ರವರು ದಾದಾ ಸಾಹೇಬ್ ಪಾಲ್ಕೆ ಪ್ರಶಸ್ತಿ ಪುರಸ್ಕೃತರಾದ ನಟ ಅನಂತ್‌ನಾಗ್ ಅವರ ಅಭಿನಂದನಾ ಕಲಾಪವನ್ನು ಕೈಗೆತ್ತಿಗೊಂಡಾಗ ಆಡಳಿತ ಪಕ್ಷದ 10– 12 ಶಾಸಕರು, ಸಚಿವರಾದ ಕೃಷ್ಣಬೈರೇಗೌಡ, ಸಂತೋಷ್ ಲಾಡ್, ಕುಮಾರ್ ಬಂಗಾರಪ್ಪ ಮಾತ್ರ ಸದನದಲ್ಲಿ ಹಾಜರಿದ್ದರು. ಇದರಿಂದ ಕೆರಳಿ, ಕೆಂಡಮಂಡಲವಾದ ವಿಪಕ್ಷ ನಾಯಕ ಆರ್. ಅಶೋಕ್, ಸದನ ಖಾಲಿ ಖಾಲಿ, ಮಂತ್ರಿಗಳೇ ಇಲ್ಲ. ಸದನ ಖಾಲಿ ಇರುವಾಗ ನಟ ಅನಂತ್‌ನಾಗ್ ಅವರಿಗೆ ಅಭಿನಂದಿಸುವ ಕಲಾಪ ಸರಿಯಲ್ಲ. ಸಭಾಧ್ಯಕ್ಷರೇ ಸದನವನ್ನು 10 ನಿಮಿಷ ಮುಂದೂಡಿ ಎಂದು ಒತ್ತಾಯಿಸಿದರು.

ಸಚಿವರುಗಳು, ಆಡಳಿತ ಪಕ್ಷದ ಸದಸ್ಯರು ಸದನಕ್ಕೆ ಬರಲ್ಲ. ಸದನವನ್ನು ಖಾಲಿ ಇಟ್ಟು–ಕೊಂಡು ನಟ ಅನಂತ್‌ನಾಗ್ ಅವರಿಗೆ ಗೌರವ ಸಲ್ಲಿಸುವುದು ಬೇಡ. ನಾಳೆ ಪತ್ರಿಕೆಗಳಲ್ಲಿ ಖಾಲಿ ಖಾಲಿ ಸದನದಲ್ಲೇ ನಟ ಅನಂತ್‌ನಾಗ್ ಅವರಿಗೆ ಅಭಿನಂದನೆ ಎಂಬ ವರದಿಗಳು ಬರುತ್ತವೆ. ಹಾಗಾಗಿ ಖಾಲಿ ಸದನವನ್ನು ಇಟ್ಟುಕೊಂಡು ಅಭಿನಂದನಾ ಕಲಾಪ ಬೇಡ ಇದು ನಿಮಗೆ ಗೌರವ ತರುವುದಿಲ್ಲ. ದಯವಿಟ್ಟು

ಪುಟ 7

## ಖಜಾನೆ ಖಾಲಿ: ಸಿಎಂ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಧರಣಿ

**ಬೆಂಗಳೂರು,ಸೆ.23-** ರಾಜ್ಯ ಸರ್ಕಾರದ ಖಜಾನೆ ಖಾಲಿಯಾಗಿದೆ. ಆರ್ಥಿಕತೆ ನಿರ್ವಹಣೆಯಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಫಲರಾಗಿದ್ದು, ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಬಿಜೆಪಿ ಮತ್ತು ಜೆಡಿಎಸ್‌ನ ಶಾಸಕರುಗಳು ವಿಧಾನಸೌಧದ ಮುಂದೆ ಧರಣಿ ನಡೆಸಿದರು.

ವಿಧಾನಸೌಧದ ಮುಂಭಾಗದಲ್ಲಿರುವ ಕೆಂಗಲ್ ಹನುಮಂತಯ್ಯ ಪ್ರತಿಮೆ ಬಳಿ ಬಿಜೆಪಿ ಮತ್ತು ಜೆಡಿಎಸ್‌ನ ಎಲ್ಲಾ ವಿಧಾನಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರುಗಳು ಪ್ರತಿಪಕ್ಷ ನಾಯಕರುಗಳಾದ ಆರ್.ಅಶೋಕ್, ಛಲವಾದಿ ನಾರಾಯಣಸ್ವಾಮಿ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವರ ರಾಜೀನಾಮೆಗೆ ಆಗ್ರಹಿಸಿ ಘೋಷಣೆಗಳನ್ನು ಕೂಗಿದರು.

ರಾಜ್ಯದ ಖಜಾನೆ ಖಾಲಿಯಾಗಿರುವುದನ್ನು ಸಂಕೇತಿಸಲು ಪ್ರತಿಭಟನಾನಿರತ ಬಿಜೆಪಿ ಮತ್ತು ಜೆಡಿಎಸ್ ಶಾಸಕರುಗಳು ಖಾಲಿ ಚೆಂಬು, ತೆಂಗಿನ ಚಿಪ್ಪುಗಳನ್ನು ಹಿಡಿದು ಪ್ರತಿಭಟನೆ ನಡೆಸಿದ್ದು ವಿಶೇಷವಾಗಿತ್ತು.

ರಾಜ್ಯ ಆರ್ಥಿಕ ಇಲಾಖೆಯೇ ಸರ್ಕಾರದಲ್ಲಿ ದುಡ್ಡಿಲ್ಲ ಎಂದು ಪತ್ರ ಬರೆದಿದೆ. ಸರ್ಕಾರ ಪಾಪರ್ ಆಗಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವರಿಗೆ ಆರ್ಥಿಕ ಇಲಾಖೆ ಮೇಲೆ ನಿಯಂತ್ರಣ ಇಲ್ಲ.

ಪುಟ 7

### ಸಿಎಂ ರಾಜೀನಾಮೆಗೆ ಆಗ್ರಹ

ಈ ಪ್ರತಿಭಟನೆ ಸಂದರ್ಭದಲ್ಲಿ ಮಾತನಾಡಿದ ಪ್ರತಿಪಕ್ಷ ನಾಯಕ ಆರ್. ಅಶೋಕ್, ಹಣಕಾಸು ಇಲಾಖೆ ನಿಭಾಯಿಸಲು ಮುಖ್ಯಮಂತ್ರಿಗಳಿಂದ ಆಗುತ್ತಿಲ್ಲ. ಡಿ.ಕೆ. ಶಿವಕುಮಾರ್ ರವರು ಮುಖ್ಯಮಂತ್ರಿ ಆಗಿರಲು ಲಾಯಕ್ ಇಲ್ಲ. ತಕ್ಷಣವೇ ರಾಜೀನಾಮೆ ಕೊಡಬೇಕು ಎಂದು ಆಗ್ರಹಿಸಿದರು.

ಇದು ಪಾಪರ್ ಸರ್ಕಾರ, ಇವತ್ತು ಕರ್ನಾಟಕದಲ್ಲಿ ಸರ್ಕಾರ ನಡೆಸುವಂತಹ ಯೋಗ್ಯತೆಯನ್ನು ಕಾಂಗ್ರೆಸ್ ಕಳೆದುಕೊಂಡಿದೆ. ಡಿ.ಕೆ. ಶಿವಕುಮಾರ್ ಸರ್ಕಾರ ದಿವಾಳಿ ಆಗಿರುವುದಕ್ಕೆ ಹಣಕಾಸು ಇಲಾಖೆಯವರು ಶ್ವೇತಪತ್ರ ಬಿಡುಗಡೆ ಮಾಡಿ ಬಿಟ್ಟಿದ್ದಾರೆ ಎಂದು ಹೇಳಿದರು.

ಡಿ.ಕೆ. ಶಿವಕುಮಾರ್ ರವರು ಮೊನ್ನೆ ಮಂಗಳೂರಿಗೆ ಹೋಗಿ 32 ಸಾವಿರ ಕೋಟಿ ರೂ. ಅಭಿವೃದ್ಧಿಗೆ ಘೋಷಿಸಿದರು. ಹಿಂದೆ ಸಿದ್ದರಾಮಯ್ಯ ಸಹ ಸಾವಿರಾರು ಕೋಟಿ ಅಭಿವೃದ್ಧಿಗೆ ಘೋಷಣೆ ಮಾಡಿದ್ದರು. ಆದರೆ ಸರ್ಕಾರದಲ್ಲಿ ಹಣವೇ ಇಲ್ಲ. ಬರ ಪರಿಹಾರ ಕಾರ್ಯಕ್ಕೆ ದುಡ್ಡು ಕೊಡಲು ಆಗುತ್ತಿಲ್ಲ ಎಂದು ವಾಗ್ದಾಳಿ ನಡೆಸಿದರು.

ಪುಟ 7

## ಮನೆ ಮನೆಗೆ ಪೊಲೀಸ್‌ಗೆ ಒಂದು ವರ್ಷ

**ಬೆಂಗಳೂರು, ಸೆ. 23-** ಸಾರ್ವಜನಿಕರು ಮತ್ತು ಪೊಲೀಸರ ನಡುವಿನ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ದೇಶದಲ್ಲೇ ಮೊಟ್ಟಮೊದಲ ಬಾರಿಗೆ ರಾಜ್ಯ ಸರ್ಕಾರ ಜಾರಿಗೆ ತಂದಿರುವ 'ಮನೆ ಮನೆಗೆ ಪೊಲೀಸ್' ಯೋಜನೆಯು ಒಂದು ವರ್ಷ ಪೂರೈಸಿದೆ.

ಕಳೆದ 2025ರ ಜುಲೈ 18 ರಂದು ರಾಜಧಾನಿ ಬೆಂಗಳೂರಿನಲ್ಲಿ ಆರಂಭಗೊಂಡ ಮನೆ ಮನೆಗೆ ಪೊಲೀಸ್ ಯೋಜನೆಗೆ ನಿರೀಕ್ಷಿತ ಯಶಸ್ಸು ದೊರೆಯದೇ ಇದ್ದರೂ ಜನ ಸಾಮಾನ್ಯರಲ್ಲಿ ಪೊಲೀಸ್ ಠಾಣೆ, ಪೊಲೀಸ್ ಎಂದರೆ ಭಯ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿ ಕಾನೂನಿನ ಅರಿವು ಹೆಚ್ಚಾಗಿದೆ.

ಇದರ ಜೊತೆಗೆ ಕಾನೂನು ಬಾಹಿರ ಚಟುವಟಿಕೆಗಳನ್ನು ಹತ್ತಿಕ್ಕಿ ಯಾವುದೇ ರೀತಿಯ ಅಪರಾಧ ಕೃತ್ಯ ನಡೆದ ತಕ್ಷಣವೇ ಸ್ಥಳಕ್ಕೆ ಧಾವಿಸುವುದು ಸ್ಥಳೀಯವಾಗಿ ಶಾಂತಿ ಸುವ್ಯವಸ್ಥೆ ನೆಲೆಸಲು ನಗರದಲ್ಲಿ ಮನೆ ಮನೆಗೆ ಪೊಲೀಸ್ ಯೋಜನೆ ಯಶಸ್ವಿಯಾಗಿದೆ.




ಪ್ರತಿ ಮನೆಗೂ ಪೊಲೀಸರು ಭೇಟಿ ನೀಡಿ, ಜನರ ಸಮಸ್ಯೆಗಳನ್ನು ಆಲಿಸುವುದು, ಕಾನೂನಿಗೆ ಸಂಬಂಧಿತ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸಲು ಮತ್ತು ಪೊಲೀಸ್ ಇಲಾಖೆಗೆ ಅಗತ್ಯವಿರುವ ಮಾಹಿತಿಯನ್ನು ಸಂಗ್ರಹಿಸಲು ಮನೆ ಮನೆಗೆ ಪೊಲೀಸ್ ಯೋಜನೆಯಿಂದ ಸಹಾಯವಾಗಿದೆ.

ಯೋಜನೆಯಿಂದ ಸಾರ್ವಜನಿಕರೊಂದಿಗೆ ಪೊಲೀಸರು ಉತ್ತಮ ಹಾಗೂ ಸ್ನೇಹಪರ ಸಂಬಂಧವನ್ನು ಬೆಸೆದುಕೊಳ್ಳಲು ಅನುಕೂಲಕರ ವಾತಾವರಣ ನಿರ್ಮಾಣವಾಗುತ್ತದೆ. ಸ್ಥಳೀಯರಿಂದ ಸೂಕ್ಷ್ಮ ಮಾಹಿತಿಗಳನ್ನು ಪಡೆದುಕೊಳ್ಳಲು, ಅಪರಾಧಗಳನ್ನು ತಡೆಯಲು ಹಾಗೂ ಅಪರಾಧ ಪ್ರಕರಣಗಳನ್ನು ಪರಿಣಾಮಕಾರಿಯಾಗಿ

ಪುಟ 7

## ಬರ ಪರಿಹಾರ: ಕೇಂದ್ರಕ್ಕೆ ಡಿಕೆಶಿ ಆಗ್ರಹ

**ಬೆಂಗಳೂರು, ಸೆ.23-** ರಾಜ್ಯದಲ್ಲಿ ಬರ ಪರಿಸ್ಥಿತಿಯಿಂದ ರೈತರು ಹಾಗೂ ಕೃಷಿ ಕೂಲಿ ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದ್ದು, ಕೇಂದ್ರ ಸರ್ಕಾರ ಕರ್ನಾಟಕಕ್ಕೆ ಸೂಕ್ತ ಪರಿಹಾರ ನೀಡಬೇಕು ಎಂದು ಕಾಂಗ್ರೆಸ್ ಸದಸ್ಯ ಶಿವಕುಮಾರ್ ಒತ್ತಾಯಿಸಿದರು.

ವಿಧಾನ ಪರಿಷತ್‌ನಲ್ಲಿ ಬರ ಪರಿಸ್ಥಿತಿ ಕುರಿತು ಮಾತನಾಡಿದ ಅವರು, ರಾಜ್ಯದ ಹಲವು ಭಾಗಗಳಲ್ಲಿ ಕೃಷಿ ಮೇಲೆ ಬರದ ಪರಿಣಾಮ ತೀವ್ರವಾಗಿದ್ದು, ಕಬ್ಬು ಬೆಳೆ ಇಳುವರಿ ಗಣನೀಯವಾಗಿ ಕುಸಿದಿದೆ. ಇಳುವರಿ ಕಡಿಮೆಯಿಂದ ನಷ್ಟ ಅನುಭವಿಸುತ್ತಿರುವ ರೈತರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಎನ್‌ಡಿಆರ್‌ಎಫ್ ನಿಯಮಗಳನ್ನು ಪರಿಷ್ಕರಿಸುವ ಅಗತ್ಯವಿದೆ. ಕೇವಲ ಉಪಗ್ರಹ ಆಧರಿತ ಪರಿಶೀಲನೆಗೆ ಒತ್ತು ನೀಡದೆ, ಅಧಿಕಾರಿಗಳು ಸ್ಥಳಕ್ಕೆ ತೆರಳಿ ವಾಸ್ತವ ಪರಿಸ್ಥಿತಿಯನ್ನು ಪರಿಶೀಲಿಸಿ ವರದಿ ಸಲ್ಲಿಸುವ ವ್ಯವಸ್ಥೆ ಜಾರಿಗೆ ಬರಬೇಕು ಎಂದು ಅವರು ಮನವಿ ಮಾಡಿದರು.

ರಾಜ್ಯದ ಹಲವು ಪ್ರದೇಶಗಳಲ್ಲಿ ಕುಡಿಯುವ ನೀರಿಗೂ ಸಮಸ್ಯೆ ಎದುರಾಗಿದ್ದು, ಟ್ಯಾಂಕರ್ ಮೂಲಕ ನೀರು ಪೂರೈಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದೇ ಪರಿಸ್ಥಿತಿ ಮುಂದುವರಿದರೆ ರೈತರು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಲಿದ್ದಾರೆ. ಹೀಗಾಗಿ ಕೇಂದ್ರ ಸರ್ಕಾರ ರಾಜ್ಯಕ್ಕೆ ಅಗತ್ಯ ನೆರವು ನೀಡಬೇಕು ಎಂದು ಹೇಳಿದರು.

ಕೃಷಿ ಕೂಲಿ ಕಾರ್ಮಿಕರಿಗೂ ವಿಶೇಷ ಪರಿಹಾರ ನೀಡಬೇಕು. ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಕೃಷಿ ಕೂಲಿ ಕಾರ್ಮಿಕರಿಗೆ 10 ಸಾವಿರ ಪರಿಹಾರ ನೀಡಲಾಗಿತ್ತು. ಅದೇ ರೀತಿಯಲ್ಲಿ ಭೂಹೀನ ಕೃಷಿ ಕಾರ್ಮಿಕರಿಗೆ 20 ಸಾವಿರ ಸಹಾಯಧನ ನೀಡಬೇಕು ಎಂದು ಶಿವಕುಮಾರ್ ಒತ್ತಾಯಿಸಿದರು.

ಕೇಂದ್ರ ಸರ್ಕಾರ ಬರ ಪರಿಹಾರವಾಗಿ ಕರ್ನಾಟಕಕ್ಕೆ ಹೆಚ್ಚಿನ ನೆರವು ನೀಡಬೇಕು. ಕಿಸಾನ್ ಸಮ್ಮಾನ್ ಯೋಜನೆಯಡಿ ನೀಡಲಾಗುತ್ತಿರುವ 6 ಸಾವಿರ ಸಾಕಾಗುತ್ತಿಲ್ಲ. ರಾಜ್ಯದಿಂದ ಹೆಚ್ಚಿನ ಪ್ರಮಾಣದಲ್ಲಿ

ಪುಟ 7

## ಶಾಲು ವಿಚಾರ: ಮೇಲ್ಮನೆಯಲ್ಲಿ ಆಡಳಿತ ವಿಪಕ್ಷ ಜಟಾಪಟಿ

**ಬೆಂಗಳೂರು,ಸೆ.23-** ರಾಜ್ಯದ ಬರ ಪರಿಸ್ಥಿತಿ ಕುರಿತು ವಿಧಾನ ಪರಿಷತ್‌ನಲ್ಲಿ ನಡೆಯುತ್ತಿದ್ದ ಚರ್ಚೆ ವೇಳೆ ಬಿಜೆಪಿ ಸದಸ್ಯ ನವೀನ್ ಹಸಿರು ಶಾಲು ಧರಿಸಿ ಮಾತನಾಡಲು ಮುಂದಾದ ವಿಚಾರ ಆಡಳಿತ ಪಕ್ಷ ಹಾಗೂ ವಿಪಕ್ಷ ಸದಸ್ಯರ ನಡುವೆ ಜಟಾಪಟಿಗೆ ಕಾರಣವಾಯಿತು.

ಒಂದು ಹಂತದಲ್ಲಿ ಕಾಂಗ್ರೆಸ್ ಸದಸ್ಯ ರವಿ ಅವರು ನವೀನ್ ಅವರ ಆಸನದತ್ತ ಏರಿ ಹೋದಾಗ ಆಡಳಿತ ಪಕ್ಷದ ಸದಸ್ಯರು ಅವರತ್ತ ಧಾವಿಸಿ ವಾಪಾಸು ಕರೆತಂದರು.

ಇದಕ್ಕೂ ಮೊದಲು ನವೀನ್ ಹಸಿರು ಶಾಲು ಧರಿಸಿದ್ದನ್ನು ಕಾಂಗ್ರೆಸ್ ಸದಸ್ಯ ರವಿ ಅವರು ವ್ಯಂಗ್ಯ ಮಾಡಿದರು. ಒಳಪಡಿಸಿದರು. ಭಾಷಣಕ್ಕೂ ಮೊದಲು ಶಾಲು ಹಾಕಿಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಮಾತಿಗೆ ನಿಂತಾಗ ಹಸಿರು ಶಾಲು ಹಾಕುವುದು ಸರಿಯಲ್ಲ, ಇದು ಕೃತಕತೆಯ ಸಂಕೇತ ಎಂದು ರವಿ ಟೀಕಿಸಿದರು.

ಇದಕ್ಕೆ ಆಕ್ರೋಶ ವ್ಯಕ್ತಪಡಿಸಿದ ನವೀನ್, "ನನ್ನ ಶಾಲಿನ ವಿಚಾರ ಮಾತನಾಡಲು ಇವರ್ಯಾರು ನಾನು ರೈತರ ಸಮಸ್ಯೆ ಚರ್ಚೆಗೆ ನಿಂತಿದ್ದೇನೆ. ನಾನು ಯಾವ ಶಾಲು ಹಾಕಬೇಕು ಎಂದು ಯಾರೂ ಹೇಳಬೇಕಿಲ್ಲ, ರಾಜ್ಯದಲ್ಲಿ ಬರ ಪರಿಸ್ಥಿತಿ ತಾಂಡ

ಪುಟ 7

## ಶಾಸಕ ಯಶವಂತ ಮನವೊಲಿಕೆ: ಸಿಎಂ

**ಬೆಂಗಳೂರು.ಸೆ.23-** ಭಾವೋದ್ವೇಗಕ್ಕೆ ಒಳಗಾಗಿ ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲ್ ರಾಜೀನಾಮೆ ಸಲ್ಲಿಸಿದ್ದಾರೆ. ನಾನು ಅವರ ಜೊತೆ ಮಾತನಾಡಿ ಸಮಾಧಾನಪಡಿಸಿದ್ದೇನೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ವಿಧಾನಸಭೆಯಲ್ಲಿ ಯಶವಂತರಾಯಗೌಡ ಪಾಟೀಲ್ ರಾಜೀನಾಮೆ ಪ್ರಸ್ತಾಪ, ಮಾತಿನ ಚಕಮಕಿ, ಗದ್ದಲ ನಡೆಯುತ್ತಿರುವಾಗಲೇ ಸದನಕ್ಕೆ ಆಗಮಿಸಿ ಮಾತನಾಡಿದ ಅವರು, ಭಾವೋದ್ವೇಗಕ್ಕೆ ಒಳಗಾಗಿ ಯಶವಂತರಾಯಗೌಡ ಪಾಟೀಲ್ ರಾಜೀನಾಮೆ ಕೊಟ್ಟಿದ್ದಾರೆ. ಇದೆಲ್ಲಾ ಸಹಜ. ಬರ ಸಂದರ್ಭದಲ್ಲಿ ತಮ್ಮ ಕ್ಷೇತ್ರವನ್ನು ಬರ ಪಟ್ಟಿಗೆ ಸೇರಿಸಬೇಕು ಎಂಬ ಒತ್ತಡ ಶಾಸಕರ ಮೇಲಿದೆ. ಹಾಗಾಗಿ ಕ್ಷೇತ್ರದ ಜನತೆಗೆ ತಾವು ಹೋರಾಟ ಮಾಡುತ್ತಿದ್ದೇವೆ, ನಾನು ಪ್ರಯತ್ನ ನಡೆಸಿದ್ದೇವೆ

ಪುಟ 7

## ಕೆಪಿಎಸ್‌ಸಿ ನೇಮಕಾತಿ ಅಕ್ರಮ ಎಸ್‌ಐಟಿ ರಚನೆ ಆದೇಶ ಪ್ರಶ್ನಿಸಿ ಸುಪ್ರೀಂಗೆ ಮೊರೆ

**ಬೆಂಗಳೂರು,ಸೆ.23-** ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನೇಮಕಾತಿ ಅಕ್ರಮಗಳ ತನಿಖೆಗೆ ಕರ್ನಾಟಕ ಹೈಕೋರ್ಟ್ ನಿರ್ದೇಶನದಂತೆ ರಚಿಸಲಾಗಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ವಿಚಾರದಲ್ಲಿ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್ ಮೊರೆ ಹೋಗಲು ನಿರ್ಧರಿಸಿದೆ.

ಹೈಕೋರ್ಟ್ ಆದೇಶದಂತೆ ಕಾರಾಗೃಹ ಇಲಾಖೆಯ ಡಿಜಿಪಿ ಅಲೋಕ್ ಕುಮಾರ್ ನೇತೃತ್ವದಲ್ಲಿ ಐವರು ಅಧಿಕಾರಿಗಳನ್ನೊಳಗೊಂಡ ಎಸ್‌ಐಟಿ ರಚಿಸಲಾಗಿದೆ. ತಂಡವು 100 ದಿನಗಳೊಳಗೆ ತನಿಖೆ ಪೂರ್ಣಗೊಳಿಸಿ ವರದಿ ಸಲ್ಲಿಸುವಂತೆ ನ್ಯಾಯಾಲಯ ಸೂಚಿಸಿದೆ. ಆದರೆ, ನಿರ್ದಿಷ್ಟ ಅಧಿಕಾರಿಗಳನ್ನೇ ಒಳಗೊಂಡ ಎಸ್‌ಐಟಿ ರಚನೆಗೆ ನಿರ್ದೇಶನ ನೀಡಿರುವುದನ್ನು ರಾಜ್ಯ ಸರ್ಕಾರ ಆಕ್ಷೇಪಿಸಿದೆ.

ಈ ಸಂಬಂಧ ಕಾನೂನು ತಜ್ಞರೊಂದಿಗೆ ಸಮಾಲೋಚನೆ ನಡೆಸಿರುವ ಸರ್ಕಾರ, ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಸಿದ್ಧತೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

ಕೆಪಿಎಸ್‌ಸಿ ನೇಮಕಾತಿ ಅಕ್ರಮ ಪ್ರಕರಣದ ತನಿಖೆಯನ್ನು ಈಗಾಗಲೇ ಸಿಐಡಿ ನಡೆಸುತ್ತಿದ್ದು, ಸುಮಾರು ಶೇ.80ರಷ್ಟು ತನಿಖೆ ಪೂರ್ಣಗೊಂಡಿದೆ ಎಂಬುದು ಸರ್ಕಾರದ ವಾದವಾಗಿದೆ. ತನಿಖೆಯ ಭಾಗವಾಗಿ ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಸೇರಿದಂತೆ ಹಲವರನ್ನು ಬಂಧಿಸಲಾಗಿದೆ. ಹಣವನ್ನು ವಶಪಡಿಸಿಕೊಳ್ಳಲಾಗಿದ್ದು, ದಾಖಲೆಗಳು,

ಪುಟ 7

ಚಿನಿವಾರಪೇಟೆ - ಮುಂಬೈ, ಸೆಪ್ಟೆಂಬರ್ 23: ಚಿನ್ನ: ಅಪರಂಜಿ - 24 ಕ್ಯಾರೆಟ್ 10 ಗ್ರಾಂ I 1,54,420 I 22 ಕ್ಯಾರೆಟ್ - 10 ಗ್ರಾಂ 1,41,550 I ಬೆಳ್ಳಿ: 1 ಕೆ.ಜಿ. - 3,20,000

# ವೆಲೋಸ್ಟ್ರಾ-2026-27' ಕ್ರೀಡಾಕೂಟದಲ್ಲಿ ಯೂಕಿ ಹೌಸ್ ಚಾಂಪಿಯನ್




ಬೆಂಗಳೂರು,ಸೆ.23–ವಿದ್ಯಾರ್ಥಿಗಳಲ್ಲಿ ಕ್ರೀಡಾಸ್ಫೂರ್ತಿ, ಶಿಸ್ತು, ಆತ್ಮವಿಶ್ವಾಸ ಹಾಗೂ ತಂಡದ ಮನೋಭಾವ ಬೆಳೆಸುವ ಉದ್ದೇಶದಿಂದ ವೇಲಮ್ಮಾಳ್ ಬೋಧಿ ಟೆಕ್ ಕ್ಯಾಂಪಸ್ ವತಿಯಿಂದ 'ವೆಲೋಸ್ಟ್ರಾ–2026–27' ವಾರ್ಷಿಕ ಕ್ರೀಡಾಕೂಟವನ್ನು ಯಲಹಂಕ ಜಕ್ಕೂರು ರಸ್ತೆಯ ಸುರಭಿ ಲೇಔಟ್‌ನಲ್ಲಿರುವ ಕ್ಯಾಂಪಸ್‌ನಲ್ಲಿ ಆಯೋಜಿಸಲಾಗಿತ್ತು.

ಭಾರತದ ಮಾಜಿ ಟೇಬಲ್ ಟೆನಿಸ್ ಆಟಗಾರ್ತಿ ಅಭಿನಯ ರಮೇಶ್ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದ ಅವರು, ದೃಢನಿಶ್ಚಯ, ಶಿಸ್ತು ಹಾಗೂ ನೈಜ ಕ್ರೀಡಾಸ್ಫೂರ್ತಿಯನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಕರೆ ನೀಡಿದರು.

ವೇಲಮ್ಮಾಳ್ ಎಜುಕೇಶನಲ್ ಟ್ರಸ್ಟ್ ಅಧ್ಯಕ್ಷ ಎಂ.ವಿ. ಮುತ್ತು ರಾಮಲಿಂಗಂ ಮಾತನಾಡಿ, ಭವಿಷ್ಯದ ಚಾಂಪಿಯನ್‌ಗಳನ್ನು ರೂಪಿಸುವುದರ ಜೊತೆ–ಗೆ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನದಲ್ಲಿ ಕ್ರೀಡೆಗಳು ಪ್ರಮುಖ ಪಾತ್ರವಹಿಸುತ್ತವೆ. ಇಂತಹ ಕ್ರೀಡಾಕೂಟಗಳು ವಿದ್ಯಾರ್ಥಿಗಳ ಪ್ರತಿಭೆ ಅನಾವರಣಕ್ಕೆ ಉತ್ತಮ ವೇದಿಕೆ ಎಂದರು.

ಬೋಧಿ ಟೆಕ್ ಕ್ಯಾಂಪಸ್ ನಿರ್ದೇಶಕ ಎಂ.ವಿ.ಎಂ. ಶಶಿಕುಮಾರ್ ಮಾತನಾಡಿ, ಉತ್ಸಾಹ, ಶಿಸ್ತು, ಬದ್ಧತೆ, ಹೆಮ್ಮೆ ಹಾಗೂ ಪರಿಶ್ರಮದಂತಹ ಮೌಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವಲ್ಲಿ ಕ್ರೀಡೆಗಳ ಪಾತ್ರ ಮಹತ್ವದ್ದು ಎಂದರು.

ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡು ತಮ್ಮ ಪ್ರತಿಭೆ, ತಂಡದ ಕೆಲಸ ಹಾಗೂ ಸ್ಪರ್ಧಾತ್ಮಕ ಮನೋಭಾವ ಪ್ರದರ್ಶಿಸಿದರು.

ಅತ್ಯುತ್ತಮ ಪ್ರದರ್ಶನ ಹಾಗೂ ಕ್ರೀಡಾಸ್ಫೂರ್ತಿ ಮೆರೆದ ಯೂಕಿ ಹೌಸ್ ತಂಡವು 'ವೆಲೋಸ್ಟ್ರಾ–2026–27'ರ ಸಮಗ್ರ ಚಾಂಪಿಯನ್‌ಶಿಪ್ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು.

# ರಂಗ ಪದವಿ ಕಾಲೇಜಿನಲ್ಲಿ ಶಿಕ್ಷಕರ ದಿನಾಚರಣೆ




ಬೆಂಗಳೂರು, ಸೆ. .23– ನಗರದ ಟಿ ದಾಸರಹಳ್ಳಿ ಕೆ ಜಿ ಲೇ ಔಟ್ ಪ್ರಶಾಂತನಗರ ದಲ್ಲಿರುವ ಶ್ರೀ ರಂಗ ಪದವಿ ಪೂರ್ವ ಕಾಲೇಜಿನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮವನ್ನು ಹಿರಿಯ ಚಲನ ಚಿತ್ರ ನಟರಾದ ಶ್ರೀ ಯುತ ದೊಡ್ಡಣ್ಣ ಉದ್ಘಾಟಿಸಿ ಶುಭಾಶಯ ಕೋರಿದರು. ಈ ವೇಳೆ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರು ಹಾಗೂ ಶಿಕ್ಷಕಿಯರು ಸೇರಿ 250 ಶಿಕ್ಷಕರನ್ನು ಗೌರವಿಸಲಾಯಿತು.

ಮಂಜುಳಾ ವಿ ರಾವ್ ಮಾತನಾಡಿ ಸ್ವಾರ್ಥವಿಲ್ಲದ ಸೇವೆ ಎನ್ನುವುದು ಒಂದು ಸದ್ಗುಣವಾಗಿದ್ದು ಸಮರ್ಪಣಾ ಮನೋಭಾವದಿಂದ ಮಾಡುವ ಸೇವಾ ಕಾರ್ಯವು ನಮ್ಮ ವ್ಯಕ್ತಿತ್ವವನ್ನು ಉನ್ನತೀಕರಿಸುತ್ತದೆ. ಅದೇ ರೀತಿ ಸೇವಾ ಮನೋಭಾವಕ್ಕೆ ಯಾವುದೇ ಕ್ಷೇತ್ರಗಳ ಚೌಕಟ್ಟಿಲ ಎಂದರು. ಕೆರೆಯ ನೀರನ್ನು ಕೆರೆಗೆ ಚೆಲ್ಲುವ ಸಮಾಜಮುಖಿ ಚಿಂತನೆಯಿಂದ ತಮ್ಮ ಆಯ್ಕೆಯ ಕ್ಷೇತ್ರಗಳಲ್ಲಿ ತಾವು ಬೆಳೆದು ಸುತ್ತಲಿನ ಸಮಾಜವನ್ನೂ ಬೆಳೆಸುತ್ತ ಮಾದರಿ ಎನಿಸುವವರು ನಿಜವಾದ ಸಾಧಕ–ರೇ ಶಿಕ್ಷಕರು. ಇಂಥ ನಿಸ್ವಾರ್ಥ ಶಿಕ್ಷಕರನ್ನು ನಟರಾದ ದೊಡ್ಡಣ್ಣ ನವರು ಪ್ರಶಸ್ತಿ ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ಯುವರಾಜ್, ವಿದ್ಯಾಪುಟ್ಟಣ್ಣ, ಜಗದೀಶ್, ಡಾ. ಗೋಪಾಲಕೃಷ್ಣ ಹೆಬ್ಬಾರ್ ಪ್ರಾಂಶುಪಾಲರು, ಆಕಾಶ್ ಆರ್ ಗೌಡ. ಸಿಇಒ, ವಿದ್ಯಾರ್ಥಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು.

# ಮನೆ ನಿರ್ಮಾಣ ಕಾಮಗಾರಿಗೆ ಚಾಲನೆ




ಕೆ.ಆರ್. ಪುರ, ಸೆ.23– ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಕ್ಷೇತ್ರದ ನಲ್ಲೂರುಪುರದಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಮನೆಗಳ ನಿರ್ಮಾಣ ಕಾಮಗಾರಿಗೆ ಶಾಸಕ ಬೈರತಿ ಬಸವರಾಜ ಅವರು ಚಾಲನೆ ನೀಡಿದರು.

ಚಾಲನೆ ನೀಡಿ ಮಾತನಾಡಿದ ಅವರು ಮನೆಯಿಲ್ಲದ ಬಡವರಿಗೆ ಮನೆಗಳನ್ನು ನಿರ್ಮಾಣ ಮಾಡಿಕೋಡುವ ಉತ್ತಮ ಕಾರ್ಯಕ್ಕೆ ಚಾಲನೆ ನೀಡಿದ್ದು, ಸಂತಸ ತಂದಿದೆ, ಕಾಮಗಾರಿಯನ್ನು ಗುಣಮಟ್ಟದಿಂದ ತ್ವರಿತಗತಿಯಲ್ಲಿ ಮಾಡುವಂತೆ ಸಲಹೆ ನೀಡಿದರು.

ಬಡವರಿಗೆ ಸೂರು ಕಲ್ಪಿಸುವುದು ನನ್ನ ಗುರಿಗಳಲ್ಲಿ ಒಂದು ಇಂದು 75 ಮನೆಗಳ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಲಾಗಿದ್ದು, ಮತ್ತೊಂದು ಹಂತದಲ್ಲಿ ಮತ್ತಷ್ಟು ಮನೆಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಕಾಂಕ್ರೀಟ್ ರಸ್ತೆ ಅಭಿವೃದ್ಧಿ ಕಾಮಗಾರಿ, ಡಾಂಬರೀಕರಣ ಹಾಗೂ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾಜಿ ಪಾಲಿಕೆ ಸದಸ್ಯರಾದ ಗೀತಾ ವಿವೇಕಾನಂದ, ಸಿದ್ದಲಿಂಗಯ್ಯ, ಮಂಡಲ ಪ್ರಧಾನ ಕಾರ್ಯದರ್ಶಿ ಮಾರ್ಕೆಟ್ ರಮೇಶ್, ಕಾರ್ಯದರ್ಶಿ ರಾಮಲಕ್ಷ್ಮಣ್, ಮುಖಂಡರಾದ ಡಿ.ಶ್ರೀನಿವಾಸ್, ಭಕ್ತವತ್ಸಲ, ಸದಾನಂದ್ ಸೇರಿದಂತೆ ಮುಖಂಡರು ಉಪಸ್ಥಿತರಿದ್ದರು.



ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ನೂತನ ಕುಲಪತಿಯಾಗಿ ಅಧಿಕಾರ ಸ್ವೀಕರಿಸಿರುವ ಪ್ರೊಫೆಸರ್ ಮಮತಾ ಬಿ ಅವರನ್ನು ಖ್ಯಾತ ಸಾಹಿತಿ ಡಾ. ಸತ್ಯಮೂರ್ತಿ ಗೂಗಿ "ವಿದ್ಯಾರ್ಥಿ ತೆರೆದ ಸತ್ಯ" ಪುಸ್ತಕ ನೀಡಿ ಅಭಿನಂದಿಸಿದರು. ಪ್ರಾಂಶುಪಾಲರಾದ ಪ್ರೊಫೆಸರ್ ಕುಶಾಲ, ಉಪನ್ಯಾಸಕರಾದ ಡಾ. ರಾಜಗೋಪಾಲ್, ಸುವರ್ಣ ಮೈಗೂರ್, ಡಾ. ಸೌಮ್ಯ ಕಮ್ಮಾರ್ ಹಾಜರಿದ್ದರು.

# ಬರ ಪರಿಸ್ಥಿತಿ: ಅಗತ್ಯ ಪರಿಹಾರಕ್ಕೆ ಶರವಣ ಆಗ್ರಹ

ಬೆಂಗಳೂರು, ಸೆ. 23– ರಾಜ್ಯದಲ್ಲಿ ಉಂಟಾಗಿರುವ ಬರಗಾಲದ ಪರಿಸ್ಥಿತಿ, ರೈತರು ಎದುರಿಸುತ್ತಿರುವ ಸಂಕಷ್ಟಗಳು ಹಾಗೂ ಅಗತ್ಯ ಪರಿಹಾರ ಕ್ರಮಗಳ ಕುರಿತು ಇಂದು ವಿಧಾನ ಸೌಧದಲ್ಲಿ ನಡೆದ ವಿಶೇಷ ಅಧಿವೇಶನದಲ್ಲಿ ಶಾಸಕರಾದ ಟಿ.ಎ. ಶರವಣ ಅವರು ಮಾತನಾಡಿದರು.

ರಾಜ್ಯದಲ್ಲಿ ಬರಗಾಲದ ಪರಿಸ್ಥಿತಿ ಗಂಭೀರವಾಗಿದ್ದು, ರೈತರ ಬದುಕಿನ ಮೇಲೆ ಅದರ ನೇರ ಪರಿಣಾಮ ಬೀರುತ್ತಿದೆ. ರೈತರ ಸಂಕಷ್ಟಗಳನ್ನು ಕೇವಲ ಮಾತುಗಳಿಗೆ ಸೀಮಿತಗೊಳಿಸದೆ, ಸರ್ಕಾರ ತಕ್ಷಣ ಅಗತ್ಯ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಟಿ.ಎ. ಶರವಣ ಒತ್ತಾಯಿಸಿದರು.

ರೈತರ ಸಾಲಮನ್ನಾ ಕುರಿತು ಮಾತನಾಡಿದ ಶರವಣ ಅವರು, ಮಾಜಿ ಮುಖ್ಯಮಂತ್ರಿ ಹಾಗೂ ಪ್ರಸ್ತುತ ಕೇಂದ್ರ ಸಚಿವರಾದ ಶ್ರೀ ಎಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಸುಮಾರು 25,000 ಕೋಟಿ ಮೊತ್ತದ ರೈತರ ಸಾಲಮನ್ನಾ ಮಾಡಿರುವುದನ್ನು ಸರ್ಕಾರದ ಗಮನಕ್ಕೆ ತಂದರು.

ಕೇಂದ್ರ ಸರ್ಕಾರದಲ್ಲಿ ಅಂಗಲಾಚದೆ ದೃಢ ಸಂಕಲ್ಪದೊಂದಿಗೆ ರೈತರ ಹಿತದೃಷ್ಟಿಯಿಂದ ಇಂತಹ ಕ್ರಮಗಳ ಅಗತ್ಯವಿದ್ದು, ಪ್ರಸ್ತುತ ಪರಿಸ್ಥಿತಿಯಲ್ಲಿಯೂ ರೈತರಿಗೆ ಅಗತ್ಯ ನೆರವು ಒದಗಿಸುವ ನಿಟ್ಟಿನಲ್ಲಿ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.



ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾಗದಂತೆ ಮೇವು ಖರೀದಿ ವ್ಯವಸ್ಥೆ ಮಾಡಬೇಕು. ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿರುವ ಪ್ರದೇಶಗಳಲ್ಲಿ ಸರ್ಕಾರದ ವತಿಯಿಂದ ಎಲ್ಲಾ ತಾಲೂಕು ಮಟ್ಟದಲ್ಲಿ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸುವ ವ್ಯವಸ್ಥೆಯನ್ನು ತಕ್ಷಣ ಜಾರಿಗೊಳಿಸಬೇಕು ಎಂದು ಅವರು ಒತ್ತಾಯಿಸಿದರು.

ಬರಗಾಲದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದಿಂದ ಅಗತ್ಯ ನೆರವು ಪಡೆಯಲು ರಾಜ್ಯ ಸರ್ಕಾರವು ಸರ್ವಪಕ್ಷ ನಿಯೋಗವನ್ನು ಕೇಂದ್ರದ ಬಳಿಗೆ ಕರೆದೊಯ್ಯಬೇಕು. ರಾಜ್ಯದ ರೈತರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಟಿ.ಎ. ಶರವಣ ಹೇಳಿದರು.

# ಬ್ಲಾಕ್ ಸ್ಪಾಟ್ ತೆರವಿಗೆ ಸೂಚನೆ



ಕೆ.ಆರ್.ಪುರ,23–ಹೊರಮಾವು ಉಪ ವಿಭಾಗದಲ್ಲಿ ಕಸದ ಬ್ಲಾಕ್ ಸ್ಪಾಟ್‌ಗಳ ಪರಿಶೀಲನೆ ಮಾಡಿದ ಕೆ.ಆರ್.ಪುರ ವಲಯ ಆಯುಕ್ತೆ ಡಾ. ಸುಧಾ ಅವರು ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸಿ ಸಿಸಿಟಿವಿ ಅಳವಡಿಕೆಗೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಂತರ ಮಾತನಾಡಿದ ಡಾ . ಸುಧಾ ಅವರು ಹೊರಮಾವು ರಿಂಗ್ ರಸ್ತೆ, ರೈಲ್ವೆ ಮೇಲುಸೇತುವೆ, ಹೊಯ್ಸಳನಗರ ಹಾಗೂ ರಾಘವೇಂದ್ರ ಸೇರಿದಂತೆ ವಿವಿಧೆಡೆ ಪರಿಶೀಲನೆ ನಡೆಸಲಾಗಿದ್ದು ಸಿಸಿ ಟಿವಿ ಅಲವಡಿಕೆ ಮಾಡಲಾಗುವುದು ಎಂದು ಹೇಳಿದರು.

ಸ್ವಚ್ಛಗೊಳಿಸಿದ ಜಾಗದಲ್ಲಿ ಪುನಃ ಕಸದ ಹಾಕಿದಲ್ಲಿ ಸಿಸಿಟಿವಿ ದೃಶ್ಯಗಳ ಆಧಾರದಲ್ಲಿ ತಂಡ ವಿಧಿಸುವ ಕ್ರಮ ಕೈಗೊಳ್ಳಲಾಗುವುದು, ಕೆಲವೊಂದು ಕಡೆ ಸಿಸಿಟಿವಿ ಅಳವಡಿಕೆಗೆ ಸ್ಥಳೀಯರು ಮುಂದಾಗಿದ್ದಾರೆ,

ಸಿಸಿ ಕ್ಯಾಮೆರಾ ಗಳನ್ನು ವಾಚ್ ಮಾಡಲು ಜೋನಲ್ ಹೆಡ್ ಆಫೀಸ್ ನಲ್ಲಿ ಕಂಟ್ರೋಲ್ ರೂಮ್ ನಿರ್ಮಾಣ ಮಾಡಿ ಆಮೂಲ ಕ ಕ್ರಮ ಕೈಗೊಳ್ಳಲಾಗುವುದು ಎಂದು ನುಡಿದರು.

ಕಸದ ಬ್ಲಾಕ್ ಸ್ಪಾಟ್ ಗಳ ಪರಿಶೀಲನೆ ವೇಳೆ ಇಂದಿರಾ ಕ್ಯಾಂಟೀನ್ ನಲ್ಲಿ ಉಪಹಾರ ಪರಿಹಾರ ಪರಿಶೀಲನೆ ಮಾಡಿ ಸೂಕ್ತ ರೀತಿಯಲ್ಲಿ ವ್ಯವಸ್ಥೆ ಮಾಡುವಂತೆ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಅಧಿಕಾರಿಗಳಾದ ಶ್ರೀನಿಧಿ, ಸಂಜಯ್ ಸೇರಿದಂತೆ ಮತ್ತಿತರರು ಇದ್ದರು.

# ಅಲ್ಟ್ರಾ ಕಂಪ್ಲೀಟ್ ರೋಬೋಟ್ ವ್ಯಾಕ್ಯೂಮ್ ಬಿಡುಗಡೆ

ಬೆಂಗಳೂರು.ಸೆ23: ಸ್ಮಾರ್ಟ್ ಹೋಮ್ ತಂತ್ರಜ್ಞಾನ ಕ್ಷೇತ್ರದ ಜಾಗತಿಕ ಪ್ರಮುಖ ಸಂಸ್ಥೆಯಾದ ಡ್ರೀಮಿ ಟೆಕ್ನಾಲಜಿ, ಭಾರತದಲ್ಲಿ ತನ್ನ ಫ್ಲ್ಯಾಗ್‌ಶಿಪ್ ಡ್ರೀಮಿ ಘಿ60 ಅಲ್ಟ್ರಾ ಕಂಪ್ಲೀಟ್ ರೋಬೋಟ್ ವ್ಯಾಕ್ಯೂಮ್ ಅನ್ನು ಬಿಡುಗಡೆ ಮಾಡಿದೆ.

ಕೇವಲ 7.95 ಸೆಂ.ಮೀ. ದಪ್ಪದೊಂದಿಗೆ ಡ್ರೀಮಿ ಅತ್ಯಂತ ಸಣ್ಣ ರೋಬೋಟ್ ವ್ಯಾಕ್ಯೂಮ್ ಆಗಿರುವ ಇದು, ತನ್ನ ವಿಭಾಗದಲ್ಲೇ ಗರಿಷ್ಠ 35,000ಕಚಿ ವೋರ್‌ಮ್ಯಾಕ್ಸ್ ಸಕ್ಷನ್ ಪವರ್ ಹೊಂದಿದ್ದು, ಸಂಪೂರ್ಣ ಮನೆಯ ಸ್ವಚ್ಛತೆಗೆ ಹೆಚ್ಚು ಬುದ್ಧಿವಂತ ಮತ್ತು ಸ್ವಯಂಚಾಲಿತ ಪರಿಹಾರವನ್ನು ಒದಗಿಸುತ್ತದೆ.

ಡ್ರೀಮಿ ಘಿ60 ಅಲ್ಟ್ರಾ ಕಂಪ್ಲೀಟ್. ಸೆಪ್ಟೆಂಬರ್ 27, 2026ರಿಂದ ಅಮೆಜಾನ್ ಇಂಡಿಯಾ ನಲ್ಲಿ 1,34,999ಕ್ಕೆ ಲಭ್ಯವಾಗಲಿದೆ. ಡ್ರೀಮಿ ಇಂಡಿಯಾ ಅಧಿಕೃತ ವೆಬ್‌ಸೈಟ್‌ನಲ್ಲಿ ಸೆಪ್ಟೆಂಬರ್ 22ರಿಂದ ಹಾಗೂ ಕ್ರೋಮಾ ಮತ್ತು ಆಯ್ದ ರಿಟೇಲ್ ಸ್ಟೋರ್‌ಗಳಲ್ಲಿ ಸಹ ಲಭ್ಯವಿರಲಿದೆ. ಡ್ರೀಮಿ ಟೆಕ್ನಾಲಜಿಯ ವ್ಯವಸ್ಥಾಪಕ ನಿರ್ದೇಶಕ ಮನು ಶರ್ಮಾ ಮಾತನಾಡಿ, "ಸ್ಮಾರ್ಟ್ ಹೋಮ್ ತಂತ್ರಜ್ಞಾನದಲ್ಲಿ ನಾವು ಹೊಸ ಹಂತಕ್ಕೆ ಪ್ರವೇಶಿಸುತ್ತಿದ್ದೇವೆ. ಯಂತ್ರಗಳು ಏನು ಮಾಡಬಲ್ಲವು ಎಂಬುದಕ್ಕಿಂತ, ಅವು ತಮ್ಮ ಸುತ್ತಮುತ್ತಲಿನ ಪರಿಸರವನ್ನು ಎಷ್ಟು ಬುದ್ಧಿವಂತಿಕೆಯಿಂದ ಅರ್ಥಮಾಡಿಕೊಂಡು ಪ್ರತಿಕ್ರಿಯಿಸುತ್ತವೆ ಎಂಬುದು ಮುಖ್ಯವಾಗುತ್ತಿದೆ. ಘಿ60 ಅಲ್ಟ್ರಾ ಕಂಪ್ಲೀಟ್ ಮೂಲಕ ಎಐ ಆಧಾರಿತ ಗುರುತಿಸುವಿಕೆ, ಅಡಾಪ್ಟಿವ್ ನ್ಯಾವಿಗೇಶನ್ ಮತ್ತು ಸುಧಾರಿತ ಸ್ವಚ್ಛತಾ ತಂತ್ರಜ್ಞಾನಗಳನ್ನು ಒಟ್ಟುಗೂಡಿಸಿದ್ದೇವೆ," ಎಂದರು.

ರೋಬೋಟ್‌ನ ಫ್ಲೆಕ್ಸಿಅಡಾಪ್ಟ್ ತಂತ್ರಜ್ಞಾನವು 4.2 ಸೆಂ.ಮೀ.ವರೆಗೆ ಸಿಂಗಲ್–ಲೆವೆಲ್ ಹಾಗೂ 8 ಸೆಂ.ಮೀ. ವರೆಗೆ ಡಬಲ್–ಲೆವೆಲ್ ಮೆಟ್ಟಿಲುಗಳನ್ನು ದಾಟಲು ಸಹಾಯ ಮಾಡುತ್ತದೆ. ಡ್ಯುಯಲ್ ಫ್ಲೆಕ್ಸ್ ಆರ್ಮ್ ತಂತ್ರಜ್ಞಾನ ಮೂಲಕ ಮೂಲೆಗಳು ಮತ್ತು ಕಷ್ಟಕರ ಪ್ರದೇಶಗಳಿಗೂ ಪರಿಣಾಮಕಾರಿಯಾಗಿ ತಲುಪಬಹುದು.

# ಡೇಟಾ ವಿಶ್ಲೇಷಣೆಯಿಂದ ವಿಮಾ ಕ್ಷೇತ್ರದಲ್ಲಿ ಹೊಸ ಬದಲಾವಣೆ

ಬೆಂಗಳೂರು.ಸೆ23: ವಿಮಾ ಕ್ಷೇತ್ರದಲ್ಲಿ ಕೇವಲ ಊಹೆ ಹಾಗೂ ಸಾಂಪ್ರದಾಯಿಕ ವಿಧಾನಗಳ ಬದಲಿಗೆ ಡೇಟಾ ಆಧಾರಿತ ನಿರ್ಧಾರಗಳಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಗ್ರಾಹಕರ ಅಗತ್ಯ, ನಡವಳಿಕೆ ಮತ್ತು ಅಪಾಯಗಳನ್ನು ನೈಜ ಸಮಯದಲ್ಲಿ ವಿಶ್ಲೇಷಿಸುವ ಮೂಲಕ ವಿಮಾ ಸಂಸ್ಥೆಗಳು ವೇಗವಾದ ಹಾಗೂ ವೈಯಕ್ತಿಕ ಸೇವೆ ನೀಡಲು ಮುಂದಾಗಿವೆ.

ವಿಮಾ ಸಲಹೆಗಾರರ ನೋಂದಣಿಯಿಂದ ಹಿಡಿದು ಪಾಲಿಸಿ ಖರೀದಿ, ಅಂಡರ್‌ರೈಟಿಂಗ್, ಸೇವೆ ಮತ್ತು ಕ್ಲೇಮ್‌ಗಳ ವಿಲೇವಾರಿವರೆಗೆ ಪ್ರತಿಯೊಂದು ಹಂತದಲ್ಲೂ ಸಂಗ್ರಹವಾಗುವ ದತ್ತಾಂಶವನ್ನು ಸುಧಾರಿತ ಅನಾಲಿಟಿಕ್ಸ್ ಮೂಲಕ ಬಳಸಿಕೊಳ್ಳಲಾಗುತ್ತಿದೆ. ಇದ–ರಿಂದ ಗ್ರಾಹಕರು ಯಾವ ಹಂತದಲ್ಲಿ ಸೇವೆಯಿಂದ ಹಿಂದೆ ಸರಿಯುತ್ತಿದ್ದಾರೆ, ಯಾವ ಪ್ರಕ್ರಿಯೆಯಲ್ಲಿ ವಿಳಂಬವಾಗುತ್ತಿದೆ ಎಂಬುದನ್ನು ಗುರುತಿಸಿ ತಕ್ಷಣ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುತ್ತಿದೆ.

ಎಐ, ಮೆಷಿನ್ ಲರ್ನಿಂಗ್, ಒಸಿಆರ್ ಸೇರಿದಂತೆ ತಂತ್ರಜ್ಞಾನಗಳ ಬಳಕೆಯಿಂದ ಅಪಾಯ ಮೌಲ್ಯಮಾಪನ, ವಂಚನೆ ಪತ್ತೆ ಮತ್ತು ಕ್ಲೇಮ್‌ಗಳ ವಿಲೇವಾರಿ ಮತ್ತಷ್ಟು ವೇಗಗೊಳ್ಳುತ್ತಿದೆ. ಕಡಿಮೆ ಅಪಾಯದ ಕ್ಲೇಮ್‌ಗಳನ್ನು ಸ್ವಯಂಚಾಲಿತವಾಗಿ ಪರಿಶೀಲಿಸಿ ಶೀಘ್ರ ವಿಲೇವಾರಿ ಮಾಡುವ ಸಾಧ್ಯತೆಯೂ ಹೆಚ್ಚಾಗಿದೆ.

ಡೇಟಾ ಆಧಾರಿತ ವ್ಯವಸ್ಥೆಗಳು ಸಂಸ್ಥೆಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದರ ಜೊತೆಗೆ ಗ್ರಾಹಕರಿಗೆ ಸರಳ, ವೇಗದ ಮತ್ತು ಹೆಚ್ಚು ಪಾರದರ್ಶಕ ಸೇವೆ ಒದಗಿಸಲು ನೆರವಾಗುತ್ತಿವೆ ಎಂದು ಎಡೆಲ್ವೈಸ್ ಲೈಫ್ ಇನ್ಶೂರೆನ್ಸ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೇಜಾದ್ ಹಿರಾಮಣೇಕ್ ತಿಳಿಸಿದ್ದಾರೆ.

# ಬೆಂಗಳೂರು ಸುರಂಗ ರಸ್ತೆಗೆ 1,128 ಮರಗಳ ಕುತ್ತು

ಬೆಂಗಳೂರು.ಸೆ.23:– ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಸಂಚಾರ ದಟ್ಟಣೆ ನಿವಾರಿಸುವ ಉದ್ದೇಶದಿಂದ ಹೆಬ್ಬಾಳದಿಂದ ಮೇಕ್ರಿ ಸರ್ಕಲ್‌ವರೆಗೆ ನಿರ್ಮಿಸಲು ಉದ್ದೇಶಿಸಿರುವ ಸುರಂಗ ರಸ್ತೆಗೆ ಬೃಹತ್ ಪ್ರಮಾಣದ ಮರಗಳ ಕಡಿತದ ಭೀತಿ ಎದುರಾಗಿದೆ.

ಸುಮಾರು 2.3 ಕಿ.ಮೀ. ಉದ್ದದ ಸುರಂಗ ರಸ್ತೆ ನಿರ್ಮಾಣಕ್ಕೆ 1,128 ಮರಗಳನ್ನು ತೆರವುಗೊಳಿಸಲು ಬಿಡಿಎ ಅರಣ್ಯ ಇಲಾಖೆಯಿಂದ ಅನುಮತಿ ಕೋರಿದೆ ಎನ್ನಲಾಗಿದೆ. ಸುಮಾರು 1,139 ಕೋಟಿ ವೆಚ್ಚದ ಈ ಯೋಜನೆ ನಗರದ ಪ್ರಮುಖ ಭಾಗಗಳ ಮೂಲಕ ಸಾಗಲಿದೆ.

ಯೋಜನೆಯ ವ್ಯಾಪ್ತಿಯಲ್ಲಿ ಆಲ, ಅತ್ತಿ, ಅರಳಿ, ಸೀಮೆಹುಣಸೆ, ನೆಲ್ಲಿಕಾಯಿ ಸೇರಿದಂತೆ ವಿವಿಧ ಜಾತಿಯ ಮರಗಳು ಇರುವುದಾಗಿ ತಿಳಿದುಬಂದಿದೆ. ಬಳ್ಳಾರಿ ರಸ್ತೆ, ಪಶುವೈದ್ಯಕೀಯ ಮೈದಾನ ಆವರಣ ಹಾಗೂ ಹೆಬ್ಬಾಳ ಕೆರೆ ಸುತ್ತಮುತ್ತಲಿನ ಹಸಿರು ಪ್ರದೇಶಗಳ ಮೇಲೂ ಯೋಜನೆಯ ಪರಿಣಾಮ ಬೀರುವ ಸಾಧ್ಯತೆ ಇದೆ.

ನಗರದ ಮೊದಲ ಭೂಗತ ಸುರಂಗ ರಸ್ತೆ ಯೋಜನೆ ಎಂದು ಹೇಳಲಾಗುತ್ತಿರುವ ಈ ಕಾಮಗಾರಿಯಿಂದ ಸಂಚಾರ ವ್ಯವಸ್ಥೆಗೆ ಅನುಕೂಲವಾಗುವ ನಿರೀಕ್ಷೆ ಒಂದೆಡೆಯಾದರೆ, ಮತ್ತೊಂದೆಡೆ ದೊಡ್ಡ ಪ್ರಮಾಣದ ಮರಗಳ ಕಡಿತದಿಂದ ಪರಿಸರದ ಮೇಲೆ ಉಂಟಾಗಬಹುದಾದ ಪರಿಣಾಮದ ಬಗ್ಗೆ ಆತಂಕ ವ್ಯಕ್ತವಾಗಿದೆ.

ಮರಗಳ ತೆರವುಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯ ಅನುಮತಿ ದೊರೆತ ಬಳಿಕವೇ ಮುಂದಿನ ಕ್ರಮ ಕೈಗೊಳ್ಳಬೇಕಾಗಿದೆ.

# ವಿದ್ಯುತ್ ಪ್ರವಹಿಸಿ ಕೂಲಿ ಕಾರ್ಮಿಕ ಸಾವು

ಕಲಬುರಗಿ.ಸೆ.23– ಜಮೀನಿನಲ್ಲಿ ಮೋಟಾರ್ ಸ್ಟಾರ್ಟ್ ಮಾಡಲು ತೆರಳಿದ್ದ ಕೂಲಿ ಕಾರ್ಮಿಕ ವಿದ್ಯುತ್ ಪ್ರವಹಿಸಿ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಸಿದ್ಧನಾಳ ಗ್ರಾಮದಲ್ಲಿ ನಡೆದಿದೆ.

ಮೃತರನ್ನು ಅಫಜಲಪುರ ತಾಲೂಕಿನ ಕಾರಬೋಸಗ ಗ್ರಾಮದ ನಿವಾಸಿ ಲಕ್ಷ್ಮಣ್ ಪೂಜಾರಿ (32) ಎಂದು ಗುರುತಿಸಲಾಗಿದೆ. ಜಮೀನಿನಲ್ಲಿ ಕೂಲಿ ಕೆಲಸ ಮಾಡಿಕೊಂಡು ಲಕ್ಷ್ಮಣ್ ಪೂಜಾರಿ ಜೀವನ ಸಾಗಿಸುತ್ತಿದ್ದ ಎಂದು ತಿಳಿದು ಬಂದಿದೆ.

ಇಂದು ಮುಂಜಾನೆ ಜಮೀನಿನಲ್ಲಿ ಮೋಟಾರ್ ಸ್ಟಾರ್ಟ್ ಮಾಡಲು ತೆರಳಿದ್ದ ವೇಳೆ ವಿದ್ಯುತ್ ಶಾಕ್ ಹೊಡೆದಿದ್ದು, ಲಕ್ಷ್ಮಣ್ ಪೂಜಾರಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಘಟನೆಯ ಸುದ್ದಿ ತಿಳಿದು ಸ್ಥಳಕ್ಕೆ ಆಗಮಿಸಿದ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು.

ಈ ಸಂಬಂಧ ನೆಲೋಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಜೆರಟಗಿ ಸರ್ಕಾರಿ ಆಸ್ಪತ್ರೆಗೆ ರವಾನಿಸಲಾಗಿದೆ.

# ಹೊರರಾಜ್ಯದ ಮನೆಗಳ್ಳನ ಬಂಧನ ಸ್ಮಶಾನದಲ್ಲಿ ಬಚ್ಚಿಟ್ಟಿದ್ದ 42 ಲಕ್ಷ ಮೌಲ್ಯದ ಮಾಲು ಜಪ್ತಿ

ಬೆಂಗಳೂರು,ಸೆ.23–ಮನೆ ಕಿಟಕಿಯ ಸರಳು ಮುರಿದು ಒಳನುಗ್ಗಿ ಚಿನ್ನಾಭರಣ, ವಿದೇಶಿ ಕರೆನ್ಸಿ ಹಾಗೂ ಐಪ್ಯಾಡ್ ಕಳವು ಮಾಡಿದ್ದ ಹೊರರಾಜ್ಯದ ಕುಖ್ಯಾತ ಮನೆಗಳ್ಳನನ್ನು ವಿಲ್ಸನ್ ಗಾರ್ಡನ್ ಪೊಲೀಸರು ಬಂಧಿಸಿ 42 ಲಕ್ಷ ಮೌಲ್ಯದ ಮಾಲು ಜಪ್ತಿ ಮಾಡಿದ್ದಾರೆ.

ತೆಲಂಗಾಣದ ರಂಗಾರೆಡ್ಡಿ ಜಿಲ್ಲೆಯ ನಾನವತ್ ವಿನೋದ್ ಕುಮಾರ್ ಅಲಿಯಾಸ್ ಮೊಹಮ್ಮದ್ ಬಶೀರ್(67) ಬಂಧಿತ ಆರೋಪಿಯಾಗಿದ್ದು, ಆತನನ್ನು ಹೆಚ್ಚಿನ ವಿಚಾರಣೆ ನಡೆಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ವಿಲ್ಸನ್ ಗಾರ್ಡನ್ ನ 10ನೇ ಕ್ರಾಸ್‌ನಲ್ಲಿ ವಾಸವಿರುವ ಶೋಭಾ ಲಕ್ಕೂರ್ ಆಗಸ್ಟ್ 31ರಂದು ದೂರು ನೀಡಿ ಮನೆಯ ಮುಂಬಾಗಿಲಿಗೆ ಬೀಗ ಹಾಕಿಕೊಂಡು ಮಲಗಿದ್ದ ವೇಳೆ ಕಿಟಕಿಯ ಸರಳು ಮುರಿದು ಮನೆಯೊಳಗೆ ಪ್ರವೇಶಿಸಿ, ಕೊಠಡಿಯ ಬೀರುವಿನಲ್ಲಿದ್ದ ಚಿನ್ನಾಭರಣ, ವಿದೇಶಿ ಕರೆನ್ಸಿ ಹಾಗೂ ಒಂದು ಐಪ್ಯಾಡ್ ಕಳವು ಮಾಡಿದ್ದರು ಎಂದು ತಿಳಿಸಿದ್ದರು.

ಈ ಸಂಬಂಧ ವಿಲ್ಸನ್ ಗಾರ್ಡನ್ ಠಾಣೆಯಲ್ಲಿ ದಾಖಲಾದ ಪ್ರಕರಣದ ತನಿಖೆ ಕೈಗೊಂಡ ಪೊಲೀಸರು ವಿವಿಧ ಆಯಾಮಗಳಲ್ಲಿ ತನಿಖೆ ನಡೆಸಿ, ಬಾತ್ಮೀದಾರರಿಂದ ಮಾಹಿತಿ ಸಂಗ್ರಹಿಸಿದ್ದರು. ಈ ಆಧಾರದ ಮೇಲೆ ಸೆಪ್ಟೆಂಬರ್ 11ರಂದು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೃತ್ಯ ಎಸಗಿರುವುದಾಗಿ ಒಪ್ಪಿಕೊಂಡಿದ್ದಾನೆ.

ನಂತರ ನ್ಯಾಯಾಲಯದ ಅನುಮತಿ ಪಡೆದು 13 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿದಾಗ, ಕಳವು ಮಾಡಿದ್ದ ವಸ್ತುಗಳನ್ನು ಹೊಸೂರು ಮುಖ್ಯರಸ್ತೆಯ ಬಡಾ ಮಕಾನ್ ಸ್ಮಶಾನದ ಬಳಿಯಿರುವ ಪಾಳುಬಿದ್ದ ಕಟ್ಟಡದಲ್ಲಿ ಇಟ್ಟಿರುವುದಾಗಿ ಆರೋಪಿ ಮಾಹಿತಿ ನೀಡಿದ್ದಾನೆ.

ಆರೋಪಿಯ ಮಾಹಿತಿ ಮೇರೆಗೆ ಸೆಪ್ಟೆಂಬರ್ 14ರಂದು ಪಾಳುಬಿದ್ದ ಕಟ್ಟಡದಲ್ಲಿ ಪರಿಶೀಲನೆ ನಡೆಸಿದ ಪೊಲೀಸರು 271 ಗ್ರಾಂ ಚಿನ್ನಾಭರಣ, ವಿದೇಶಿ ಕರೆನ್ಸಿ ಹಾಗೂ ಒಂದು ಐಪ್ಯಾಡ್ ವಶಪಡಿಸಿಕೊಂಡಿದ್ದಾರೆ. ಜಪ್ತಿ ಮಾಡಲಾದ ವಸ್ತುಗಳ ಒಟ್ಟು ಮೌಲ್ಯ 42 ಲಕ್ಷ ಎಂದು ಹೇಳಿದರು.

ಸೆಪ್ಟೆಂಬರ್ 15ರಂದು ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ನ್ಯಾಯಾಲಯವು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಕೇಂದ್ರ ವಿಭಾಗದ ಉಪ ಪೊಲೀಸ್ ಆಯುಕ್ತ ಅಕ್ಷಯ್ ಎಂ. ಹಾಕೆ, ಹಲಸೂರುಗೇಟ್ ಉಪ ವಿಭಾಗದ ಸಹಾಯಕ ಪೊಲೀಸ್ ಆಯುಕ್ತ ಸುಧೀರ್ ಎಸ್. ಅವರ ಮಾರ್ಗದರ್ಶನದಲ್ಲಿ, ವಿಲ್ಸನ್ ಗಾರ್ಡನ್ ಪೊಲೀಸ್ ಇನ್ಸ್‌ಪೆಕ್ಟರ್ ಪ್ರಕಾಶ್ ಕೆ. ಹಾಗೂ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಅರೋಪಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

# ವಿಧಾನಸಭೆಯಲ್ಲಿ ಅನಂತ್‌ನಾಗ್‌ಗೆ ಅಭಿನಂದನೆ

ಬೆಂಗಳೂರು, ಸೆ. 23:– ಭಾರತೀಯ ಚಲನಚಿತ್ರ ರಂಗದ ಅತ್ಯುನ್ನತ ಪ್ರಶಸ್ತಿ ಪುರಸ್ಕೃತರಾಗಿರುವ ನಟ ಅನಂತ್‌ನಾಗ್ ರವರನ್ನು ವಿಧಾನಸಭೆಯಲ್ಲಿಂದು ಅಭಿನಂದಿಸಲಾಯಿತು.

ವಿಧಾನಸಭಾಧ್ಯಕ್ಷ ಜಿ.ಎಸ್. ಪಾಟೀಲ್ ಅವರು ನಟ ಅನಂತ್‌ನಾಗ್ ಅವರನ್ನು ಅಭಿನಂದಿಸುವ ನಿರ್ಣಯವನ್ನು ಮಂಡಿಸಿ 1948 ರಂದು ಬಟ್ಕಳದ ಶಿರಾಲಿಯಲ್ಲಿ ಜನಿಸಿದ ಅನಂತ್‌ನಾಗ್ ಅವರು, ವಾಯುಸೇನೆ ಸೇರುವ ಕನಸು ಹೊತ್ತಿದ್ದರು. ನಂತರ ಅವರು ರಂಗಭೂಮಿಯತ್ತ ಮುಖ ಮಾಡಿ 1973 ರಲ್ಲಿ 'ಸಂಕಲ್ಪ' ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದರು.

ಚಿತ್ರರಂಗಕ್ಕೆ ಕಾಲಿಟ್ಟ ಆರಂಭದಲ್ಲಿಯೇ ಹೊಸ ಅಲೆಯ ನಾಯಕ ಎಂದು ಗುರುತಿಸಿಕೊಂಡು ಕೆಲವೇ ವರ್ಷಗಳಲ್ಲಿ ಸ್ಟಾರ್ ನಟರಾಗಿ ಹೊರಹೊಮ್ಮಿದರು. ಅವರ ಮೊದಲ ಹಿಂದಿ ಸಿನಿಮಾ ಅಂಕುರ್ ಮೂರು ರಾಷ್ಟ್ರ ಪ್ರಸಸ್ತಿ ಗಳಿಸಿರುವುದು ಸ್ಮರಣೀಯ ಎಂದರು.

ನಟ ಅನಂತ್‌ನಾಗ್ ಅವರು ರಂಗಭೂಮಿ, ಕಿರುತೆರೆ, ಚಲನಚಿತ್ರಕ್ಕೆ ಸೀಮೀತರಾಗದೆ 1989 ರಿಂದ 94 ರ ಅವಧಿಯಲ್ಲಿ ವಿಧಾನಪರಿಷತ್‌ನ ನಾಮ ನಿರ್ದೇಶಿತ ಸದಸ್ಯರಾಗಿ ಸೇವೆ ಸಲ್ಲಿಸಿ ನಂತರ 1994 ರಲ್ಲಿ ಬೆಂಗಳೂರಿನ ಮಲ್ಲೇಶ್ವರ ವಿಧಾನಸಭಾ ವಿಧಾನಸಭೆಗೆ ಆಯ್ಕೆಯಾಗಿ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರಾಗಿ ಸೇವೆ ಸಲ್ಲಿಸಿದ್ದರು ಎಂದರು.

ನಟ ಅನಂತ್‌ನಾಗ್ ಅವರಿಗೆ ಐದು ಬಾರಿ ರಾಜ್ಯ ಚಲನಚಿತ್ರ ಪ್ರಶಸ್ತಿ ಬಂದಿದೆ. ಪದ್ಮಭೂಷಣ ಸೇರಿದಂತೆ ಹಲವಾರು ಪ್ರಶಸ್ತಿಗೆ ಭಾಜನರಾಗಿದ್ದಾರೆ. ಕನ್ನಡದ ಮೇರುನಟ ಡಾ. ರಾಜ್‌ಕುಮಾರ್ ಅವರು ಕನ್ನಡ ಚಿತ್ರರಂಗದಲ್ಲಿ ಮೊದಲ ಬಾರಿಗೆ ದಾದಾ ಸಾಹೇಬಲ್ ಪಾಲ್ಕೆ ಪ್ರಶಸ್ತಿ ಪಡೆದಿದ್ದರು. ಈಗ ಅನಂತ್‌ನಾಗ್ ಅವರಿಗೂ ಪ್ರಶಸ್ತಿ ಬಂದಿರುವುದು ಸಂತಸ ತಂದಿದೆ. ಈ ಸದನ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ ಎಂದು ಹೇಳಿದರು

ಸಭಾಧ್ಯಕ್ಷರ ಅಭಿನಂದನಾ ನಿರ್ಣಯವನ್ನು ಬೆಂಬಲಿಸಿ ಉಪಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್, ಪ್ರತಿಪಕ್ಷ ನಾಯಕರಾದ ಆರ್. ಅಶೋಕ್, ಸದಸ್ಯರುಗಳಾದ ಮುನಿರತ್ನ, ಸುರೇಶ್‌ಕುಮಾರ್, ಶಿವರಾಮ್ ಹೆಬ್ಬಾರ್, ಉಪಸಭಾಪತಿ ಮಾಕಾಳು ವೈದ್ಯ ಇವರುಗಳು ಮಾತನಾಡಿ, ನಟ ಅನಂತ್‌ನಾಗ್ ಅವರ ನಟನಾ ಕೌಶಲ್ಯ, ನಡೆ, ನುಡಿ ಎಲ್ಲವನ್ನು ಶ್ಲಾಘಿಸಿ, ಅಭಿನಂದನಾ ನಿರ್ಣಯಕ್ಕೆ ಬೆಂಬಲ ವ್ಯಕ್ತಪಡಿಸಿದರು.

# ಇಸ್ರೇಲ್ ಐರ್ಲೆಂಡ್ ಫುಟ್‌ಬಾಲ್ ಪಂದ್ಯಕ್ಕೆ ವಿವಾದದ ಕಾವು

## ತಟಸ್ಥ ತಾಣದಲ್ಲಿ ಪಂದ್ಯ; ಐರಿಷ್ ಅಭಿಮಾನಿಗಳಿಗೆ ಪ್ರವೇಶವಿಲ್ಲ






ಡಬ್ಲಿನ್, ಸೆ.22: ಗಾಜಾ ಸಂಘರ್ಷದ ಹಿನ್ನೆಲೆಯಲ್ಲಿ ಇಸ್ರೇಲ್ ವಿರುದ್ಧದ ಪಂದ್ಯಗಳನ್ನು ಬಹಿಷ್ಕರಿಸಬೇಕೆಂಬ ಒತ್ತಡ ತೀವ್ರಗೊಂಡಿರುವ ನಡುವೆಯೇ, ಐರ್ಲೆಂಡ್ ಹಾಗೂ ಇಸ್ರೇಲ್ ನಡುವಿನ ಯುಇಎಫ್‌ಎ ನೇಷನ್ಸ್ ಲೀಗ್ ಪಂದ್ಯಗಳು ತಟಸ್ಥ ತಾಣಗಳಲ್ಲಿ ನಡೆಯಲಿವೆ. ಭದ್ರತಾ ಆತಂಕ, ಪ್ರತಿಭಟನೆಗಳು ಮತ್ತು ರಾಜಕೀಯ ವಿವಾದದಿಂದಾಗಿ ಸಾಮಾನ್ಯ ಅಂತಾರಾಷ್ಟ್ರೀಯ ಫುಟ್‌ಬಾಲ್ ಪಂದ್ಯವೊಂದು ಭಾರಿ ಚರ್ಚೆಗೆ ಗ್ರಾಸವಾಗಿದೆ.

ಸೆಪ್ಟೆಂಬರ್ 27ರಂದು ನಡೆಯಲಿರುವ 'ಅವೇ' ಪಂದ್ಯಕ್ಕೆ ಐರ್ಲೆಂಡ್ ತಂಡ ಹಂಗೇರಿಯ ಡೆಬ್ರೆಸೆನ್‌ನ ನಾಜಿರ್ದೆಯಿ ಕ್ರೀಡಾಂಗಣಕ್ಕೆ ತೆರಳಲಿದೆ. ಅಕ್ಟೋಬರ್ 4ರಂದು ಐರ್ಲೆಂಡ್‌ನ 'ಹೋಮ್' ಪಂದ್ಯವನ್ನು ಐರ್ಲೆಂಡ್‌ನಲ್ಲೇ ನಡೆಸದೆ ಸರ್ಬಿಯಾದ ಬಾಕಾ ಟೊಪೋಲಾದ ಟಿಎಸ್‌ಸಿ ಅರೇನಾದಲ್ಲಿ ಆಯೋಜಿಸಲಾಗಿದೆ. ಈ ಪಂದ್ಯ ಬಂದ್ ಬಾಗಿಲಿನ ಹಿಂದೆ ನಡೆಯಲಿದೆ.

### ಪಂದ್ಯ ಬಹಿಷ್ಕರಿಸಲು ಒತ್ತಡ

ಇಸ್ರೇಲ್‌ನ ಗಾಜಾ ಸೇನಾ ಕಾರ್ಯಾಚರಣೆಯನ್ನು ವಿರೋಧಿಸಿ ಪಂದ್ಯಗಳನ್ನು ಆಡಬಾರದು ಎಂದು ಐರ್ಲೆಂಡ್‌ನಲ್ಲಿ ಅಭಿಮಾನಿಗಳು, ಕ್ರೀಡಾಪಟುಗಳು ಹಾಗೂ ವಿವಿಧ ಸಂಘಟನೆಗಳು ಒತ್ತಾಯಿಸುತ್ತಿವೆ. ಜುಲೈನಲ್ಲಿ ನಡೆದ ಫುಟ್‌ಬಾಲ್ ಅಸೋಸಿಯೇಷನ್ ಆಫ್ ಐರ್ಲೆಂಡ್ (FAI) ವಿಶೇಷ ಸಾಮಾನ್ಯ ಸಭೆಯಲ್ಲಿ ಪಂದ್ಯಗಳನ್ನು ಆಡಲು 75 ಪ್ರತಿನಿಧಿಗಳು ಬೆಂಬಲಿಸಿದರೆ, 32 ಮಂದಿ ವಿರೋಧಿಸಿದ್ದರು.

ಪಂದ್ಯಗಳನ್ನು ಆಡದಿದ್ದರೆ ಯುಇಎಫ್‌ಎಯಿಂದ ಶಿಸ್ತು ಕ್ರಮ ಎದುರಾಗುವ ಸಾಧ್ಯತೆ ಮತ್ತು ಐರಿಷ್ ಫುಟ್‌ಬಾಲ್‌ಗೆ ಆರ್ಥಿಕ ಹಾಗೂ ಆಡಳಿತಾತ್ಮಕ ಪರಿಣಾಮ ಉಂಟಾಗಬಹುದೆಂಬ ಕಾರಣವನ್ನು ಈಂಖ ಮುಂದಿಟ್ಟಿದೆ. ಈಂಖ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡೇವಿಡ್ ಕೌರೆಲ್, ಐರ್ಲೆಂಡ್‌ನಲ್ಲಿ ಪಂದ್ಯಗಳನ್ನು ಆಡಿಸುವ ಕುರಿತು ಸಾರ್ವಜನಿಕರಲ್ಲಿ ಇರುವ ತೀವ್ರ ಭಾವನೆಗಳನ್ನು ಸಂಸ್ಥೆ ಅರ್ಥಮಾಡಿಕೊಂಡಿದೆ, ಆದರೆ ಯುಇಎಫ್‌ಎಯ ನಿಲುವಿನಿಂದ ಈಂಖ ಕಠಿಣ ಪರಿಸ್ಥಿತಿಯಲ್ಲಿದೆ ಎಂದು ಹೇಳಿದ್ದಾರೆ.

### ಐರಿಷ್ ಅಭಿಮಾನಿಗಳಿಗೆ ಟಿಕೆಟ್ ಇಲ್ಲ

ಎರಡೂ ಪಂದ್ಯಗಳಿಗೆ ಐರ್ಲೆಂಡ್ ಅಭಿಮಾನಿಗಳಿಗೆ ಯಾವುದೇ ಟಿಕೆಟ್ ಮಾರಾಟ ಮಾಡದಿರಲು ಈಂಖ ನಿರ್ಧರಿಸಿದೆ. ಸೆಪ್ಟೆಂಬರ್ 27ರ ಡೆಬ್ರೆಸೆನ್ ಪಂದ್ಯದಲ್ಲಿ ಇಸ್ರೇಲ್ ಅಭಿಮಾನಿಗಳಿಗೆ ಸೀಮಿತ ಸಂಖ್ಯೆಯಲ್ಲಿ ಪ್ರವೇಶ ಕಲ್ಪಿಸಲಾಗುತ್ತದೆ. ಅಕ್ಟೋಬರ್ 4ರ ಸರ್ಬಿಯಾ ಪಂದ್ಯ ಸಂಪೂರ್ಣ ಬಂದ್ ಬಾಗಿಲಿನ ಹಿಂದೆ ನಡೆಯಲಿದೆ. ಈಂಖ ಈ ಕ್ರಮಕ್ಕೆ ಕಾರ್ಯಾಚರಣೆ ಹಾಗೂ ಸುರಕ್ಷತಾ ಕಾರಣಗಳನ್ನು ಉಲ್ಲೇಖಿಸಿದೆ.

ಐರ್ಲೆಂಡ್‌ನ ಸಾರ್ವಜನಿಕ ಪ್ರಸಾರ ಸಂಸ್ಥೆ RTÉ ಕೂಡ ತನ್ನ ಸಾಮಾನ್ಯ ಕ್ರೀಡಾ ಪ್ರಸಾರವನ್ನು ಕಡಿತಗೊಳಿಸಿದೆ. ಜಾಹೀರಾತು ಅಥವಾ ಪ್ರಾಯೋಜಕತ್ವದ ಆದಾಯ ಪಡೆಯದೆ, ಒಪ್ಪಂದದಡಿ ಅಗತ್ಯವಿರುವ ಪ್ರಸಾರವನ್ನು ಮಾತ್ರ ನಡೆಸಲಿದೆ. ಸ್ಟುಡಿಯೊ ಕಾರ್ಯಕ್ರಮ, ಪಂಡಿತರ ವಿಶ್ಲೇಷಣೆ ಮತ್ತು ಸಾಮಾನ್ಯ ನಿರೂಪಣೆಯನ್ನೂ ಕೈಬಿಡಲಾಗಿದೆ.

### ಭವಿಷ್ಯದ ಡ್ರಾಗಳಲ್ಲೂ ಮುಖಾಮುಖಿ ಬೇಡಿಕೆ




ಇಸ್ರೇಲ್ ಮತ್ತು ಐರ್ಲೆಂಡ್ ತಂಡಗಳನ್ನು ಭವಿಷ್ಯದ ಯುಇಎಫ್‌ಎ ಸ್ಪರ್ಧೆಗಳ ಡ್ರಾಗಳಲ್ಲಿ ಪ್ರತ್ಯೇಕವಾಗಿ ಇರಿಸಬೇಕೆಂದು FAI ಮನವಿ ಮಾಡಿತ್ತು. ಆದರೆ ಯುಇಎಫ್‌ಎ ಇಂತಹ ನಿರ್ಧಾರಗಳನ್ನು ಭದ್ರತಾ ಪರಿಸ್ಥಿತಿ ಹಾಗೂ ನೇರ ಸಂಘರ್ಷದಂತಹ ಅಂಶಗಳನ್ನು ಆಧರಿಸಿ ಪ್ರಕರಣವಾರು ಪರಿಶೀಲಿಸುವುದಾಗಿ ತಿಳಿಸಿದೆ. ಎರಡೂ ದೇಶಗಳು ಪರಸ್ಪರ ನೇರ ಸಂಘರ್ಷದಲ್ಲಿಲ್ಲ ಎಂಬ ಕಾರಣಕ್ಕೆ ಅವುಗಳನ್ನು ಕಡ್ಡಾಯವಾಗಿ ಪ್ರತ್ಯೇಕಿಸುವ ಅಗತ್ಯವಿಲ್ಲ ಎಂದು ಯುಇಎಫ್‌ಎ ಸ್ಪಷ್ಟಪಡಿಸಿದೆ.

### ಕೋಚ್ ಹೇಳಿಕೆಗೆ ಇಸ್ರೇಲ್ ಆಕ್ಷೇಪ

ಐರ್ಲೆಂಡ್ ಕೋಚ್ ಹೈಮಿರ್ ಹಾಲ್‌ಗ್ರಿಮ್ಸನ್ ಪಂದ್ಯ ಆಡುವ ಕುರಿತು ಅಸಮಾಧಾನ ವ್ಯಕ್ತಪಡಿಸಿದ್ದು, ತಂಡವು 'ಜನಾಂಗಹತ್ಯೆಯ ವಿರುದ್ಧ' ಆಡುತ್ತಿದೆ ಎಂದು ಹೇಳಿದ್ದಾರೆ. ಇದಕ್ಕೆ ಇಸ್ರೇಲ್ ಫುಟ್‌ಬಾಲ್ ಅಸೋಸಿಯೇಷನ್ ತೀವ್ರ ಪ್ರತಿಕ್ರಿಯೆ ನೀಡಿದೆ. ಕೋಚ್ ಹೇಳಿಕೆಯನ್ನು ಅದು ಟೀಕಿಸಿದೆ.

ಇದೇ ವೇಳೆ FAI ಫುಟ್‌ಬಾಲ್ ನಿರ್ದೇಶಕ ಜಾನ್ ಮಾರ್ಟಿನ್ ಪಂದ್ಯಗಳನ್ನು ಆಡಿಸುವ ನಿರ್ಧಾರದ ಹೊಣೆಗಾರಿಕೆಯನ್ನು ಆಟಗಾರರ ಮೇಲೆ ಹಾಕಬಾರದು ಎಂದು ಹೇಳಿದ್ದಾರೆ. ಪಂದ್ಯಗಳನ್ನು ಆಡದಿದ್ದರೆ ಐರಿಷ್ ಫುಟ್‌ಬಾಲ್‌ಗೆ ಯುಇಎಫ್‌ಎ ಕ್ರಮದಿಂದ ಗಂಭೀರ ಪರಿಣಾಮ ಎದುರಾಗಬಹುದು ಎಂಬುದು FAIಯ ಪ್ರಮುಖ ಆತಂಕವಾಗಿದೆ.

### ಪ್ಯಾಲೆಸ್ತೀನ್‌ಗೆ ಐರ್ಲೆಂಡ್ ಬೆಂಬಲ

2023ರ ಅಕ್ಟೋಬರ್‌ನಲ್ಲಿ ಇಸ್ರೇಲ್–ಹಮಾಸ್ ಸಂಘರ್ಷ ಆರಂಭವಾದ ನಂತರ ಐರ್ಲೆಂಡ್ ಪ್ಯಾಲೆಸ್ತೀನ್‌ಗೆ ಬೆಂಬಲ ವ್ಯಕ್ತಪಡಿಸುತ್ತಿರುವ ಪ್ರಮುಖ ಯುರೋಪಿಯನ್ ರಾಷ್ಟ್ರಗಳಲ್ಲಿ ಒಂದಾಗಿದೆ. 2024ರಲ್ಲಿ ಐರ್ಲೆಂಡ್ ಪ್ಯಾಲೆಸ್ತೀನ್ ರಾಜ್ಯವನ್ನು ಅಧಿಕೃತವಾಗಿ ಗುರುತಿಸಿತ್ತು. ಗಾಜಾ ಕುರಿತ ಅಂತಾರಾಷ್ಟ್ರೀಯ ನ್ಯಾಯಾಲಯದ ಪ್ರಕರಣದಲ್ಲೂ ದಕ್ಷಿಣ ಆಫ್ರಿಕಾದ ಅರ್ಜಿಗೆ ಐರ್ಲೆಂಡ್ ಬೆಂಬಲ ನೀಡಿದೆ.

ಇತ್ತೀಚಿನ ಬೆಳವಣಿಗೆಯಲ್ಲಿ 160ಕ್ಕೂ ಹೆಚ್ಚು ಐರಿಷ್ ಕ್ರೀಡಾಪಟುಗಳು ಇಸ್ರೇಲ್ ವಿರುದ್ಧದ ಪಂದ್ಯಗಳನ್ನು ಬಹಿಷ್ಕರಿಸುವಂತೆ ಕರೆ ನೀಡಿರುವ ಮುಕ್ತ ಪತ್ರಕ್ಕೆ ಸಹಿ ಹಾಕಿದ್ದಾರೆ. ಪಂದ್ಯಗಳನ್ನು ನಡೆಸುವ ಈಂಖ ಮತ್ತು ಯುಇಎಫ್‌ಎ ವಿರುದ್ಧವೂ ಪ್ರತಿಭಟನೆಗಳು ಮುಂದುವರಿದಿವೆ.

- ಸೆ.27: ಇಸ್ರೇಲ್ ಐರ್ಲೆಂಡ್ ಪಂದ್ಯ, ಡೆಬ್ರೆಸೆನ್, ಹಂಗೇರಿ
- ಅ.4: ಐರ್ಲೆಂಡ್‌ಇಸ್ರೇಲ್ ಪಂದ್ಯ, ಬಾಕಾ ಟೊಪೋಲಾ, ಸರ್ಬಿಯಾ
- ಎರಡೂ ಪಂದ್ಯಗಳಿಗೆ ಐರಿಷ್ ಅಭಿಮಾನಿಗಳಿಗೆ ಟಿಕೆಟ್ ಇಲ್ಲ
- ಅ.4ರ ಪಂದ್ಯ ಬಂದ್ ಬಾಗಿಲಿನ ಹಿಂದೆ ನಡೆಯಲಿದೆ
- FAIಯ ಪಂದ್ಯ ಬಹಿಷ್ಕಾರ ಪ್ರಸ್ತಾವನೆಗೆ 75–32 ಮತಗಳ ಅನುಮೋದನೆ
- 160ಕ್ಕೂ ಹೆಚ್ಚು ಐರಿಷ್ ಕ್ರೀಡಾಪಟುಗಳಿಂದ ಬಹಿಷ್ಕಾರಕ್ಕೆ ಕರೆ
- ಭವಿಷ್ಯದ ಡ್ರಾಗಳಲ್ಲಿ ಇಸ್ರೇಲ್– ಐರ್ಲೆಂಡ್ ತಂಡಗಳನ್ನು ಪ್ರತ್ಯೇಕಿಸುವ ಈಂಖ ಮನವಿಯನ್ನು ಯುಇಎಫ್‌ಎ ಒಪ್ಪಿಲ್ಲ.

# ಲಂಡನ್‌ಗಷ್ಟೇ ಸೀಮಿತವಲ್ಲ ಬ್ರಿಟನ್ ಫ್ಯಾಷನ್ ಲೋಕ

## ರಾಜಧಾನಿಯಾಚೆಗೂ ಪ್ರತಿಭೆ ಬೆಳೆಸಲು 'ಫ್ಯಾಷನ್ ಬ್ರಿಟನ್' ಉಪಕ್ರಮ




ಲಂಡನ್ ಫ್ಯಾಷನ್ ವೀಕ್ ಮುಕ್ತಾಯದ ಬೆನ್ನಲ್ಲೇ ಬ್ರಿಟನ್‌ನ ಫ್ಯಾಷನ್ ಕ್ಷೇತ್ರವನ್ನು ಲಂಡನ್ ಕೇಂದ್ರಿತವಾಗಿರಿಸದೆ ದೇಶದ ವಿವಿಧ ಭಾಗಗಳಲ್ಲಿರುವ ಪ್ರತಿಭೆಗಳಿಗೆ ಅವಕಾಶ ಕಲ್ಪಿಸುವ ಪ್ರಯತ್ನ ಆರಂಭವಾಗಿದೆ.

ಬ್ರಿಟಿಷ್ ಫ್ಯಾಷನ್ ಕೌನ್ಸಿಲ್ 'ಫ್ಯಾಷನ್ ಬ್ರಿಟನ್' ಎಂಬ ಉಪಕ್ರಮದ ಮೂಲಕ ಲಂಡನ್‌ನ ಹೊರಗಿನ ಫ್ಯಾಷನ್ ಪ್ರತಿಭೆಗಳನ್ನು ಉದ್ಯಮಕ್ಕೆ ಸಂಪರ್ಕಿಸಲು ಮುಂದಾಗಿದೆ. ಈ ವರ್ಷದ ಲಂಡನ್ ಫ್ಯಾಷನ್ ವೀಕ್‌ಗೆ ಸಂಬಂಧಿಸಿದಂತೆ ಇಂಗ್ಲೆಂಡ್, ವೇಲ್ಸ್ ಹಾಗೂ ಸ್ಕಾಟ್ಲೆಂಡ್‌ನ ವಿವಿಧ ನಗರಗಳಲ್ಲಿ ಪಾಪ್‌ಅಪ್ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಬ್ರಿಟನ್‌ನ ಫ್ಯಾಷನ್ ಕ್ಷೇತ್ರ ಲಂಡನ್‌ಗಷ್ಟೇ ಸೀಮಿತವಲ್ಲ ಎಂಬ ಸಂದೇಶ ಸಾರಲಾಗಿದೆ. ಮುಂದಿನ ವರ್ಷ ಉತ್ತರ ಐರ್ಲೆಂಡ್‌ನ್ನೂ ಈ ಕಾರ್ಯಕ್ರಮಕ್ಕೆ ಸೇರಿಸಲಾಗುವುದು ಎಂದು ಕೌನ್ಸಿಲ್ ತಿಳಿಸಿದೆ.

ಹೌಸ್ ಆಫ್ ಕಾಮನ್ಸ್‌ನ ಇತ್ತೀಚಿನ ವರದಿ ಪ್ರಕಾರ, 2022ರಲ್ಲಿ ಬ್ರಿಟನ್‌ನ ಸೃಜನಶೀಲ ಉದ್ಯಮಗಳ ಆರ್ಥಿಕ ಉತ್ಪಾದನೆಯ ಶೇ.51ರಷ್ಟು





ಲಂಡನ್‌ನಿಂದಲೇ ಬಂದಿತ್ತು. ಆದರೆ ಮ್ಯಾಂಚೆಸ್ಟರ್, ಲೀಡ್ಸ್ ಸೇರಿದಂತೆ ದೇಶದ ಹಲವು ನಗರಗಳಲ್ಲೂ ಸೃಜನಶೀಲ ಉದ್ಯಮಗಳ ಪ್ರಮುಖ ಕೇಂದ್ರಗಳು ಬೆಳೆಯುತ್ತಿವೆ.

### 'ಲಂಡನ್‌ಗೆ ಬರಲೇಬೇಕು ಎಂಬ ನಿಯಮವಿಲ್ಲ'

ಅಂತರರಾಷ್ಟ್ರೀಯ ಫ್ಯಾಷನ್ ಬ್ರ್ಯಾಂಡ್ 'ಲವರ್‌ಬಾಯ್'ನ ಸಂಸ್ಥಾಪಕ ಹಾಗೂ ಸೃಜನಶೀಲ ನಿರ್ದೇಶಕ ಚಾರ್ಲ್ಸ್ ಜೆಫ್ರಿ, ಫ್ಯಾಷನ್ ಕ್ಷೇತ್ರದಲ್ಲಿ ಯಶಸ್ವಿಯಾಗಲು ಲಂಡನ್‌ಗೆ ಬರಲೇಬೇಕು ಎಂಬ ಕಲ್ಪನೆ ಬದಲಾಗಬೇಕಿದೆ ಎಂದು ಹೇಳಿದ್ದಾರೆ.

ವಿವಿಧ ನಗರಗಳಲ್ಲಿ ಉತ್ತಮ ಗುಣಮಟ್ಟದ ಫ್ಯಾಷನ್ ಶಿಕ್ಷಣ ಮತ್ತು ತರಬೇತಿ ಲಭ್ಯವಿದೆ. ತಮ್ಮ ವೃತ್ತಿಜೀವನದ ಆರಂಭದಲ್ಲಿ ಪೂರ್ವ ಲಂಡನ್‌ನ ಡಾಲ್ಸ್ಟನ್‌ನ ಸಣ್ಣ ಸ್ಟುಡಿಯೊದಲ್ಲಿ ಕೆಲಸ ಮಾಡುತ್ತಿದ್ದುದನ್ನು ನೆನಪಿಸಿಕೊಂಡ ಅವರು, ಇದೀಗ ಲಂಡನ್‌ನಲ್ಲಿದ್ದ ಹಲವು ಬಟ್ಟೆ ಮಾರುಕಟ್ಟೆಗಳು ಕಣ್ಮರೆಯಾಗಿವೆ. ಮ್ಯಾಂಚೆಸ್ಟರ್‌ನ ಸಣ್ಣ ಬಟ್ಟೆ ಅಂಗಡಿಗಳಲ್ಲಿ ಕಡಿಮೆ ದರದಲ್ಲಿ ಉತ್ತಮ ವಸ್ತುಗಳು ದೊರೆಯುತ್ತವೆ ಎಂದಿದ್ದಾರೆ.

### ಬರ್ಮಿಂಗ್‌ಹ್ಯಾಮ್ ಪ್ರತಿಭೆಗೂ ಅವಕಾಶ

ಬರ್ಮಿಂಗ್‌ಹ್ಯಾಮ್ ಸಿಟಿ ಯುನಿವರ್ಸಿಟಿಯ ಫ್ಯಾಷನ್ ವಿನ್ಯಾಸ ಪದವೀಧರೆ ಇಮಾರ್ನಿ ಬೆನೆಟ್ ಅವರು ಲಂಡನ್‌ಗೆ ತೆರಳಿ ಸಹಪಾಠಿಗಳೊಂದಿಗೆ ತಮ್ಮ ವಿನ್ಯಾಸ ಯೋಜನೆಯನ್ನು ಪ್ರದರ್ಶಿಸಿದ್ದಾರೆ.

22 ವರ್ಷದ ಬೆನೆಟ್ ಅವರ ಪ್ರಕಾರ, ಲಂಡನ್ ದೊಡ್ಡ ನಗರವಾಗಿರುವುದರಿಂದ ಅಲ್ಲಿ ಅವಕಾಶಗಳು ಹೆಚ್ಚಿವೆ. ಆದರೆ ಬರ್ಮಿಂಗ್‌ಹ್ಯಾಮ್‌ನಲ್ಲಿಯೂ ಫ್ಯಾಷನ್ ಕ್ಷೇತ್ರದ ಕೆಲಸಗಳಿಗೆ ಈಗ ಹೆಚ್ಚಿನ ಮನ್ನಣೆ ದೊರೆಯುತ್ತಿದೆ. ವಿವಿಧ ನಗರಗಳ ವಿಭಿನ್ನ ಸಂಸ್ಕೃತಿ, ಬಣ್ಣಗಳ ಬಳಕೆ ಮತ್ತು ಜೀವನಶೈಲಿ ವಿನ್ಯಾಸಕರ ದೃಷ್ಟಿಕೋನವನ್ನೇ ಬದಲಾಯಿಸಬಹುದು ಎಂದು ಅವರು ಹೇಳಿದ್ದಾರೆ.

ಅದೇ ವಿಶ್ವವಿದ್ಯಾಲಯದ ಮತ್ತೊಬ್ಬ ಪದವೀಧರ ಸೀನ್ ಪಜರಿಲೊ, ತಂತ್ರಜ್ಞಾನ ಮತ್ತು ಫ್ಯಾಷನ್ ಕ್ಷೇತ್ರಗಳ ನಡುವಿನ ಸಂಯೋಜನೆಯಿಂದ ಮುಂದಿನ ದಿನಗಳಲ್ಲಿ ಹೊಸ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

### ಸ್ಥಳೀಯ ಮಟ್ಟದಲ್ಲೇ ಮಾರ್ಗದರ್ಶನ

ಬ್ರಿಟಿಷ್ ಫ್ಯಾಷನ್ ಕೌನ್ಸಿಲ್‌ನ ನೆಟ್‌ವರ್ಕ್ ನಿರ್ದೇಶಕಿ ನಟಾಲಿ ಪಾಟರ್ ಅವರ ಪ್ರಕಾರ, 'ಫ್ಯಾಷನ್ ಬ್ರಿಟನ್' ಉಪಕ್ರಮದ ಉದ್ದೇಶ ಬ್ರಿಟಿಷ್ ಫ್ಯಾಷನ್ ಲಂಡನ್‌ಗಿಂತ ದೊಡ್ಡದು ಎಂಬುದನ್ನು ಗುರುತಿಸುವುದು.

ಲಂಡನ್ ಫ್ಯಾಷನ್ ವೀಕ್‌ಗೂ ಮುನ್ನ ಲಂಡನ್, ಬ್ರಿಸ್ಟಲ್, ಮ್ಯಾಂಚೆಸ್ಟರ್, ಲಿವರ್‌ಪೂಲ್, ನ್ಯೂಕ್ಯಾಸಲ್, ಎಡಿನ್‌ಬರ್ಗ್, ಡಂಡಿ ಮತ್ತು ಕಾರ್ಡಿಫ್ ನಗರಗಳಲ್ಲಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ.

ದೇಶದ ವಿವಿಧ ಭಾಗಗಳ ಪ್ರತಿಭೆಗಳಿಗೆ ಸ್ಥಳೀಯ ಹಾಗೂ ಪ್ರಾದೇಶಿಕ ಮಟ್ಟದಲ್ಲೇ ಅಗತ್ಯ ಮೂಲಸೌಕರ್ಯ, ಉದ್ಯಮ ಸಂಪರ್ಕ, ಮಾರ್ಗದರ್ಶನ ಮತ್ತು ಚಿಲ್ಲರೆ ಮಾರುಕಟ್ಟೆ ಪ್ರವೇಶ ಕಲ್ಪಿಸುವುದು ಉಪಕ್ರಮದ ಉದ್ದೇಶವಾಗಿದೆ ಎಂದು ಪಾಟರ್ ವಿವರಿಸಿದ್ದಾರೆ.

### 'ಲಂಡನ್ ಇನ್ನೂ ಕೇಂದ್ರವಾಗಿರಲಿದೆ'

ಬ್ರಿಟಿಷ್ ವಿನ್ಯಾಸಕಿ ಪ್ರಿಯಾ ಅಹ್ಲುವಾಲಿಯಾ, ಫ್ಯಾಷನ್ ಕ್ಷೇತ್ರದಲ್ಲಿ ಲಂಡನ್ ಅನ್ನು 'ಕೇಂದ್ರ'ವೆಂದು ನೋಡುವ ಮನೋಭಾವ ಇನ್ನೂ ಇದೆ ಎಂದು ಹೇಳಿದ್ದಾರೆ. ಉತ್ತರ ಇಂಗ್ಲೆಂಡ್, ವೇಲ್ಸ್ ಮತ್ತು ಸ್ಕಾಟ್ಲೆಂಡ್‌ನಿಂದಲೂ ಅತ್ಯುತ್ತಮ ವಿನ್ಯಾಸಕರು ಹೊರಹೊಮ್ಮಿದ್ದಾರೆ ಎಂದು ಅವರು ಗಮನಸೆಳೆದಿದ್ದಾರೆ.

ಆದರೆ ಫ್ಯಾಷನ್ ಕ್ಷೇತ್ರವನ್ನು ವಿಕೇಂದ್ರೀಕರಿಸಿದರೂ ಲಂಡನ್ ಬ್ರಿಟನ್‌ನ ಫ್ಯಾಷನ್ ಕೇಂದ್ರವಾಗಿ ಮುಂದುವರಿಯಲಿದೆ. ಹೀಗಾಗಿ ಲಂಡನ್‌ಗೆ ಬಂದು ಪ್ರದರ್ಶನ ನೀಡಬೇಕಾದ ಪ್ರತಿಭೆಗಳಿಗೆ ಪ್ರಯಾಣ ಮತ್ತು ಇತರ ವೆಚ್ಚಗಳಲ್ಲೂ ನೆರವು ನೀಡುವ ವ್ಯವಸ್ಥೆ ಅಗತ್ಯ ಎಂದು ಅವರು ಹೇಳಿದ್ದಾರೆ.

ಫ್ಯಾಷನ್ ಕ್ಷೇತ್ರ ಪ್ರವೇಶಿಸಲು ವಿಶ್ವವಿದ್ಯಾಲಯದ ಪದವಿ ನೆರವಾಗಬಹುದು. ಆದರೆ ಅಂತಿಮವಾಗಿ ಪ್ರತಿಭೆ, ಕೆಲಸದ ಗುಣಮಟ್ಟ ಮತ್ತು ಪರಿಶ್ರಮವೇ ಪ್ರಮುಖ ಎಂದು ಚಾರ್ಲ್ಸ್ ಜೆಫ್ರಿ ಅಭಿಪ್ರಾಯಪಟ್ಟಿದ್ದಾರೆ.

- ಲಂಡನ್ ಫ್ಯಾಷನ್ ವೀಕ್ ಅನ್ನು ದೇಶದ ಇತರ ಭಾಗಗಳಿಗೂ ವಿಸ್ತರಿಸುವ ಪ್ರಯತ್ನ.
- ಇಂಗ್ಲೆಂಡ್, ವೇಲ್ಸ್ ಮತ್ತು ಸ್ಕಾಟ್ಲೆಂಡ್‌ನಲ್ಲಿ ಪಾಪ್‌ಅಪ್ ಕಾರ್ಯಕ್ರಮಗಳು.
- ಮುಂದಿನ ವರ್ಷ ಉತ್ತರ ಐರ್ಲೆಂಡ್‌ಗೂ ಕಾರ್ಯಕ್ರಮ ವಿಸ್ತರಣೆ.
- ಮ್ಯಾಂಚೆಸ್ಟರ್, ಲೀಡ್ಸ್ ಸೇರಿದಂತೆ ಹಲವು ನಗರಗಳಲ್ಲಿ ಸೃಜನಶೀಲ ಉದ್ಯಮಗಳ ಬೆಳವಣಿಗೆ.
- ಸ್ಥಳೀಯ ಪ್ರತಿಭೆಗಳಿಗೆ ಉದ್ಯಮ ಸಂಪರ್ಕ, ಮಾರ್ಗದರ್ಶನ ಮತ್ತು ಮಾರುಕಟ್ಟೆ ಅವಕಾಶ ಕಲ್ಪಿಸುವ ಉದ್ದೇಶ.
- ಲಂಡನ್ ಇನ್ನೂ ಬ್ರಿಟನ್‌ನ ಫ್ಯಾಷನ್ ಕ್ಷೇತ್ರದ ಪ್ರಮುಖ ಕೇಂದ್ರವಾಗಿದ್ದರೂ, ದೇಶದ ಇತರ ಭಾಗಗಳ ಪ್ರತಿಭೆಗೂ ಹೆಚ್ಚಿನ ಅವಕಾಶ ಕಲ್ಪಿಸುವ ಗುರಿ.

# ಜೀವನ ರೂಪಿಸಿರುವ ಧಾರ್ಮಿಕ ತತ್ವಗಳು ಮತ್ತು ಸಾಮಾಜಿಕ ನಿಯಮಗಳು

ಮನುಷ್ಯನ ಜನನದಿಂದ ಹಿಡಿದು ಅಂತ್ಯಕ್ರಿಯೆಯವರೆಗೂ, ಧಾರ್ಮಿಕ ತತ್ವಗಳು ಮತ್ತು ಸಾಮಾಜಿಕ ನಿಯಮಗಳ ಮೂಲಕ ಜೀವನವನ್ನು ರೂಪಿಸುವಲ್ಲಿ ಮಸೀದಿಗಳು ಪ್ರಮುಖ ಪಾತ್ರವಹಿಸಿವೆ. ಮಸೀದಿಗಳು ಆರಾಧನಾ ಸ್ಥಳಗಳಾಗಿವೆ ಎಂಬುದು ನಿರ್ವಿವಾದ ಸತ್ಯ. ಆದರೆ, ಇಸ್ಲಾಂನಲ್ಲಿ ಆರಾಧನೆಯು ಕೇವಲ ಪ್ರಾರ್ಥನೆ, ಉಪವಾಸ, ತೀರ್ಥಯಾತ್ರೆ ಮತ್ತು ದಾನ-ಧರ್ಮಗಳಿಗೆ ಮಾತ್ರ ಸೀಮಿತವಾಗಿಲ್ಲ. ಸಹೋದರ-ಸಹೋದರಿಯರು, ಪೋಷಕರು, ಸಮಾಜ ಮತ್ತು ಸಹ-ನಾಗರಿಕರ ಹಕ್ಕುಗಳನ್ನು ಪೂರೈಸುವುದು ಕೂಡ ಸೇರಿದೆ.

ಪ್ರವಾದಿ ಮುಹಮ್ಮದ್ (ಸ) ಅವರ ಕಾಲದಲ್ಲಿ, ಮಸೀದಿಗಳು ಸಮುದಾಯದ ಎಲ್ಲಾ ನ್ಯಾಯಸಮ್ಮತ ಅಗತ್ಯಗಳನ್ನು ಪೂರೈಸುವ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿದ್ದವು. ಪ್ರವಾದಿಯವರ ಮಸೀದಿಯ (ಮಸ್ಜಿದ್-ಅನ್-ನಬವಿ) ಇತಿಹಾಸವನ್ನು ಗಮನಿಸಿದರೆ, 'ಸಹೀಹ್ ಅಲ್-ಬುಖಾರಿ'ಯ ನಿರೂಪಣೆಗಳ ಪ್ರಕಾರ, ಮಸೀದಿಯ ಒಂದು ಭಾಗವನ್ನು ಆರಾಧಕರು, ದೇವರ ಸ್ಮರಣೆಯಲ್ಲಿ ತೊಡಗಿರುವವರು ಮತ್ತು ಜ್ಞಾನಾಕಾಂಕ್ಷಿಗಳಿಗಾಗಿ ಮೀಸಲಿಡಲಾಗಿತ್ತು; ಇನ್ನೊಂದು ಭಾಗವನ್ನು ಸಾಮಾಜಿಕ ಮತ್ತು ಸಮುದಾಯದ ವ್ಯವಹಾರಗಳಿಗಾಗಿ ಬಳಸಲಾಗುತ್ತಿತ್ತು. ಅಲ್ಲಿ ರೋಗಿಗಳ ಆರೈಕೆಗಾಗಿ ಡೇರೆಗಳನ್ನು ಹಾಕಲಾಗುತ್ತಿತ್ತು, ಅಗತ್ಯವಿರುವವರಿಗೆ ಸಂಪತ್ತು ಮತ್ತು ಜೀವನಾವಶ್ಯಕ ವಸ್ತುಗಳನ್ನು ವಿತರಿಸಲಾಗುತ್ತಿತ್ತು, ವಿವಾಹ ಸಮಾರಂಭಗಳನ್ನು ನಡೆಸಲಾಗುತ್ತಿತ್ತು, ದೈನಂದಿನ ಸಾಮಾಜಿಕ ಮತ್ತು ಕಾನೂನು ವಿಷಯಗಳ ಬಗ್ಗೆ ಚರ್ಚಿಸಲಾಗುತ್ತಿತ್ತು, ಸಾರ್ವಜನಿಕ ವಿಷಯಗಳ ಕುರಿತು ಸಮಾಲೋಚನೆ ನಡೆಸಲಾಗುತ್ತಿತ್ತು, ಊಟದ



ವ್ಯವಸ್ಥೆ ಮತ್ತು ಹಂಚಿಕೆ ನಡೆಯುತ್ತಿತ್ತು.

ಇಂದು, ಮಸೀದಿಗಳು ಏಕತೆ ಮತ್ತು ಸಹೋದರತ್ವವನ್ನು ಉತ್ತೇಜಿಸುವ ತುರ್ತು ಅಗತ್ಯವಿದೆ. ದೇಶವು ವಿಪತ್ತುಗಳು ಅಥವಾ ಸಂಕಷ್ಟಗಳನ್ನು ಎದುರಿಸಿದಾಗಲೆಲ್ಲಾ, ಅನೇಕ ಮಸೀದಿಗಳು ತಮ್ಮ ಬಾಗಿಲುಗಳನ್ನು ತೆರೆದಿದ್ದಲ್ಲದೆ, ಧರ್ಮ ಅಥವಾ ಸಮುದಾಯದ ಭೇದವಿಲ್ಲದೆ ಸಂತ್ರಸ್ತರಿಗೆ ಪರಿಹಾರವನ್ನು ಒದಗಿಸಿವೆ ಎಂಬುದು ಪದೇ ಪದೇ ಕಂಡುಬಂದಿದೆ. ರಾಷ್ಟ್ರೀಯ ಏಕತೆ, ಕೋಮು ಸೌಹಾರ್ದತೆ, ಶಿಕ್ಷಣ, ವ್ಯಕ್ತಿತ್ವ ವಿಕಸನ, ದಾರಿ ತಪ್ಪಿದ ಯುವಕರಿಗೆ ಮಾರ್ಗದರ್ಶನ ಮತ್ತು ಸಾರ್ವಜನಿಕ ಜಾಗೃತಿಯನ್ನು ಮೂಡಿಸುವ ಮೂಲಕ ಮಸೀದಿಗಳು ಕೇವಲ ಆರಾಧನೆಯನ್ನು ಮೀರಿ ಸೇವೆ ಸಲ್ಲಿಸಿವೆ ಎಂಬುದಕ್ಕೆ ಹಲವಾರು ಉದಾಹರಣೆಗಳಿವೆ.

ಪ್ರವಾದಿಯವರ ಕಾಲದಲ್ಲಿ, ಅವರ ಮಸೀದಿಯು 'ಅಶಾಬ್ ಅಲ್-ಸುಫ್ಫಾ'ಗೆ ಆಶ್ರಯ ನೀಡಿತ್ತು; ಆದರೆ ಇಂದು ಅನೇಕ ಮಸೀದಿಗಳು ಅರ್ಹ ವಿದ್ವಾಂಸರು ಅಲ್ಲಿ ವಾಸಿಸುವುದನ್ನು ಸಹ ನಿರುತ್ಸಾಹಗೊಳಿಸುತ್ತವೆ, ಅದೇ ಸಮಯದಲ್ಲಿ ಇತರರಿಗೆ ವ್ಯಾಪಕ ಸೌಲಭ್ಯಗಳನ್ನು ಒದಗಿಸುತ್ತವೆ. ಸುಭದ್ರ, ತತ್ವಬದ್ಧ ಮತ್ತು ನೈತಿಕ ರಾಜಕೀಯದ ಬೇರುಗಳು ಕೂಡ ಮಸೀದಿಯಲ್ಲಿಯೇ ಇವೆ. ಪ್ರವಾದಿ ಸುಲೈಮಾನ್ (ಸೊಲೊಮನ್), ಪ್ರವಾದಿ ದಾವೂದ್ (ಡೇವಿಡ್), ಪ್ರವಾದಿ ಯೂಸುಫ್ (ಜೋಸೆಫ್), ಪ್ರವಾದಿ ಮುಹಮ್ಮದ್ ಮತ್ತು 'ಸರಿಯಾದ ಮಾರ್ಗದರ್ಶನ ಪಡೆದ ಖಲೀಫರು' (ಖುಲಫಾ-ಎ-ರಾಶಿದೂನ್) ನೀಡಿದ ಉದಾಹರಣೆಗಳು ನ್ಯಾಯ ಮತ್ತು ನೈತಿಕ ಜವಾಬ್ದಾರಿಯ ಮೇಲೆ ಆಧಾರಿತವಾದ ಆಡಳಿತ ಪದ್ಧತಿಯನ್ನು ಎತ್ತಿ ತೋರಿಸುತ್ತವೆ.

ಶಿಕ್ಷಣದ ಪ್ರಕ್ರಿಯೆಯೂ ಪ್ರವಾದಿಯವರ ಮಸೀದಿಯಿಂದಲೇ ಆರಂಭವಾಯಿತು. ಜ್ಞಾನದ ಪ್ರಸಾರಕ್ಕಾಗಿ ಪ್ರವಾದಿಯವರು ಅಪಾರ ಶ್ರಮ ವಹಿಸಿದರು. ಮಸೀದಿಯ ಸಮೀಪದಲ್ಲಿ ಅವರು ಒಂದು ಎತ್ತರದ ವೇದಿಕೆಯನ್ನು ನಿರ್ಮಿಸಿದ್ದರು; ಅಲ್ಲಿ ಸಹಚರರ ದೊಡ್ಡ ಗುಂಪು ಕಲಿಯಲು ಸೇರುತ್ತಿತ್ತು ಮತ್ತು ಅವರು ಸ್ವತಃ ಅವರಿಗೆ ಬೋಧಿಸುತ್ತಿದ್ದರು. ಗಮನಾರ್ಹ ಸಂಗತಿಯೆಂದರೆ, ಇಸ್ಲಾಂ ಧರ್ಮವೇ 'ಓದುವ' ಮತ್ತು 'ಜ್ಞಾನವನ್ನು ಪಡೆಯುವ' ಆದೇಶದೊಂದಿಗೆ ಪ್ರಾರಂಭವಾಯಿತು. ಒಬ್ಬ ವ್ಯಕ್ತಿಯು ಎಷ್ಟು ಹೆಚ್ಚು ಜ್ಞಾನವನ್ನು ಪಡೆಯುತ್ತಾನೋ, ದೇವರು ಅವನ ಸ್ಥಾನಮಾನವನ್ನು ಅಷ್ಟೇ ಉನ್ನತ ಮಟ್ಟಕ್ಕೇರಿಸುತ್ತಾನೆ ಎಂಬುದನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು.

**ಮುಫ್ತಿ ಮುಹಮ್ಮದ್ ನಸೀಮ್ ರಹ್ಮಾನಿ**
**ನಿರ್ದೇಶಕರು, ಅಲ್-ಮಹದ್**
**ಅಲ್-ಆಲಿ ಅಲ್-ಇಸ್ಲಾಮಿ, ದೆಹಲಿ**

# ಪ್ರಾಧ್ಯಾಪಕ ಡೂಲ್ಲಾಗೆ ರಜೆ: ತನಿಖೆಗೆ 10 ಸದಸ್ಯರ ಸಮಿತಿ ರಚನೆ

ಮುಂಬೈ,ಸೆ.23: ಐಐಟಿ ಬಾಂಬೆಯ ಬಿಟೆಕ್ ವಿದ್ಯಾರ್ಥಿ ಸಾಹಿಲ್ ವಾಕೋಡೆ (20) ಆತ್ಮಹತ್ಯೆ ಪ್ರಕರಣದ ತನಿಖೆ ತೀವ್ರಗೊಂಡಿರುವ ಬೆನ್ನಲ್ಲೇ, ಸಂಸ್ಥೆಯ ಎನರ್ಜಿ ಸೈನ್ಸ್ ಆಂಡ್ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕ ಸೂರ್ಯನಾರಾಯಣ ಡೂಲ್ಲಾ ಅವರನ್ನು ರಜೆಯಲ್ಲಿ ತೆರಳುವಂತೆ ಸೂಚಿಸಲಾಗಿದೆ.



ವಾಕೋಡೆ ಸಾವಿನ ಹಿನ್ನೆಲೆಯಲ್ಲಿ ಮುಂಬೈ ಅಪರಾಧ ವಿಭಾಗ ತನಿಖೆ ನಡೆಸುತ್ತಿರುವ ಸಂದರ್ಭದಲ್ಲೇ, ಐಐಟಿ ಬಾಂಬೆ ಆಡಳಿತ ಮಂಡಳಿಯು ಘಟನೆಯ ಸಂಪೂರ್ಣ ಹಿನ್ನೆಲೆ ಹಾಗೂ ಸಂಸ್ಥೆಯ ಮಟ್ಟದಲ್ಲಿ ನಡೆದಿರುವ ಬೆಳವಣಿಗೆಗಳನ್ನು ಪರಿಶೀಲಿಸಲು 10 ಸದಸ್ಯರ ಉನ್ನತ ಮಟ್ಟದ ಸಮಿತಿಯನ್ನೂ ರಚಿಸಿದೆ. ಸಮಿತಿಯು ಒಂದು ವಾರದೊಳಗೆ ವರದಿ ಸಲ್ಲಿಸಬೇಕಾಗಿದೆ.

ಐಐಟಿ ಪಾಲಕ್ಕಾಡ್ ಆಡಳಿತ ಮಂಡಳಿ ಅಧ್ಯಕ್ಷ ಪ್ರೊ. ರಮೇಶ್ ವೆಂಕಟೇಶ್ವರನ್ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಬೋಧಕ ಸಿಬ್ಬಂದಿ ಪ್ರತಿನಿಧಿಗಳು, ವಿದ್ಯಾರ್ಥಿ ಪ್ರತಿನಿಧಿ, ಆಡಳಿತಾಧಿಕಾರಿ, ಮಾಜಿ ಜಾಗೃತಾ ಅಧಿಕಾರಿ ಹಾಗೂ ಮನೋವೈದ್ಯರು ಸಮಿತಿಯಲ್ಲಿ ಸ್ಥಾನ ಪಡೆದಿದ್ದಾರೆ.

ಡೂಲ್ಲಾ ಅವರನ್ನು ಎರಡು ದಿನಗಳ ಹಿಂದೆಯಷ್ಟೇ ಐಐಟಿ ಬಾಂಬೆಯ ಆಡಳಿತ ವ್ಯವಹಾರಗಳ ಡೀನ್ ಹುದ್ದೆಯ ಜವಾಬ್ದಾರಿಯಿಂದ ತಾತ್ಕಾಲಿಕವಾಗಿ ಬಿಡುಗಡೆ ಮಾಡಲಾಗಿತ್ತು. ಆದರೆ ಅವರು ಎನರ್ಜಿ ಸೈನ್ಸ್ ಆ?ಯಂಡ್ ಎಂಜಿನಿಯರಿಂಗ್ ವಿಭಾಗದಲ್ಲಿ ಬೋಧಕ ಸಿಬ್ಬಂದಿಯಾಗಿ ಮುಂದುವರಿದಿದ್ದರು. ಇದೀಗ ಅವರನ್ನು ಸಂಪೂರ್ಣವಾಗಿ ರಜೆಯಲ್ಲಿ ತೆರಳುವಂತೆ ಸೂಚಿಸಲಾಗಿದೆ.

ಈ ಕ್ರಮವು ಯಾವುದೇ ರೀತಿಯ ತಪ್ಪಿತಸ್ಥತೆಯ ನಿರ್ಣಯವಲ್ಲ ಎಂದು ಸಂಸ್ಥೆ ಸ್ಪಷ್ಟಪಡಿಸಿದೆ. ವಾಕೋಡೆ ಸಾವಿನ ಸುತ್ತಲಿನ ಘಟನೆಗಳು ಹಾಗೂ ಡೂಲ್ಲಾ ವಿರುದ್ಧದ ಆರೋಪಗಳು ಇನ್ನೂ ತನಿಖೆಯ ಹಂತದಲ್ಲಿವೆ.

ಸೆ.18ರಂದು ಪೊವೈ ಕ್ಯಾಂಪಸ್‌ನಲ್ಲಿ ಪರೀಕ್ಷೆ ಬರೆದ ಬಳಿಕ ಸಾಹಿಲ್ ವಾಕೋಡೆ ಆತ್ಮಹತ್ಯೆ ಮಾಡಿಕೊಂಡಿದ್ದರು. ಆ ದಿನ ಪರೀಕ್ಷಾ ಕೊಠಡಿಯಲ್ಲಿ ನಡೆದ ಘಟನೆಗಳ ಕುರಿತು ಕ್ರೈಂ ಬ್ರಾಂಚ್ ತನಿಖೆ ನಡೆಸುತ್ತಿದೆ.

ಪೊಲೀಸರು ಕ್ಯಾಂಪಸ್‌ನ ಸಿಸಿಟಿವಿ ದೃಶ್ಯಗಳನ್ನು ವಶಕ್ಕೆ ಪಡೆದು ಪರಿಶೀಲಿಸುತ್ತಿದ್ದಾರೆ. ಮಧ್ಯಾಹ್ನ ಸುಮಾರು 12.30ರಿಂದ 12.45ರವರೆಗಿನ ದೃಶ್ಯಗಳಲ್ಲಿ ಸಾಹಿಲ್ ಪರೀಕ್ಷಾ ಕೊಠಡಿಯಲ್ಲಿ ಇದ್ದುದು ಕಂಡುಬಂದಿದೆ ಎಂದು ತನಿಖಾ ಮೂಲಗಳನ್ನು ಉಲ್ಲೇಖಿಸಿ ವರದಿಯಾಗಿದೆ. ಈ ಅವಧಿಯಲ್ಲಿ ಸಾಹಿಲ್ ಮತ್ತು ಡೂಲ್ಲಾ ನಡುವೆ ನಡೆದ ಸಂಭಾಷಣೆ ಹಾಗೂ ಅದರ ನಂತರದ ಬೆಳವಣಿಗೆಗಳ ಕುರಿತು ಪೊಲೀಸರು ವಿದ್ಯಾರ್ಥಿಗಳ ಹೇಳಿಕೆಗಳನ್ನು ದಾಖಲಿಸುತ್ತಿದ್ದಾರೆ.

# ಎಐ ಶಿಕ್ಷಣಕ್ಕೆ ಖಾಸಗಿ ಶಾಲೆಗಳ ಒಕ್ಕೂಟ ವಿರೋಧ

ಬೆಂಗಳೂರು, ಸೆ.23– ಶಾಲಾ–ಕಾಲೇಜುಗಳಲ್ಲಿ ಕೃತಕ ಬುದ್ಧಿಮತ್ತೆ ಹಾಗೂ ಕಂಪ್ಯೂಟರ್ ಆಧಾರಿತ ಶಿಕ್ಷಣವನ್ನು ಜಾರಿಗೆ ತರಲು ಶಿಕ್ಷಣ ಇಲಾಖೆ ಮುಂದಾಗಿರುವುದಕ್ಕೆ ಖಾಸಗಿ ಶಾಲೆಗಳ ಒಕ್ಕೂಟಗಳ ಸಂಘಟನೆ ಕ್ಯಾಮ್ಸ್ ತೀವ್ರ ವಿರೋಧ ವ್ಯಕ್ತಪಡಿಸಿದೆ.

ರಾಜ್ಯ ಸರ್ಕಾರ ವಿದ್ಯಾರ್ಥಿಗಳ ಹಿತವನ್ನು ಕಡೆಗಣಿಸಿ ಕಂಪ್ಯೂಟರ್ ಮತ್ತು ಎಐ ಆಧಾರಿತ ಶಿಕ್ಷಣವನ್ನು ಜಾರಿಗೆ ತರಲು ಮುಂದಾಗಿದೆ. ಇದು ಅವೈಜ್ಞಾನಿಕ ಕ್ರಮ ಎಂದು ಕ್ಯಾಮ್ಸ್ ಅಧ್ಯಕ್ಷ ಶಶಿಕುಮಾರ್ ಆರೋಪಿಸಿದ್ದಾರೆ.

ರಾಜ್ಯದಲ್ಲಿ ಹಲವು ವರ್ಷಗಳಿಂದ ಬಹುಭಾಷಾ ಶಿಕ್ಷಣ ಪದ್ಧತಿ ಜಾರಿಯಲ್ಲಿದೆ. ಕನ್ನಡ ಸೇರಿದಂತೆ ವಿವಿಧ ಭಾಷೆಗಳ ಬೆಳವಣಿಗೆಗೆ ಬಹುಭಾಷಾ ಶಿಕ್ಷಣ ವ್ಯವಸ್ಥೆ ಅಗತ್ಯವಾಗಿದೆ. ಮೂರನೇ ಭಾಷೆಯ ವಿಚಾರದಲ್ಲಿ ಒಂದೇ ಭಾಷೆಗೆ ಆದ್ಯತೆ ನೀಡುವ ಬದಲು ಹಲವು ಭಾಷೆಗಳನ್ನು ಒಳಗೊಂಡ ವ್ಯವಸ್ಥೆಯನ್ನು ಮುಂದುವರಿಸಬೇಕು ಎಂದು ಒತ್ತಾಯಿಸಿದ್ದಾರೆ.

**ನ್ಯಾಯಾಲಯದ ಅಭಿಪ್ರಾಯ ಸ್ವಾಗತಾರ್ಹ :**

ಬಹುಭಾಷಾ ಶಿಕ್ಷಣ ವ್ಯವಸ್ಥೆಯನ್ನು ಬದಿಗೊತ್ತಿ ಕಂಪ್ಯೂಟರ್ ಅಥವಾ ಎಐ ಆಧಾರಿತ ಶಿಕ್ಷಣವನ್ನು ಜಾರಿಗೆ ತರಬಾರದು ಎಂಬ ನ್ಯಾಯಾಲಯದ ಅಭಿಪ್ರಾಯ ಸ್ವಾಗತಾರ್ಹವಾಗಿದೆ. ಮಕ್ಕಳ ಹಿತದೃಷ್ಟಿಯಿಂದ ರಾಜ್ಯದಲ್ಲಿ ಬಹುಭಾಷಾ ಶಿಕ್ಷಣ ವ್ಯವಸ್ಥೆಯನ್ನು ಮುಂದುವರಿಸಬೇಕು. ಶಿಕ್ಷಣದ ಮೂಲ ಉದ್ದೇಶಕ್ಕೆ ಧಕ್ಕೆಯಾಗದ ರೀತಿಯಲ್ಲಿ ಯಾವುದೇ ಹೊಸ ಪದ್ಧತಿಯನ್ನು ಜಾರಿಗೊಳಿಸಬೇಕು ಎಂದು ಶಶಿಕುಮಾರ್ ಹೇಳಿದ್ದಾರೆ.

# ತಹಶೀಲ್ದಾರ್ ಕಾರು ಡಿಕ್ಕಿ : ಡಿಸಿ ಕಚೇರಿ ಬಳಿ ಹೈಡ್ರಾಮಾ

ಶಿವಮೊಗ್ಗ,ಸೆ.23–ನಗರದಲ್ಲಿ ತೀರ್ಥಹಳ್ಳಿ ತಹಶೀಲ್ದಾರ್‌ಗೆ ಸೇರಿದ ಕಾರಿಗೆ, ಮತ್ತೊಂದು ಕಾರು ಡಿಕ್ಕಿ ಹೊಡೆದು ನಿಲ್ಲಿಸದೆ ಪರಾರಿಯಾದ ಘಟನೆ ಭಾರೀ ಹೈಡ್ರಾಮಾಕ್ಕೆ ಸಾಕ್ಷಿಯಾಯಿತು.

ಏನಿದು ಘಟನೆ? : ನೆಹರು ರಸ್ತೆಯಲ್ಲಿ ತೀರ್ಥಹಳ್ಳಿ ತಹಶೀಲ್ದಾರ್



ಕಚೇರಿ ಕಾರು ಆಗಮಿಸುತ್ತಿದ್ದ ವೇಳೆ, ಐ20 ಕಾರು ಡಿಕ್ಕಿಯಾಗಿದ್ದು, ಚಾಲಕ ಕಾರು ನಿಲ್ಲಿಸದೆ ತೆರಳಿದ್ದ. ತಕ್ಷಣವೇ ತಹಶೀಲ್ದಾರ್ ಕಚೇರಿ ವಾಹನ ಚಾಲಕ ಸದರಿ ಕಾರನ್ನು ಹಿಂಬಾಲಿಸಿಕೊಂಡು ಹೋಗಿದ್ದಾರೆ.

ಡಿಸಿ ಕಚೇರಿ ಮುಂಭಾಗದ ರಸ್ತೆಯಲ್ಲಿ ಕಾರನ್ನು ನಿಲ್ಲಿಸುವಲ್ಲಿ ಸಫಲರಾಗಿದ್ದಾರೆ. ಈ ವೇಳೆ ಇಬ್ಬರು ಚಾಲಕರ ನಡುವೆ ವಾಗ್ವಾದ ಮಾತಿನ ಚಕಮಕಿ ನಡೆದಿದೆ. ಸ್ಥಳದಲ್ಲಿ ಜಮಾಯಿಸಿದ ಸಾರ್ವಜನಿಕರು ಐ20 ಕಾರು ಚಾಲಕನನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಇದರಿಂದ ರಸ್ತೆಯಲ್ಲಿ ಕೆಲ ಸಮಯ ವಾಹನ ಸಂಚಾರ ಅಸ್ತವ್ಯಸ್ತವಾಗಿತ್ತು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರು ಸದರಿ ಕಾರು ಚಾಲಕನನ್ನು ಜಯನಗರ ಪೊಲೀಸ್ ಠಾಣೆಗೆ ಕರೆದೊಯ್ದಿದ್ದಾರೆ. ಘಟನೆಯ ಕುರಿತಂತೆ ಹೆಚ್ಚಿನ ವಿವರಗಳು ಇನ್ನಷ್ಟೆ ತಿಳಿದುಬರಬೇಕಾಗಿದೆ.



ನಗರದ ಕಾವಲ್ ಭೈರಸಂದ್ರ ಬಸ್ ನಿಲ್ದಾಣದಲ್ಲಿ ಶ್ರೀ ವಿನಾಯಕ ಭಕ್ತಮಂಡಳಿ, ಶ್ರೀ ಭುವನೇಶ್ವರಿ ಗೆಳೆಯರ ಬಳಗದ ವತಿಯಿಂದ ನಡೆದ 45ನೇ ವರ್ಷದ ಗಣೇಶೋತ್ಸವ ಕಾರ್ಯಕ್ರಮದಲ್ಲಿ ಬಳಗದ ಸದಸ್ಯರು ಹಾಗೂ ಕಾವಭೈರಸಂದ್ರದ ಕಾಂಗ್ರೆಸ್ ಮುಖಂಡರಾದ ಪಿ.ಹರ್ಷವರ್ಧನ್ ರವರು ಭಾಗವಹಿಸಿ ಶ್ರೀ ಗಣೇಶಮೂರ್ತಿಗೆ ಪೂಜೆ ಸಲ್ಲಿಸಿದರು.

# ಆಡಳಿತ ಯಂತ್ರಕ್ಕೆ ಸರ್ಜರಿ: ಐಎಎಸ್ ಅಧಿಕಾರಿಗಳ ಎತ್ತಂಗಡಿ

ಬೆಂಗಳೂರು,ಸೆ.23: ರಾಜ್ಯ ಸರ್ಕಾರ ಆಡಳಿತ ಯಂತ್ರಕ್ಕೆ ಇಂದು ಮಹತ್ವದ ಬದಲಾವಣೆ ಮಾಡಿದ್ದು, ಹಲವು ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸಿದೆ.

ಯೋಜನೆ, ಕಾರ್ಯಕ್ರಮ ಸಂಯೋಜನೆ ಹಾಗೂ ಸಾಂಖ್ಯಿಕ ಇಲಾಖೆಯ ಕಾರ್ಯದರ್ಶಿಯಾಗಿದ್ದ ಡಾ. ಕೆ.ವಿ. ತ್ರಿಲೋಕಚಂದ್ರ ಅವರನ್ನು ಕೃಷಿ ಇಲಾಖೆಯ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. ಇದುವರೆಗೆ ಕೃಷಿ ಇಲಾಖೆ ಕಾರ್ಯದರ್ಶಿಯಾಗಿದ್ದ ಕ್ಯಾಪ್ಟನ್ ರಾಜೇಂದ್ರ ಅವರನ್ನು ವರ್ಗಾವಣೆ ಮಾಡಲಾಗಿದ್ದು, ಅವರಿಗೆ ಯಾವುದೇ ಹೊಸ ಹುದ್ದೆ ತೋರಿಸಿಲ್ಲ.

ಸಮಾಜ ಕಲ್ಯಾಣ ಇಲಾಖೆ ಆಯುಕ್ತರಾಗಿದ್ದ ಡಾ. ಕೆ. ರಾಕೇಶ್ ಕುಮಾರ್ ಅವರನ್ನು ಉಪ ಮುಖ್ಯಮಂತ್ರಿಗಳ ಕಾರ್ಯದರ್ಶಿಯಾಗಿ



ವರ್ಗಾಯಿಸಲಾಗಿದೆ. ಇದರೊಂದಿಗೆ ಸರ್ವೆ, ಸೆಟ್ಲ್‌ಮೆಂಟ್ ಮತ್ತು ಭೂ ದಾಖಲೆಗಳ ಇಲಾಖೆಯ ಆಯುಕ್ತರ ಹೆಚ್ಚುವರಿ ಜವಾಬ್ದಾರಿಯನ್ನೂ ಅವರಿಗೆ ವಹಿಸಲಾಗಿದೆ. ಈ ಹುದ್ದೆಯಲ್ಲಿದ್ದ ಕೆ. ವೆಂಕಟರಾಜಾ ಅವರಿಗೂ ಹೊಸ ಸ್ಥಳ ನಿಯೋಜನೆ ಮಾಡಿಲ್ಲ.

ಪಂಚಾಯತ್ ರಾಜ್ ಇಲಾಖೆ ಆಯುಕ್ತರಾಗಿದ್ದ ಡಾ. ಅರುಂಧತಿ ಚಂದ್ರಶೇಖರ್ ಅವರನ್ನು ಖಜಾನೆ ಇಲಾಖೆಯ ಆಯುಕ್ತರನ್ನಾಗಿ ನೇಮಿಸಲಾಗಿದೆ. ಎಂಎಸ್ಎಂಇ ನಿರ್ದೇಶಕರಾಗಿದ್ದ ವೈ.ಎಸ್. ಪಾಟೀಲ ಅವರನ್ನು ಗ್ರಾಮೀಣಾಭಿವೃದ್ಧಿ ಇಲಾಖೆ ಆಯುಕ್ತರಾಗಿ ವರ್ಗಾಯಿಸಲಾಗಿದ್ದು, ಪಂಚಾಯತ್ ರಾಜ್ ಆಯುಕ್ತ ಹಾಗೂ ಕರ್ನಾಟಕ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಕಾರ್ಯನಿರ್ವಾಹಕ ನಿರ್ದೇಶಕರ ಹೆಚ್ಚುವರಿ ಹೊಣೆಯನ್ನೂ ನೀಡಲಾಗಿದೆ.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ (ಹೆಸ್ಕಾಂ) ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಎಂ.ಎಲ್. ವೈಶಾಲಿ ಅವರನ್ನು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂಎಸ್‌ಐಎಲ್) ವ್ಯವಸ್ಥಾಪಕ ನಿರ್ದೇಶಕರಾಗಿ ನೇಮಿಸಲಾಗಿದೆ. ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಶಶಿಧರ ಕುರೇರಾ ಅವರಿಗೆ ಹಟ್ಟಿ ಚಿನ್ನದ ಗಣಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಹುದ್ದೆಯ ಹೆಚ್ಚುವರಿ ಹೊಣೆ ವಹಿಸಲಾಗಿದೆ.

ಕೊಡಗು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ಆನಂದ ಪ್ರಕಾಶ ಮೀನಾ ಅವರನ್ನು ವಿಜಯಪುರ ಜಿಪಂ ಸಿಇಒ ಆಗಿ ವರ್ಗಾಯಿಸಲಾಗಿದೆ. ವಿಜಯಪುರ ಜಿಪಂ ಸಿಇಒ ರಿಷಿ ಆನಂದ್ ಅವರನ್ನು ಶಿವಮೊಗ್ಗ ಜಿಪಂ ಸಿಇಒ ಆಗಿ ನೇಮಿಸಲಾಗಿದೆ.

ಶಿವಮೊಗ್ಗ ಜಿಪಂ ಸಿಇಒ ಎನ್. ಹೇಮಂತ್ ಅವರನ್ನು ಹುಬ್ಬಳ್ಳಿ ಹೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕರಾಗಿ ವರ್ಗಾಯಿಸಲಾಗಿದೆ. ಕೊಳ್ಳೇಗಾಲ ಉಪವಿಭಾಗಾಧಿಕಾರಿಯಾಗಿದ್ದ ದಿನೇಶ್ ಕುಮಾರ್ ಮೀನಾ ಅವರನ್ನು ಕೊಡಗು ಜಿಪಂನ ನೂತನ ಸಿಇಒ ಆಗಿ ನೇಮಿಸಲಾಗಿದೆ.

# ಕೆಪಿಎಸ್‌ಸಿ ಮುಚ್ಚುವ ಚಿಂತನೆ: ಡಿಕೆಶಿ ವಿರುದ್ಧ ಹೆಚ್‌ಡಿಕೆ ವಾಗ್ದಾಳಿ

ಬೆಂಗಳೂರು.ಸೆ.23–ಕರ್ನಾಟಕ ಲೋಕಸೇವಾ ಆಯೋಗ(ಕೆಪಿಎಸ್‌ಸಿ)ಯನ್ನು ಶಾಸನಬದ್ಧವಾಗಿ ಮುಚ್ಚುವ ಕುರಿತು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆಗೆ ಕೇಂದ್ರ ಸಚಿವ ಹಾಗೂ ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಕುಮಾರಸ್ವಾಮಿ, ಕೆಪಿಎಸ್‌ಸಿಯನ್ನು ಮುಚ್ಚುವ ಹೇಳಿಕೆ ಕೇವಲ ಹತಾಶೆಯ ಪ್ರತೀಕವಲ್ಲ, ಬದಲಾಗಿ ಬುದ್ಧಿಗೇಡಿತನ, ಹೊಣೆಗೇಡಿತನ ಮತ್ತು ಅಜ್ಞಾನದ ಪರಮಾವಧಿ ಎಂದು ಟೀಕಿಸಿದ್ದಾರೆ.

ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದಂತೆ, ನೆಗಡಿ ಬಂದರೆ ಮೂಗಿಗೇ ಕತ್ತರಿ ಹಾಕಿದಂತೆ ಎಂದು ವ್ಯಂಗ್ಯವಾಡಿರುವ ಅವರು, ಮುಖ್ಯಮಂತ್ರಿಗೆ ಕೆಪಿಎಸ್‌ಸಿಯ ಶಾಸನಾತ್ಮಕ ಹಾಗೂ ಸಾಂವಿಧಾನಿಕ ಮಹತ್ವದ ಅರಿವು ಇರಬೇಕೆಂದು ಹೇಳಿದ್ದಾರೆ.

ಕೆಪಿಎಸ್‌ಸಿ ಸಂಸ್ಥೆಯೇ ಸಮಸ್ಯೆಯಲ್ಲ. ಸಂಸ್ಥೆಯೊಳಗೆ ತಪ್ಪಿತಸ್ಥರು ಅಥವಾ ಅಕ್ರಮ ಎಸಗಿದವರು ಇದ್ದರೆ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಕೆಪಿಎಸ್‌ಸಿ ಚೆನ್ನಾಗಿಯೇ ಇದೆ, ಕೆಟ್ಟ ಜನ ಬಂದು ಕೂತಿದ್ದಾರೆ. ಬೇಲಿಯೇ ಹೊಲ ಮೇಯುತ್ತಿದೆ ಎಂದು ಆರೋಪಿಸಿದ್ದಾರೆ.

ಅಕ್ರಮಗಳಿಗೆ ಕಾರಣರಾದವರನ್ನು ನೇಮಕ ಮಾಡಿದ್ದು ಯಾರು, ಸಂಸ್ಥೆಯಲ್ಲಿ ಅಕ್ರಮ ಚಟುವಟಿಕೆಗಳಿಗೆ ಅವಕಾಶ ನೀಡಿದ್ದು ಯಾರು ಎಂಬ ಪ್ರಶ್ನೆಗಳನ್ನು ಎತ್ತಿರುವ ಕುಮಾರಸ್ವಾಮಿ, ಇದಕ್ಕೆ ಸರ್ಕಾರವೇ ಹೊಣೆ ಎಂದು ಆರೋಪಿಸಿದ್ದಾರೆ. ಇದೇ ಕಾರಣಕ್ಕೆ ವಿಧಾನಸೌಧವನ್ನೇ ಮುಚ್ಚಬೇಕೇ ಎಂದು ಅವರು ಸರ್ಕಾರವನ್ನು ವ್ಯಂಗ್ಯವಾಡಿದ್ದಾರೆ.

ಕೆಪಿಎಸ್‌ಸಿಯ ಸಮಿತಿ ರಚನೆ, ಸ್ವರೂಪ, ಸಾಂವಿಧಾನಿಕ ಸ್ಥಾನಮಾನ ಹಾಗೂ ಸಂಸ್ಥೆಯ ಐತಿಹಾಸಿಕ ಹಿನ್ನೆಲೆಯನ್ನು ತಿಳಿದುಕೊಂಡು ಮಾತನಾಡಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಗೆ ಸಲಹೆ ನೀಡಿದ್ದಾರೆ.

ಹೊಲಕ್ಕೆ ಕಳೆ ಬಿದ್ದರೆ ಅದನ್ನು ಕಿತ್ತೆಸೆಯಬೇಕು. ಹೊಲಕ್ಕೇ ವಿಷವುಣಿಸುವ ಕೆಲಸ ಆಗಬಾರದು ಎಂದು ಹೇಳುವ ಮೂಲಕ ಸಂಸ್ಥೆಯನ್ನು ಮುಚ್ಚುವ ಬದಲು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂಬ ನಿಲುವನ್ನು ಕುಮಾರಸ್ವಾಮಿ ವ್ಯಕ್ತಪಡಿಸಿದ್ದಾರೆ.

ಈ ಮೂಲಕ ಕೆಪಿಎಸ್‌ಸಿ ವಿಚಾರದಲ್ಲಿ ರಾಜ್ಯ ಸರ್ಕಾರದ ವಿರುದ್ಧ ಕುಮಾರಸ್ವಾಮಿ ಮತ್ತೊಮ್ಮೆ ತೀವ್ರ ವಾಗ್ದಾಳಿ ನಡೆಸಿದ್ದಾರೆ.

# 20ಎಕರೆ ಕೈಗಾರಿಕಾ ಪ್ರದೇಶ ಸ್ಥಾಪನೆಗೆ ಕಾಶಪ್ಪನವರ್ ಸೂಚನೆ

ಬೆಂಗಳೂರುಸೆ. 23 –ರಾಜ್ಯದ ಪ್ರತಿಯೊಂದು ತಾಲೂಕಿನಲ್ಲಿ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ತಕ್ಷಣವೇ 20 ಎಕರೆ ಪ್ರದೇಶದಲ್ಲಿ ಕೈಗಾರಿಕಾ ಪ್ರದೇಶ( ಇಂಡಸ್ಟ್ರಿಯಲ್ ಪಾರ್ಕ್)ವನ್ನು ಸ್ಥಾಪನೆ ಮಾಡಬೇಕೆಂದು ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವ ವಿಜಯಾನಂದ ಕಾಶಪ್ಪನವರ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚಿಸಿದ್ದಾರೆ

ವಿಕಾಸಸೌಧದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳ ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಉದ್ಯಮ ವಲಯದ ಹೆಚ್ಚುವರಿ ನಿರ್ದೇಶಕರು ಮತ್ತು ಜಂಟಿ ನಿರ್ದೇಶಕರ ಸಭೆ ನಡೆಸಿದರು.

ರಾಜ್ಯದ ಎಲ್ಲಾ ತಾಲೂಕು ಕೇಂದ್ರದಲ್ಲಿ ಲಭ್ಯವಿರುವ ಕಡೆ ಜಮೀನುಗಳನ್ನು ಗುರುತಿಸಿ ಭೂಸ್ವಾಧೀನ ಮಾಡಿಕೊಂಡು ಕೈಗಾರಿಕಾ ಪ್ರದೇಶಗಳನ್ನು ಕನಿಷ್ಠಪಕ್ಷ 20 ಎಕರೆ ಜಾಗದಲ್ಲಿ ಸ್ಥಾಪನೆ ಮಾಡಬೇಕು ಇದರಿಂದ ಸಣ್ಣ ಕೈಗಾರಿಕಾ ಉದ್ಯಮಗಳಿಗೆ ಅನುಕೂಲವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಕೈಗಾರಿಕಾ ಪ್ರದೇಶಗಳನ್ನು ಸ್ಥಾಪನೆ ಮಾಡಿ, ಅದಕ್ಕೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಟ್ಟರೆ, ಉದ್ಯಮಿಗಳು ಮುಂದೆ ಬಂದು ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತಾರೆ. ಇದರಿಂದ ಸ್ಥಳೀಯರು ಹಾಗೂ ಯುವಕರಿಗೆ ಉದ್ಯೋಗ ಸಿಗುತ್ತದೆ ಎಂದು ಹೇಳಿದರು.



ಕೈಗಾರಿಕಾ ಪ್ರದೇಶಗಳನ್ನು ಸ್ಥಾಪನೆ ಮಾಡುವಾಗ ರೈತರ ಜಮೀನನ್ನು ಯಾವುದೇ ಕಾರಣಕ್ಕೂ ಭೂಸ್ವಾಧೀನ ಮಾಡಿಕೊಳ್ಳಬಾರದು. ಯಾರು ಸ್ವಯಂ ಪ್ರೇರಿತರಾಗಿ ಜಮೀನು ನೀಡಲು ಮುಂದೆ ಬರುತ್ತಾರೋ, ಅವರಿಗೆ ಮೊದಲ ಆದ್ಯತೆ ನೀಡಬೇಕು. ಸರ್ಕಾರದ ಮಾರ್ಗಸೂಚಿಯಂತೆ ಪರಿಹಾರ ನೀಡಬೇಕೆಂದು ಅಧಿಕಾರಿಗಳಿಗೆ ಸಚಿವರು ನಿರ್ದೇಶನ ಕೊಟ್ಟರು.

ಮುಖ್ಯವಾಗಿ ರಸ್ತೆ, ವಿದ್ಯುತ್, ನೀರು, ಸೇರಿದಂತೆ ಅಗತ್ಯವಿರುವ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು. ತಾಲೂಕು ಮಟ್ಟದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದರೆ ಉದ್ಯೋಗ ಸೃಷ್ಟಿಗೆ ಮುನ್ನುಡಿ ಬರೆದಂತೆ ಆಗುತ್ತದೆ ಈ ಬಗ್ಗೆ ಅಧಿಕಾರಿಗಳು ಹೆಚ್ಚಿನ ಕಾಳಜಿ ವಹಿಸಬೇಕೆಂದು ಸೂಚನೆ ನೀಡಿದರು.

**ಲ್ಯಾಂಡ್ ಬ್ಯಾಂಕ್ ಸ್ಥಾಪಿಸಿ**

ಅಗತ್ಯವಿರುವ ಕಡೆ ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಲ್ಯಾಂಡ್ ಬ್ಯಾಂಕ್ ಸ್ಥಾಪನೆ ಮಾಡಲು ಅಧಿಕಾರಿಗಳು ಹೆಚ್ಚಿನ ಕಾಳಜಿ ವಹಿಸಬೇಕು. ಲ್ಯಾಂಡ್ ಬ್ಯಾಂಕ್ ಸ್ಥಾಪನೆ ಮಾಡಿದರೆ, ಉದ್ಯಮಿಗಳು ತಮಗೆ ಬೇಕಾದ ಕಡೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಅನುಕೂಲವಾಗುತ್ತದೆ. ಜಿಲ್ಲಾ ಹಾಗೂ ತಾಲೂಕ್ ಮಟ್ಟದಲ್ಲಿ ಲಭ್ಯವಿರುವ ಜಮೀನನ್ನು ಬಳಕೆ ಮಾಡಿಕೊಳ್ಳಬೇಕೆಂದು ಹೇಳಿದರು.

**ಇಳಕಲ್ ನಲ್ಲಿ ಟೆಕ್ಸ್ ಟೈಲ್ ಪಾರ್ಕ್**

ಬಾಗಲಕೋಟೆ ಜಿಲ್ಲೆ ಇಳಕಲ್ ತಾಲೂಕಿನಲ್ಲಿ ಬಹುದಿನಗಳ ಕನಸದ ಟೆಕ್ಸ್‌ಟೈಲ್ ಪಾರ್ಕನ್ನು ಆದಷ್ಟು ಶೀಘ್ರ ಸ್ಥಾಪನೆ ಮಾಡಲು ಅಧಿಕಾರಿಗಳು ವಿಶೇಷ ನಿಗವಹಿಸಬೇಕೆಂದು ಸಚಿವ ವಿಜಯಾನಂದ ಕಾಶಪ್ಪನವರ ಕಟ್ಟುನಿಟ್ಟಿನ ಸೂಚನೆಯನ್ನು ನೀಡಿದರು.

ಇಳಕಲ್ ನಲ್ಲಿ ಟೆಕ್ಸ್‌ಟೈಲ್ ಪಾರ್ಕ್ ನಿರ್ಮಾಣ ಮಾಡಬೇಕೆಂಬುದು ದಶಕಗಳ ಕನಸು, ಬೇರೆ ಬೇರೆ ಕಾರಣಗಳಿಂದ ಇದು ಕಾರ್ಯಗತವಾಗದೆ ಕೇವಲ ಕಾಗದದಲ್ಲೇ ಉಳಿದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ವೈಯಕ್ತಿಕವಾಗಿ ತಮಗೂ ಇಳಕಲ್ ನಲ್ಲಿ ಟೆಕ್ಸ್‌ಟೈಲ್ ಪಾರ್ಕ್ ನಿರ್ಮಾಣ ಮಾಡಬೇಕೆಂಬ ಗುರಿಯಿದೆ. ನನ್ನ ಅಧಿಕಾರ ಅವಧಿಯಲ್ಲಿ ಈ ಕನಸು ನನಸಾಗಬೇಕು. ಅಧಿಕಾರಿಗಳು ಕುಂಟು ನೆಪ ಹೇಳದೆ, ಆದಷ್ಟು ಶೀಘ್ರ ಇದನ್ನು ಕಾರ್ಯಗತಗೊಳಿಸಲು ಮುಂದಾಗಬೇಕೆಂದು ಸೂಚನೆ ನೀಡಿದರು. ಇಲ್ಲಿ ಟೆಕ್ಸ್ ಟೈಲ್ ಪಾರ್ಕ್ ನಿರ್ಮಾಣವಾದರೆ ಯುವಕರಿಗೆ ಉದ್ಯೋಗ ದೊರೆಯುತ್ತದೆ. ಅಲ್ಲದೆ ಇಲ್ಲಿಂದಲೇ ದೇಶ ಮತ್ತು ವಿದೇಶಗಳಿಗೂ ಜವಳಿಯನ್ನು ರಫ್ತು ಮಾಡಬಹುದು. ಇದಕ್ಕೆ ಬೇಕಾಗಿರುವ ಎಲ್ಲಾ ರೀತಿಯ ಸಹಕಾರವನ್ನು ನೀಡಲಿದ್ದೇವೆ. ಮೊದಲು ಈ ಯೋಜನೆ ಕಾರ್ಯಗತವಾಗಬೇಕೆಂದು ಮಾಡಿದರು. ಇದೇ ವೇಳೆ ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಗಳಿಂದ ಸಾಕಷ್ಟು ಸಮಸ್ಯೆ ಎದುರಾಗುತ್ತದೆ ಎಂದು ಕೆಲವು ಅಧಿಕಾರಿಗಳು ಸಚಿವರ ಗಮನಸೆಳೆದರು.

ಇದಕ್ಕೆ ಸ್ಪಂದಿಸಿದ ಸಚಿವ ಕಾಶಪ್ಪನವರ, ಆದಷ್ಟು ಶೀಘ್ರ ಇಲಾಖೆಯ ಸಚಿವರು ಮತ್ತು ಸಂಬಂಧ ಪಟ್ಟ ಅಧಿಕಾರಿಗಳ ಜೊತೆ ಸಭೆ ನಡೆಸಲಾಗುವುದು. ಯಾವುದೇ ಕಾರಣಕ್ಕೂ

ಸಣ್ಣ ಕೈಗಾರಿಕೆಗಳ ಉದ್ಯಮಿಗಳಿಗೆ ಅನಗತ್ಯವಾಗಿ ತೊಂದರೆ ನೀಡದಂತೆ ಸೂಚಿಸುವುದಾಗಿ ಸಚಿವರು ಅಭಯ ನೀಡಿದರು. ಈ ಸಂದರ್ಭದಲ್ಲಿ ಎಂ ಎಸ್ ಎಂ ಈ ನಿರ್ದೇಶಕ ವೈ .ಎಸ್ ಪಾಟೀಲ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ನಕಲಿ ಔಷಧಿ ಜಾಲಕ್ಕೆ ಕಡಿವಾಣ ಮಾತ್ರೆ ಕೊಡಲು ಬಂತು ಹೊಸ ನಿಯಮ

ಬೆಂಗಳೂರು, ಸೆ.23– ಔಷಧಿಗಳ ಅಕ್ರಮ ಮಾರಾಟ, ಸ್ವಯಂಚಿಕಿತ್ಸೆಯಿಂದ ಉಂಟಾಗುತ್ತಿರುವ ಸಮಸ್ಯೆ ಹಾಗೂ ಆಂಟಿಬಯೋಟಿಕ್ಸ್‌ಗಳ ಅತಿಯಾದ ಬಳಕೆಗೆ ಕಡಿವಾಣ ಹಾಕಲು ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆ ಹೊಸ ಮಾರ್ಗಸೂಚಿಗಳನ್ನು ಮುಂದಿಟ್ಟಿದೆ. ವಿಶೇಷವಾಗಿ ಆಂಟಿಬಯೋಟಿಕ್ ಹಾಗೂ ನೋವು ನಿವಾರಕ ಮಾತ್ರೆಗಳ ಬಳಕೆಯಲ್ಲಿ ವೈದ್ಯರು, ಫಾರ್ಮಸಿಸ್ಟ್‌ಗಳು, ರಿಟೈಲರ್‌ಗಳು ಮತ್ತು ಆರೋಗ್ಯ ಸೇವಾ ಸಂಸ್ಥೆಗಳು ಕಟ್ಟುನಿಟ್ಟಿನ ನಿಯಮಗಳನ್ನು ಪಾಲಿಸುವಂತೆ ಸೂಚಿಸಲಾಗಿದೆ.

ಅಆಖಅಔ ಸೆ.22ರಂದು ಬಿಡುಗಡೆ ಮಾಡಿರುವ ಸುತ್ತೋಲೆಯಲ್ಲಿ ಆಂಟಿಬಯೋಟಿಕ್ಸ್ ಮತ್ತು ಓಖಂಖಆಗಳ ಅನಿಯಂತ್ರಿತ ಬಳಕೆಯಿಂದ ಉಂಟಾಗಬಹುದಾದ ಆರೋಗ್ಯ ಸಮಸ್ಯೆಗಳು, ಅದರಲ್ಲೂ ದೀರ್ಘಕಾಲೀನ ಕಿಡ್ನಿ ಕಾಯಿಲೆಯ ಅಪಾಯದ ಬಗ್ಗೆ ಎಚ್ಚರಿಕೆ ನೀಡಲಾಗಿದೆ.

ಡಾಕ್ಟರ್‌ಗಳಿಗೆ ಏನು ರೂಲ್ಸ್..?

ರೋಗಿಯ ವಯಸ್ಸು, ಕಾಯಿಲೆಯ ಸ್ವರೂಪ ಹಾಗೂ ಈಗಾಗಲೇ ಪಡೆಯುತ್ತಿರುವ ಔಷಧಿಗಳನ್ನು ಪರಿಗಣಿಸಿ ಮಾತ್ರ ಔಷಧಿ ಸೂಚಿಸಬೇಕು.

ಅಗತ್ಯವಿದ್ದಾಗ ಮಾತ್ರ ನೋವು ನಿವಾರಕ ಹಾಗೂ ಆಂಟಿಬಯೋಟಿಕ್ಸ್ ನೀಡಬೇಕು.

ಸಾಧ್ಯವಾದಷ್ಟು ಸೂಕ್ತ ಪ್ರಮಾಣದಲ್ಲಿ ಹಾಗೂ ಅಗತ್ಯವಿರುವ ಅವಧಿಗೆ ಮಾತ್ರ ಔಷಧಿ ಸೂಚಿಸುವಂತೆ ಎಚ್ಚರಿಕೆ.

ಕಿಡ್ನಿ ಸಮಸ್ಯೆ ಇರುವ ರೋಗಿಗಳಿಗೆ ಔಷಧಿ ನೀಡುವಾಗ ಹೆಚ್ಚಿನ ಮುನ್ನೆಚ್ಚರಿಕೆ ವಹಿಸಬೇಕು.

ನಿರ್ಜಲೀಕರಣ ಹಾಗೂ ಹೃದಯ ಸಂಬಂಧಿ ಸಮಸ್ಯೆ ಇರುವವರಲ್ಲೂ ಔಷಧಿ ಬಳಕೆಯಲ್ಲಿ ಎಚ್ಚರಿಕೆ ಅಗತ್ಯ.

ಯಾವ ರೀತಿಯ ಸೋಂಕು, ಸೋಂಕು ಉಂಟಾಗಿರುವ ಸ್ಥಳ ಹಾಗೂ ಅದರ ತೀವ್ರತೆ ಏನು ಎಂಬುದನ್ನು ಪರಿಶೀಲಿಸಿ ಆಂಟಿಬಯೋಟಿಕ್ ಆಯ್ಕೆ ಮಾಡಬೇಕು.

ಅನಗತ್ಯ ಔಷಧಿ ಹಾಗೂ ತಪ್ಪಾದ ಕಾಂಬಿನೇಷನ್‌ಗಳನ್ನು ಸೂಚಿಸುವುದನ್ನು ತಪ್ಪಿಸಬೇಕು.

ಫಾರ್ಮಸಿಸ್ಟ್‌ಗಳು, ರಿಟೈಲರ್‌ಗಳಿಗೆ ಕಟ್ಟುನಿಟ್ಟಿನ ಸೂಚನೆ

ಔಷಧಿ ಮಾರಾಟದ ವೇಳೆ ಔಷಧಿಗಳ ನಿಯಮ 1945ರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ನಿಯಮಗಳ ಪ್ರಕಾರ ಷೆಡ್ಯೂಲ್ ಎಚ್ ಎಚ್1 ಮತ್ತು ಎಕ್ಸ್ ಅಡಿಯಲ್ಲಿ ಬರುವ ಔಷಧಿಗಳನ್ನು ನೋಂದಾಯಿತ ವೈದ್ಯರ ಪ್ರಿಸ್ಕ್ರಿಪ್ಶನ್ ಇಲ್ಲದೆ ಚಿಲ್ಲರೆ ಮಾರಾಟ ಮಾಡುವಂತಿಲ್ಲ.

ವೈದ್ಯರ ಪ್ರಿಸ್ಕ್ರಿಪ್ಶನ್ ಇಲ್ಲದೆ ನಿಯಂತ್ರಿತ ಔಷಧಿ ಮಾರಾಟ ಮಾಡಬಾರದು.

ಫಾರ್ಮಸಿಸ್ಟ್‌ಗಳು ಜನರನ್ನು ಸ್ವಯಂ ಚಿಕಿತ್ಸೆಗೆ, ವಿಶೇಷವಾಗಿ ಆಂಟಿಬಯೋಟಿಕ್ ಅಥವಾ ನೋವು ನಿವಾರಕ ಮಾತ್ರೆಗಳನ್ನು ಸ್ವತಃ ತೆಗೆದುಕೊಳ್ಳಲು ಪ್ರೋತ್ಸಾಹಿಸಬಾರದು.

ಔಷಧಿಯ ಲೇಬಲ್‌ನಲ್ಲಿರುವ ಎಚ್ಚರಿಕೆ ಹಾಗೂ ಮಾರಾಟದ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

ಪ್ರಿಸ್ಕ್ರಿಪ್ಶನ್ ಔಷಧಿಗಳ ಮಾರಾಟದಲ್ಲಿ ನಿಯಮಾನುಸಾರ ದಾಖಲೆಗಳನ್ನು ನಿರ್ವಹಿಸಬೇಕು.

ಸ್ವಯಂ ಚಿಕಿತ್ಸೆಗೂ ಬ್ರೇಕ್

ವೈದ್ಯರ ಸಲಹೆಯಿಲ್ಲದೆ ಆಂಟಿಬಯೋಟಿಕ್ಸ್‌ಗಳನ್ನು ಸೇವಿಸುವುದು ಅಥವಾ ಹಿಂದಿನ ಪ್ರಿಸ್ಕ್ರಿಪ್ಶನ್ ಆಧರಿಸಿ ಮತ್ತೆ ಅದೇ ಮಾತ್ರೆಗಳನ್ನು ತೆಗೆದುಕೊಳ್ಳುವುದು ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರಬಹುದು. ಆಂಟಿಬಯೋಟಿಕ್ಸ್‌ನ ಅತಿಯಾದ ಅಥವಾ ತಪ್ಪಾದ ಬಳಕೆ ಔಷಧ ಪ್ರತಿರೋಧಕತೆ ಹೆಚ್ಚಿಸುವ ಅಪಾಯವನ್ನೂ ಉಂಟುಮಾಡುತ್ತದೆ.

ಹೀಗಾಗಿ ಇನ್ನು ಮುಂದೆ 'ಮಾತ್ರೆ ಬೇಕು ಕೊಡಿ' ಎನ್ನುವ ಗ್ರಾಹಕರಿಗೆ ಪ್ರಿಸ್ಕ್ರಿಪ್ಶನ್ ಇಲ್ಲದೆ ಔಷಧಿ ನೀಡುವಂತಿಲ್ಲ ಎಂಬ ಸಂದೇಶವನ್ನು ಹೊಸ ಮಾರ್ಗಸೂಚಿಗಳು ಮತ್ತಷ್ಟು ಗಟ್ಟಿಗೊಳಿಸಿವೆ.

ನಿಯಮ ಉಲ್ಲಂಘಿಸಿದರೆ ಕ್ರಮ:

ಔಷಧಿ ಮಾರಾಟದ ನಿಯಮಗಳನ್ನು ಉಲ್ಲಂಘಿಸುವ ರಿಟೈಲರ್‌ಗಳು ಹಾಗೂ ಸಂಬಂಧಿತ ಸಂಸ್ಥೆಗಳ ವಿರುದ್ಧ ಔಷಧ ನಿಯಂತ್ರಣ ಕಾಯ್ದೆ ಮತ್ತು ನಿಯಮಗಳಡಿ ಕ್ರಮ ಕೈಗೊಳ್ಳಬಹುದಾಗಿದೆ. ಪರವಾನಗಿ ಷರತ್ತುಗಳ ಉಲ್ಲಂಘನೆ ಕಂಡುಬಂದರೆ ಪರವಾನಗಿ ಅಮಾನತು ಅಥವಾ ರದ್ದತಿ ಸೇರಿದಂತೆ ಕ್ರಮಕ್ಕೆ ಅವಕಾಶವಿದೆ.

## ಕಿಡ್ನಿ ಮೇಲೆ ಕಣ್ಣಿಡಿ..!

ಆಂಟಿಬಯೋಟಿಕ್ಸ್ ಮತ್ತು ಓಖಂಖಆಗಳ ಅನಿಯಂತ್ರಿತ ಬಳಕೆಯಿಂದ ಕಿಡ್ನಿಗೆ ತೊಂದರೆ ಉಂಟಾಗುವ ಸಾಧ್ಯತೆಯ ಹಿನ್ನೆಲೆಯಲ್ಲಿ ಅಆಖಅಔ ಹೊಸ ಸುತ್ತೋಲೆಯಲ್ಲಿ ವೈದ್ಯರು ಮತ್ತು ಆರೋಗ್ಯ ಸೇವಾ ವಲಯಕ್ಕೆ ಎಚ್ಚರಿಕೆ ನೀಡಿದೆ.

# ಅಖಿಲೇಶ್ ಪರ ಎಸ್‌ಪಿ, ರಾಹುಲ್ ಪರ ಕಾಂಗ್ರೆಸ್ ಮೈತ್ರಿಕೂಟದಲ್ಲಿ ನಾಯಕತ್ವದ ಚರ್ಚೆ

ಲಖನೌ, ಸೆ.23: ಉತ್ತರ ಪ್ರದೇಶದಲ್ಲಿ 2027ರ ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವ ಬೆನ್ನಲ್ಲೇ ಸಮಾಜವಾದಿ ಪಕ್ಷ (ಎಸ್‌ಪಿ) ಮತ್ತು ಕಾಂಗ್ರೆಸ್ ಮೈತ್ರಿಕೂಟದೊಳಗೆ ನಾಯಕತ್ವದ ಕುರಿತು ಭಿನ್ನ ಧ್ವನಿಗಳು ಕೇಳಿಬಂದಿವೆ. ಎಸ್‌ಪಿ ಸಂಸದೆ ಇಕ್ರಾ ಹಸನ್ ಅವರು ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರನ್ನು ಬಿಜೆಪಿಯನ್ನು ಎದುರಿಸುವ ಪ್ರಮುಖ ನಾಯಕ ಎಂದು ಬಣ್ಣಿಸಿದ್ದರೆ, ಕಾಂಗ್ರೆಸ್ ಸಂಸದ ಇಮ್ರಾನ್ ಮಸೂದ್ ಅವರು ರಾಹುಲ್ ಗಾಂಧಿ ಅವರ ನಾಯಕತ್ವವನ್ನು ಪ್ರತಿಪಾದಿಸಿದ್ದಾರೆ.

ಕಾಂಗ್ರೆಸ್ ಸಂಸದ ಇಮ್ರಾನ್ ಮಸೂದ್ ಅವರು ಪಿಟಿಐಗೆ ನೀಡಿದ ಹೇಳಿಕೆಯಲ್ಲಿ, ದೇಶಾದ್ಯಂತ ಬಿಜೆಪಿಯನ್ನು ಎದುರಿಸುವ ಪ್ರಮುಖ ವಿರೋಧಿ ಧ್ವನಿ ರಾಹುಲ್ ಗಾಂಧಿ ಎಂದು ಹೇಳಿದ್ದಾರೆ. ರಾಹುಲ್ ಗಾಂಧಿ ಸಾಕಷ್ಟು ಪರಿಶ್ರಮ ಹಾಕಿ ಬಿಜೆಪಿಯನ್ನು ಎದುರಿಸುವ ವಾತಾವರಣ ನಿರ್ಮಿಸಿದ್ದಾರೆ. ಅವರಿಲ್ಲದೆ ಏನೂ ಸಾಧ್ಯವಿಲ್ಲ ಎಂಬುದು ಸ್ಪಷ್ಟವಾಗಿರಬೇಕು ಎಂದು ಅವರು ಪ್ರತಿಪಾದಿಸಿದ್ದಾರೆ.

ಇನ್ನೊಂದೆಡೆ, ಎಸ್‌ಪಿ ಸಂಸದೆ ಇಕ್ರಾ ಹಸನ್ ಅವರು ಅಖಿಲೇಶ್ ಯಾದವ್



ಅವರೇ ಬಿಜೆಪಿಯನ್ನು ಸೋಲಿಸುವ ಸಾಮರ್ಥ್ಯ ಹೊಂದಿರುವ ನಾಯಕ ಎಂದು ಹೇಳಿದ್ದಾರೆ. ಕಾಂಗ್ರೆಸ್ ಏಕಾಂಗಿಯಾಗಿ ಹೆಚ್ಚಿನ ಸಾಧನೆ ಮಾಡಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನೂ ಅವರು ವ್ಯಕ್ತಪಡಿಸಿದ್ದಾರೆ. ಮೈತ್ರಿಯ ಹಿರಿಯ ನಾಯಕರು ಎರಡೂ ಪಕ್ಷಗಳ ನಡುವೆ ಒಗ್ಗಟ್ಟು ಮುಂದುವರಿಯಲಿದೆ ಎಂದು ಹೇಳುತ್ತಿರುವ ಸಂದರ್ಭದಲ್ಲೇ ಕೆಳಹಂತದ ನಾಯಕರ ಇಂತಹ ಹೇಳಿಕೆಗಳು ಮೈತ್ರಿಯೊಳಗಿನ ನಾಯಕತ್ವ ಮತ್ತು ಸ್ಥಾನ ಹಂಚಿಕೆ ಕುರಿತ ಚರ್ಚೆಯನ್ನು ಮತ್ತೆ ಮುನ್ನೆಲೆಗೆ ತಂದಿವೆ.

ಕಾಂಗ್ರೆಸ್ ಮತ್ತು ಎಸ್‌ಪಿ 2027ರ ವಿಧಾನಸಭಾ ಚುನಾವಣೆಯಲ್ಲಿ ಮೈತ್ರಿಯಾಗಿ ಸ್ಪರ್ಧಿಸುವುದಾಗಿ ಈಗಾಗಲೇ ಹೇಳಿವೆ. ಆದರೆ, ಯಾವ ಪಕ್ಷ ಎಷ್ಟು ಸ್ಥಾನಗಳಲ್ಲಿ ಸ್ಪರ್ಧಿಸಬೇಕು ಮತ್ತು ಸೀಟು ಹಂಚಿಕೆ ಕುರಿತು ಮಾತುಕತೆ ಯಾವಾಗ ಅಂತಿಮಗೊಳ್ಳಬೇಕು ಎಂಬ ವಿಚಾರದಲ್ಲಿ ಎರಡೂ ಪಕ್ಷಗಳ ನಡುವೆ ಭಿನ್ನಾಭಿಪ್ರಾಯಗಳಿವೆ. ಕಾಂಗ್ರೆಸ್ ಶೀಘ್ರದಲ್ಲೇ ಸೀಟು ಹಂಚಿಕೆ ಅಂತಿಮಗೊಳಿಸಲು ಬಯಸುತ್ತಿದ್ದು, ಎಸ್‌ಪಿ ಮೊದಲು ತನ್ನ ಚುನಾವಣಾ ಸಿದ್ಧತೆಗಳನ್ನು ಪೂರ್ಣಗೊಳಿಸಿದ ಬಳಿಕ ಈ ವಿಚಾರ ಚರ್ಚಿಸಲು ಮುಂದಾಗಿದೆ.

2024ರ ಲೋಕಸಭಾ ಚುನಾವಣೆಯಲ್ಲಿ ಉತ್ತರ ಪ್ರದೇಶದಲ್ಲಿ ಎಸ್‌ಪಿ ಮತ್ತು ಕಾಂಗ್ರೆಸ್ ಮೈತ್ರಿಯಾಗಿ ಸ್ಪರ್ಧಿಸಿದ್ದವು. ಎಸ್‌ಪಿ 37 ಹಾಗೂ ಕಾಂಗ್ರೆಸ್ 6 ಸ್ಥಾನಗಳನ್ನು ಗೆದ್ದಿದ್ದು, ಎರಡೂ ಪಕ್ಷಗಳು ಒಟ್ಟಾಗಿ 43 ಸ್ಥಾನಗಳನ್ನು ಪಡೆದಿದ್ದವು. ಫೈಜಾಬಾದ್ ಲೋಕಸಭಾ ಕ್ಷೇತ್ರವನ್ನೂ ಮೈತ್ರಿ ಗೆದ್ದಿತ್ತು.

ಈ ನಡುವೆ, ಆಲ್ ಇಂಡಿಯಾ ಮಜ್ಲಿಸ್–ಎ–ಇತ್ತೆಹಾದುಲ್ ಮುಸ್ಲಿಮೀನ್ (ಎಐಎಂಐಎಂ) ಮುಖ್ಯಸ್ಥ ಅಸಾದುದ್ದೀನ್ ಓವೈಸಿ ಕೂಡ ಉತ್ತರ ಪ್ರದೇಶದಲ್ಲಿ ಮೈತ್ರಿಗೆ ಸಿದ್ಧವಿರುವುದಾಗಿ ಹೇಳಿದ್ದಾರೆ. ಬಿಜೆಪಿ ಮತ್ತೆ ಅಧಿಕಾರಕ್ಕೆ ಬರದಂತೆ ತಡೆಯಲು ಬಯಸುವ ಪಕ್ಷಗಳು ತಮ್ಮೊಂದಿಗೆ ಕೈಜೋಡಿಸಬಹುದು ಎಂದು ಕಾನ್ಪುರದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಅವರು ಹೇಳಿದ್ದಾರೆ.

# ತೈಲ ಬೆಲೆ ಇಳಿಕೆ: ಸೌದಿ ಪೈಪ್‌ಲೈನ್ ಪುನರಾರಂಭ

ನವದೆಹಲಿ, ಸೆ.23: ಸೌದಿ ಅರೇಬಿಯಾ ಕೆಂಪು ಸಮುದ್ರದತ್ತ ಸಾಗುವ ಪ್ರಮುಖ ಪೈಪ್‌ಲೈನ್ ಮೂಲಕ ಕಚ್ಚಾ ತೈಲ ಪೂರೈಕೆಯನ್ನು ಪುನರಾರಂಭಿಸಿರುವ ಹಿನ್ನೆಲೆಯಲ್ಲಿ ಬುಧವಾರ ಜಾಗತಿಕ ತೈಲ ಬೆಲೆಗಳು ಬ್ಯಾರೆಲ್‌ಗೆ 100 ಡಾಲರ್‌ಗಿಂತ ಕೆಳಗೆ ಇಳಿದಿದೆ. ಅಮೆರಿಕ?ಇರಾನ್ ಸಂಘರ್ಷಕ್ಕೆ ರಾಜತಾಂತ್ರಿಕ ಪರಿಹಾರ ಕಂಡುಕೊಳ್ಳುವ ಸಾಧ್ಯತೆಯೂ ತೈಲ ಬೆಲೆ ಇಳಿಕೆಗೆ ಕಾರಣವಾಗಿದೆ.

ಭಾರತೀಯ ಕಾಲಮಾನ ಬೆಳಗ್ಗೆ 7:30ಕ್ಕೆ ಡಬ್ಲ್ಯೂಟಿಐ ಕಚ್ಚಾ ತೈಲವು ಬ್ಯಾರೆಲ್‌ಗೆ 90.10 ಡಾಲರ್ ನಲ್ಲಿ ವಹಿವಾಟಾಗುತ್ತಿದ್ದು, 42 ಸೆಂಟ್‌ಗಳು ಅಥವಾ ಶೇ.0.46 ರಷ್ಟು ಕುಸಿತ ಕಂಡಿತು. ಬ್ರೆಂಟ್ ಕಚ್ಚಾ ತೈಲವು 99.09 ಡಾಲರ್ ನಲ್ಲಿ ವಹಿವಾಟಾಗಿದ್ದು, 16 ಸೆಂಟ್‌ಗಳು ಅಥವಾ ಶೇ.0.16 ರಷ್ಟು ಇಳಿಕೆಯಾಗಿದೆ.

ಮಂಗಳವಾರ ಬ್ರೆಂಟ್ ತೈಲವು 100 ಡಾಲರ್‌ಗಿಂತ ಕೆಳಗೆ ಮುಕ್ತಾಯಗೊಂಡಿತ್ತು. ಸೆಪ್ಟೆಂಬರ್ 8ರ ನಂತರ ಇದೇ ಮೊದಲ ಬಾರಿಗೆ ಈ ಮಟ್ಟಕ್ಕಿಂತ ಕೆಳಗೆ ಮುಕ್ತಾಯವಾಗಿದೆ. ತೈಲ ಪೂರೈಕೆ ಸುಧಾರಿಸಲಿದೆ ಎಂಬ ನಿರೀಕ್ಷೆ ಮತ್ತು ಸುಮಾರು ಏಳು ತಿಂಗಳ ಸಂಘರ್ಷಕ್ಕೆ ರಾಜತಾಂತ್ರಿಕ ಪರಿಹಾರ ಕಂಡುಕೊಳ್ಳುವ ಪ್ರಯತ್ನಗಳು ಬೆಲೆಗಳ ಮೇಲೆ ಒತ್ತಡ ತಂದಿವೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್ ವಿರುದ್ಧ ಕಠಿಣ ಕ್ರಮದ ಎಚ್ಚರಿಕೆ ನೀಡಿದ್ದರೂ, ಅವರ ಪ್ರತಿನಿಧಿಗಳಾದ ಸ್ಟೀವ್ ವಿಟ್ಕಾಫ್ ಮತ್ತು ಜಾರೆಡ್ ಕುಶ್ನರ್ ಅವರು ಇರಾನ್ ಮಧ್ಯವರ್ತಿಗಳೊಂದಿಗೆ ಮಾತುಕತೆ ನಡೆಸಿದ್ದಾರೆ ಎಂದು ಹೇಳಿದ್ದಾರೆ. "ಒಪ್ಪಂದವಾಗುವತ್ತ ಸಾಕಷ್ಟು ವೇಗವಿದೆ" ಎಂದು ಟ್ರಂಪ್ ತಿಳಿಸಿದ್ದಾರೆ. ಇದೇ ವೇಳೆ, ಸೌದಿ ಅರೇಬಿಯಾ ತನ್ನ ಈಸ್ಟ್‌ವೆಸ್ಟ್ ಪೈಪ್‌ಲೈನ್ ಕಾರ್ಯಾಚರಣೆಯನ್ನು ಪುನರಾರಂಭಿಸಿದೆ. ಸೆಪ್ಟೆಂಬರ್ 11ರಂದು ನಡೆದ ಡ್ರೋನ್ ದಾಳಿಗಳ ಬಳಿಕ ಪೈಪ್‌ಲೈನ್ ಸ್ಥಗಿತಗೊಂಡಿತ್ತು. ದಾಳಿಗೆ ಇರಾಕ್‌ನ ಸಶಸ್ತ್ರ ಗುಂಪು ಕಾರಣ ಎಂದು ಸೌದಿ ಆರೋಪಿಸಿತ್ತು.

ಹೋರ್ಮುಜ್ ಜಲಸಂಧಿ ಮೂಲಕ ತೈಲ ಸಾಗಣೆಗೆ ಅಡ್ಡಿಯಾಗಿರುವ ಹಿನ್ನೆಲೆಯಲ್ಲಿ ಸೌದಿ ಅರೇಬಿಯಾ ಈ ಪೈಪ್‌ಲೈನ್ ಮೂಲಕ ದಿನಕ್ಕೆ ಸುಮಾರು 40 ಲಕ್ಷ ಬ್ಯಾರೆಲ್ ಕಚ್ಚಾ ತೈಲವನ್ನು ಯನ್ಬು ಬಂದರಿಗೆ ಸಾಗಿಸುತ್ತಿದೆ. ಇದು ಜಾಗತಿಕ ತೈಲ ಪೂರೈಕೆಯ ಸುಮಾರು ಶೇ.4ಕ್ಕೆ ಸಮಾನವಾಗಿದೆ.

ಇರಾಕ್ ಕೂಡ ತೈಲ ರಫ್ತು ಹೆಚ್ಚಿಸುತ್ತಿದ್ದು, ದಿನಕ್ಕೆ 30 ಲಕ್ಷ ಬ್ಯಾರೆಲ್‌ಗಿಂತ ಹೆಚ್ಚು ರಫ್ತು ಮಾಡುತ್ತಿದೆ. ಟರ್ಕಿ ಮೂಲಕ



ರಫ್ತು 6 ಲಕ್ಷ ಬ್ಯಾರೆಲ್‌ಗಿಂತ ಹೆಚ್ಚಾಗುವ ನಿರೀಕ್ಷೆಯಿದೆ. ಆಗಸ್ಟ್ ನಲ್ಲಿ ಇರಾಕ್‌ನ ತೈಲ ರಫ್ತು 21.723 ಲಕ್ಷ ಬ್ಯಾರೆಲ್‌ಗಳಷ್ಟಿತ್ತು.

ಸಂಜೆವಾಣಿ



(ಮೂರನೇ ಪುಟದಿಂದ)

# ಬರ ಪರಿಹಾರ: ಕೇಂದ್ರಕ್ಕೆ ಡಿಕೆಶಿ ಆಗ್ರಹ

ತೆರಿಗೆ ಸಂಗ್ರಹವಾಗುತ್ತಿದ್ದು, ಅದಕ್ಕೆ ಅನುಗುಣವಾಗಿ ರಾಜ್ಯಕ್ಕೆ ಹೆಚ್ಚಿನ ಪರಿಹಾರ ನೀಡಬೇಕು ಎಂದು ಹೇಳಿದರು.

2014ರಿಂದ ಇಲ್ಲಿಯವರೆಗೆ ಕರ್ನಾಟಕ ಕೇಳಿರುವಷ್ಟು ಪರಿಹಾರವನ್ನು ಎನ್‌ಡಿಆರ್‌ಎಫ್‌ನಿಂದ ಕೇಂದ್ರ ಸರ್ಕಾರ ನೀಡಿಲ್ಲ ಎಂದು ಆರೋಪಿಸಿದ ಅವರು, ಕರ್ನಾಟಕಕ್ಕೆ ಪರಿಹಾರ ನೀಡುವ ವಿಚಾರದಲ್ಲಿ ತಾರತಮ್ಯ ಮಾಡಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಗುಜರಾತ್‌ಗೆ ಮುಂಗಡ ಹಣ ನೀಡುವ ರೀತಿಯಲ್ಲಿ ಕರ್ನಾಟಕಕ್ಕೂ ಮುಂಗಡ ಪರಿಹಾರ ಹಣ ನೀಡಬೇಕು. ರಾಜ್ಯದ ಹತ್ತಿ ಬೆಳೆಗಾರರು ಸಂಕಷ್ಟದಲ್ಲಿದ್ದು, ಅವರಿಗೂ ನೆರವು ನೀಡಬೇಕು ಎಂದು ಒತ್ತಾಯಿಸಿದರು.

ಹಸು, ಕುರಿ, ಮೇಕೆಗಳು ಮೃತಪಟ್ಟ ಸಂದರ್ಭದಲ್ಲಿ ಅನುಗ್ರಹ ಯೋಜನೆಯಡಿ ನೀಡಬೇಕಾದ ಅನುದಾನ ಒಂದು ವರ್ಷದಿಂದ ಬಿಡುಗಡೆಯಾಗಿಲ್ಲ. ಕೂಡಲೇ ಅನುದಾನ ಬಿಡುಗಡೆ ಮಾಡಬೇಕು. ರೈತರ ಸಾಲಮನ್ನಾಕ್ಕೂ ಕೇಂದ್ರ ಸರ್ಕಾರ ಸಹಕಾರ ನೀಡಬೇಕು ಎಂದು ಶಿವಕುಮಾರ್ ಆಗ್ರಹಿಸಿದರು.

**ದಿಢೀರ್ ಉತ್ತರ ಸಾಧ್ಯವಿಲ್ಲ:**

ಮುಖ್ಯಮಂತ್ರಿ ಮಾತನಾಡಿದ ಬಳಿಕ ಆರ್ಥಿಕ ಇಲಾಖೆ ಪತ್ರದ ವಿಚಾರವಾಗಿ ಚರ್ಚೆ ನಡೆಸಿ ಉತ್ತರ ನೀಡಬೇಕು ಎಂದು ಬಿಜೆಪಿ ಸದಸ್ಯರು ಆಗ್ರಹಿಸಿದರು. ಇದಕ್ಕೆ ಸಭಾ ನಾಯಕ ಯತೀಂದ್ರ ಪ್ರತಿಕ್ರಿಯಿಸಿ, ಈ ವಿಚಾರವನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಅವರಿಂದ ಉತ್ತರ ಕೊಡಿಸಲಾಗುವುದು. ಮುಖ್ಯಮಂತ್ರಿ ಸದನಕ್ಕೆ ಬಂದ ಬಳಿಕ ಉತ್ತರ ಪಡೆಯೋಣ. ಈಗ ಬೇರೆ ವಿಷಯದ ಚರ್ಚೆಗಾಗಿ ಸದನ ಕರೆಯಲಾಗಿದೆ. ದಿಢೀರ್‌ನೆ ಉತ್ತರ ನೀಡುವಂತೆ ಕೇಳಿದರೆ ಸಾಧ್ಯವಿಲ್ಲ ಎಂದು ಹೇಳಿದರು.

ಯತೀಂದ್ರ ಅವರ ಮಾತಿಗೆ ವಿಪಕ್ಷ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಸದನದ ಕಲಾಪಕ್ಕೆ ಇನ್ನೊಂದೇ ದಿನ ಬಾಕಿ ಇದೆ. ಮುಖ್ಯಮಂತ್ರಿ ಬಂದು ಉತ್ತರ ನೀಡುವಷ್ಟರಲ್ಲಿ ಸದನ ಮುಗಿದರೆ ಹೇಗೆ ಎಂದು ಪ್ರಶ್ನಿಸಿದರು. ಈ ವೇಳೆ ಆಡಳಿತ ಹಾಗೂ ವಿಪಕ್ಷ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು.

# ಎಸ್‌ಐಆರ್ ಭಿನ್ನಾಭಿಪ್ರಾಯವಿಲ್ಲ

ನಿರ್ಧಾರಗಳು ಹಾಗೂ ಆದೇಶಗಳ ಬಗ್ಗೆ ಲಿಖಿತ ಆಕ್ಷೇಪ ದಾಖಲಿಸಿದ್ದರು. ಕೆಲವು ಸಂದರ್ಭಗಳಲ್ಲಿ ತಮ್ಮ ಗಮನಕ್ಕೆ ಅಥವಾ ಅನುಮೋದನೆಗೆ ಬಾರದ ರೀತಿಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅವರು ಪ್ರಶ್ನಿಸಿದ್ದರು ಎಂದು ವರದಿ ತಿಳಿಸಿದೆ.

ಈ ಆಕ್ಷೇಪಗಳು ಹೊಸ ಮತದಾರರ ಸೇರ್ಪಡೆ, ಮತದಾರರ ಹೆಸರುಗಳ ಅಳಿಸುವಿಕೆ ಹಾಗೂ ಮರುಸ್ಥಾಪನೆ, ಮತದಾರರ ಪಟ್ಟಿಯ ದತ್ತಾಂಶ ನಿರ್ವಹಣೆ, ಮೇಲ್ಮನವಿ ಪ್ರಕ್ರಿಯೆ ಮತ್ತು ಚುನಾವಣಾ ದತ್ತಾಂಶಕ್ಕೆ ಪ್ರವೇಶ ಸೇರಿದಂತೆ ಹಲವು ವಿಷಯಗಳಿಗೆ ಸಂಬಂಧಿಸಿದ್ದವು. ಹೊಸ ಮತದಾರರ ನೋಂದಣಿಗೆ ಬಳಸುವ ಫಾರಂ–6ರಲ್ಲಿ ಎಸ್‌ಐಆರ್‌ಗೆ ಸಂಬಂಧಿಸಿದ ಹೊಸ ಘೋಷಣೆಯನ್ನು ಸೇರಿಸಿರುವುದಕ್ಕೂ ಇಬ್ಬರು ಆಯುಕ್ತರು ಆಕ್ಷೇಪ ವ್ಯಕ್ತಪಡಿಸಿದ್ದರು ಎಂದು ವರದಿ ಹೇಳಿದೆ.

ಹೊಸ ಅರ್ಜಿದಾರರ ಹೆಸರು ಅಥವಾ ಅವರ ಪೋಷಕರು/ಅಜ್ಜ–ಅಜ್ಜಿಯರ ಹೆಸರು ಹಿಂದಿನ ಎಸ್‌ಐಆರ್‌ನ ಮತದಾರರ ಪಟ್ಟಿಯಲ್ಲಿ ಇತ್ತೇ ಎಂಬ ಮಾಹಿತಿಯನ್ನು ಕೇಳುವ ಅಂಶವನ್ನು ಫಾರಂನಲ್ಲಿ ಸೇರಿಸಲಾಗಿತ್ತು. ಈ ರೀತಿಯ ಶಾಸನಬದ್ಧ ನಮೂನೆ ಬದಲಾವಣೆಗೆ ನಿಯಮ ತಿದ್ದುಪಡಿ ಅಗತ್ಯವಿದೆ ಎಂದು ಜೋಶಿ ಹಾಗೂ ಸಂಧು ತಮ್ಮ ಟಿಪ್ಪಣಿಗಳಲ್ಲಿ ಹೇಳಿದ್ದರು ಎಂದು ದಿ ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಮಾಡಿದೆ.

ಮತದಾರರ ಪಟ್ಟಿಯ ದತ್ತಾಂಶಕ್ಕೆ ರಾಜ್ಯ ಹಾಗೂ ಕ್ಷೇತ್ರಮಟ್ಟದ ಅಧಿಕಾರಿಗಳ ಪ್ರವೇಶವನ್ನು ನಿರ್ಬಂಧಿಸುವ ಮೂಲಕ ವ್ಯವಸ್ಥೆ ಕೇಂದ್ರೀಕೃತವಾಗುತ್ತಿದೆ ಎಂಬ ಆತಂಕವನ್ನೂ ಇಬ್ಬರು ಆಯುಕ್ತರು ವ್ಯಕ್ತಪಡಿಸಿದ್ದರು ಎಂದು ವರದಿ ತಿಳಿಸಿದೆ. ಮತದಾರರ ಪಟ್ಟಿಯ ನಿರ್ವಹಣೆಯಲ್ಲಿ ಕ್ಷೇತ್ರದ ಚುನಾವಣಾ ನೋಂದಣಾಧಿಕಾರಿಗಳ ಪಾತ್ರ ಮತ್ತು ಅವರ ದತ್ತಾಂಶ ಪ್ರವೇಶದ ಹಕ್ಕುಗಳ ಬಗ್ಗೆ ಪ್ರಶ್ನೆಗಳು ಎದ್ದಿದ್ದವು. ಕೆಲವು ತಾಂತ್ರಿಕ ಹಾಗೂ ಆಡಳಿತಾತ್ಮಕ ಬದಲಾವಣೆಗಳು ತಮ್ಮ ಗಮನಕ್ಕೆ ತರಲಾಗಿಲ್ಲ ಎಂಬ ಆಕ್ಷೇಪವೂ ದಾಖಲಾಗಿತ್ತು.

ಈ ವರದಿ ಹೊರಬಿದ್ದ ಬೆನ್ನಲ್ಲೇ ಕಾಂಗ್ರೆಸ್ ಸೇರಿದಂತೆ ಹಲವು ಪ್ರತಿಪಕ್ಷಗಳು ಚುನಾವಣಾ ಆಯೋಗದ ಕಾರ್ಯವೈಖರಿ ಬಗ್ಗೆ ಪ್ರಶ್ನೆಗಳನ್ನು ಎತ್ತಿವೆ. ಕಾಂಗ್ರೆಸ್, ಎಸ್‌ಪಿ, ಟಿಎಂಸಿ, ಡಿಎಂಕೆ, ಆಪ್, ಶಿವಸೇನೆ (ಯುಬಿಟಿ) ಹಾಗೂ ಸಿಪಿಐ(ಎಂ) ನಾಯಕರು ಎಸ್‌ಐಆರ್ ಪ್ರಕ್ರಿಯೆ ಮತ್ತು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ಪಾತ್ರದ ಕುರಿತು ವಿವಿಧ ಆರೋಪಗಳನ್ನು ಮಾಡಿದ್ದಾರೆ.

ಕಾಂಗ್ರೆಸ್ ಆಯೋಗದ ನಿರ್ಧಾರ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕುರಿತು ಪ್ರಶ್ನೆ ಎತ್ತಿದ್ದರೆ, ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಈ ಬೆಳವಣಿಗೆಯನ್ನು ಗಂಭೀರ ಎಂದು ಬಣ್ಣಿಸಿ ಸುಪ್ರೀಂ ಕೋರ್ಟ್ ಸ್ವಯಂಪ್ರೇರಿತವಾಗಿ ವಿಚಾರಣೆ ಕೈಗೆತ್ತಿಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ. ಟಿಎಂಸಿ ಸಂಸದ ಅಭಿಷೇಕ್ ಬ್ಯಾನರ್ಜಿ ಕೂಡ ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ತನಿಖೆಗೆ ಒತ್ತಾಯಿಸಿದ್ದಾರೆ.

ಆದರೆ, ಈ ರಾಜಕೀಯ ಆರೋಪಗಳ ನಡುವೆ ಚುನಾವಣಾ ಆಯೋಗದ ಮೂಲಗಳು ಯಾವುದೇ ನಿರ್ಧಾರದಲ್ಲಿ ಆಯೋಗದ ಸದಸ್ಯರ ಅಧಿಕೃತ ಭಿನ್ನಮತ ಇರಲಿಲ್ಲ; ಎಸ್‌ಐಆರ್ ಸೇರಿದಂತೆ ಎಲ್ಲ ನಿರ್ಧಾರಗಳೂ ಸರ್ವಾನುಮತದಿಂದಲೇ ಕೈಗೊಳ್ಳಲಾಗಿದೆ ಎಂದು ಪುನರುಚ್ಚರಿಸಿವೆ.

# ಶಾಸಕ ಯಶವಂತ ಮನವೊಲಿಕೆ

ಎಂಬುದನ್ನು ಹೇಳಬೇಕಾಗುತ್ತದೆ. ಹಿರಿಯರಾದ ಹೆಚ್.ಕೆ. ಪಾಟೀಲ್ ಒತ್ತಡಕ್ಕೆ ಒಳಗಾಗಿ ರಾಜೀನಾಮೆ ಮಾತನಾಡಿದ್ದರು. ಅದೇ ರೀತಿ ಯಶವಂತರಾಯಗೌಡ ಪಾಟೀಲ್ ಸಹ ಭಾವೋದ್ವೇಗಕ್ಕೆ ಒಳಗಾಗಿ ಈ ರೀತಿ ಮಾಡಿದ್ದಾರೆ ಎಂದರು.

**ರಾಜೀನಾಮೆ ತಿರಸ್ಕಾರ :**

ಶಾಸಕ ಸ್ಥಾನಕ್ಕೆ ಕಾಂಗ್ರೆಸ್ ನ ಯಶವಂತರಾಯಗೌಡ ಪಾಟೀಲ್ ನೀಡಿದ್ದ ರಾಜೀನಾಮೆ ಪತ್ರವನ್ನು ಸಭಾಧ್ಯಕ್ಷ ಜಿ.ಎಸ್.ಪಾಟೀಲ್ ತಿರಸ್ಕರಿಸಿದ್ದಾರೆ. ವಿಧಾನಸಭೆಯಲ್ಲಿ ರಾಜೀನಾಮೆ ಬಗ್ಗೆ ಸ್ಪಷ್ಟನೆ ನೀಡುವಂತೆ ಪ್ರತಿಪಕ್ಷಗಳ ಮಾತಿಗೆ ಸಭಾಧ್ಯಕ್ಷ ಪಾಟೀಲ್ ಅವರು ಪ್ರತಿಕ್ರಿಯಿಸಿ, ಯಶವಂತರಾಯಗೌಡ ಪಾಟೀಲ್ ರಾಜೀನಾಮೆ ನಿಯಮಾನುಸಾರ ಇಲ್ಲ. ಹಾಗಾಗಿ ಅದನ್ನು ತಿರಸ್ಕರಿಸಲಾಗಿದೆ ಎಂದರು.

# ಸಿಎಂ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಧರಣಿ

ಕಾಂಗ್ರೆಸ್ ಪಕ್ಷ ಖಾಲಿ ಡಬ್ಬ ಎನ್ನುವುದು ಇಂದು ಗೊತ್ತಾಗುತ್ತಿದೆ. 5 ತಿಂಗಳಾಯ್ತು ಬಡವರಿಗೆ ಪಿಂಚಣಿ ಹೋಗಿಲ್ಲ, ಶಿಕ್ಷಕರಿಗೆ ಸಂಬಳ ಇಲ್ಲ, ಹಾಲು ಉತ್ಪಾದಕರಿಗೆ ಸಬ್ಸಿಡಿ ಹಣ ಕೊಟ್ಟಿಲ್ಲ ಎಂದು ದೂರಿದರು.

ಡಿ.ಕೆ. ಶಿವಕುಮಾರ್ ರವರು ಕ್ಯಾಬಿನೆಟ್ ಮಾಡಿ ಘೋಷಣೆ ಮಾಡಿದ್ದಷ್ಟೇ ಭಾಗ್ಯ. ಇದು ಘೋಷಣೆಗಳ ಸರ್ಕಾರ, ಬೋಗಸ್ ಸರ್ಕಾರ ಎಂದು ಟೀಕಿಸಿದರು.



## ಶ್ವೇತಪತ್ರಕ್ಕೆ ಬಿವೈವಿ ಒತ್ತಾಯ

ಇದೇ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು, ರಾಜ್ಯದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಮುಖ್ಯಮಂತ್ರಿಗಳು ಶ್ವೇತಪತ್ರ ಹೊರಡಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯ ಸರ್ಕಾರ 4 ಲಕ್ಷಕ್ಕೂ ಹೆಚ್ಚು ಕೋಟಿ ಹೊಸ ಸಾಲ ಮಾಡಿದೆ. ಒಟ್ಟಾರೆಯಾಗಿ 8 ಲಕ್ಷ ಕೋಟಿ ರೂಪಾಯಿ ಸಾಲ ಆಗಿದೆ. ಸಾಲ ಬಿಟ್ಟರೆ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಆಗಿಲ್ಲ ಎಂದು ದೂರಿದರು.

ಖಜಾನೆಯಲ್ಲಿ ಹಣ ಇಲ್ಲದಿದ್ದರೂ ಪುಕ್ಕಟ್ಟೆ ಘೋಷಣೆಗಳನ್ನು ಮಾಡಬೇಡಿ ಎಂದು ಒತ್ತಾಯಿಸಿದ ಅವರು, ಬರ ಪರಿಹಾರಕ್ಕೆ ಕೊಡುವುದಕ್ಕೂ ಹಣ ಇಲ್ಲ. ರಾಜ್ಯದ ಆರ್ಥಿಕ ಪರಿಸ್ಥಿತಿ ದಿವಾಳಿಯಾಗಿದೆ, ಹಣಕಾಸಿನ ಪರಿಸ್ಥಿತಿ ಕುಲಗೆಟ್ಟು ಹೋಗಿದೆ ಎಂದು ಹರಿಹಾಯ್ದರು.

ಈ ಸರ್ಕಾರ ಐಸಿಯುನಲ್ಲಿದೆ. ಅಭಿವೃದ್ಧಿಗೆ ಹಣ ಇಲ್ಲ. ಕೇವಲ ಜಾಹೀರಾತುಗಳನ್ನು ಕೊಟ್ಟು ದಿನ ಕಳೆಯುತ್ತಿದ್ದಾರೆ ಎಂದು ಅವರು ದೂರಿದರು.

ರಾಜ್ಯದಲ್ಲಿ ಖಜಾನೆ ಖಾಲಿಯಾಗಿದ್ದರೂ ಈ ಸರ್ಕಾರ ಕೇಂದರ ಸರ್ಕಾರದ ಮೇಲೆ ಗೂಬೆ ಕೂರಿಸುವ ಹುನ್ನಾರ ನಡೆಸುತ್ತಿದೆ ಎಂದು ಅವರು ಆರೋಪಿಸಿದರು.

ಆರ್ಥಿಕ ಸ್ಥಿತಿ ಹಳ್ಳ ಹಿಡಿದಿದೆ ಎಂದು ಪ್ರತಿಭಟನಾನಿರತ ಬಿಜೆಪಿ ಮತ್ತು ಜೆಡಿಎಸ್ ಶಾಸಕರುಗಳು ಘೋಷಣೆ ಕೂಗಿ ಬಿತ್ತಿ ಪತ್ರಗಳನ್ನು ಪ್ರದರ್ಶಿಸಿದರು.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಘೋಷಣೆ ಬೋಗಸ್ ಘೋಷಣೆ, ಡಿ.ಕೆ. ಕ್ಯಾಬಿನೆಟ್ ಬೋಗಸ್ ಕ್ಯಾಬಿನೆಟ್ ಎಂಬ ಘೋಷಣೆಗಳನ್ನು ಪ್ರತಿಭಟನಾಕಾರರು ಕೂಗಿದರು.

ಖಜಾನೆ ಖಾಲಿ.. ಖಾಲಿ.. ಸರ್ಕಾರ ಪಾಪರ್ ಎಂಬ ಘೋಷಣೆಗಳನ್ನು ಕೂಗಲಾಯಿತು.

# ಮನೆ ಮನೆಗೆ ಪೋಲೀಸ್‌ಗೆ ಒಂದು ವರ್ಷ

ಪತ್ತೆ ಮಾಡಲು ಸಾಧ್ಯವಾಗಿದೆ.

ಪೊಲೀಸ್ ವ್ಯವಸ್ಥೆಯಲ್ಲಿ ಸಾರ್ವಜನಿಕ ಸಹಭಾಗಿತ್ವ ಹೆಚ್ಚಾಗಿ, ಇಲಾಖೆ, ಸಾರ್ವಜನಿಕ ಸ್ನೇಹಿಯಾಗಿಸಿ ಸಮಾಜಕ್ಕೆ ಉತ್ತಮ ಸೇವೆಯನ್ನು ಒದಗಿಸಲು ಯೋಜನೆಯು ತನ್ನದೇ ಆದ ಕೂಡುಗೆ ನೀಡಿದೆ.

ಸಾರ್ವಜನಿಕರು ಮತ್ತು ಪೊಲೀಸರ ನಡುವೆ ಭ್ರಾತೃತ್ವ ಮತ್ತು ವಿಶ್ವಾಸವನ್ನು ಬೆಳೆಸಲು ಯೋಜನೆ ಸಹಾಯಕವಾಗಲಿದೆ ಎಂದು ಅಂದಿನ ಗೃಹ ಸಚಿವರಾಗಿದ್ದ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಒತ್ತಿ ಹೇಳಿದ್ದರು. ಜನರ ಮನೆ ಬಾಗಿಲಿಗೆ ಹೋಗಿ ಅವರ ಸಮಸ್ಯೆಗಳನ್ನು ಆಲಿಸೋಣ. ಅವರ ಸಮಸ್ಯೆಗಳನ್ನು ನಾವು ಪರಿಹರಿಸಿದಾಗ, ಅವರು ಇಲಾಖೆಯ ಬಗ್ಗೆ ಸಕಾರಾತ್ಮಕ ಅಭಿಪ್ರಾಯವನ್ನು ರೂಪಿಸಲು ಪ್ರಾರಂಭಿಸುತ್ತಾರೆ ಎನ್ನುವ ಅವರ ಆಶಯ ಬಹುತೇಕ ಸಾಕಾರಗೊಂಡಂತಾಗಿದೆ.

ಸಮುದಾಯ ಕೇಂದ್ರಿತ ಪೊಲೀಸ್ ವ್ಯವಸ್ಥೆಯತ್ತ ಒಂದು ವ್ಯಾಪಕ ಬದಲಾವಣೆಯ ಭಾಗವಾಗಿದೆ. ಇದು ಕರ್ನಾಟಕದಾದ್ಯಂತ ನಾಗರಿಕರು ಮತ್ತು ಕಾನೂನು ಜಾರಿ ಸಂಸ್ಥೆಗಳ ನಡುವೆ ವಿಶ್ವಾಸವನ್ನು ಬಲಪಡಿಸಲು, ಸುರಕ್ಷತೆಯನ್ನು ಸುಧಾರಿಸಲು ಮತ್ತು ಸಹಕಾರವನ್ನು ಬೆಳೆಸಲು ಗುರಿ ಹೊಂದಿದೆ. ಕರ್ನಾಟಕವು ಭಾರತದಲ್ಲಿ ಸಮುದಾಯ ಆಧಾರಿತ ಪೊಲೀಸ್ ವ್ಯವಸ್ಥೆಗೆ ಒಂದು ಮಾದರಿಯನ್ನು ಸ್ಥಾಪಿಸುತ್ತಿದೆ. ‘ಮನೆ ಮನೆಗೆ ಪೊಲೀಸ್’ ಯೋಜನೆಯ ಯಶಸ್ಸು ಸಮರ್ಪಿತ ಅನುಷ್ಠಾನ, ಸಮುದಾಯದ ಬೆಂಬಲ ಮತ್ತು ಸುರಕ್ಷಿತ ಮತ್ತು ಹೆಚ್ಚು ಸಂಪರ್ಕಿತ ಸಮಾಜವನ್ನು ನಿರ್ಮಿಸಲು ನಿರಂತರ ಮೌಲ್ಯಮಾಪನವನ್ನು ಅವಲಂಬಿಸಿರುತ್ತದೆ.

ಯೋಜನೆಯಡಿ ಬೀಟ್ ಕಾನ್‌ಸ್ಟೆಬಲ್‌ಗಳು, ಇನ್‌ಸ್ಪೆಕ್ಟರ್‌ಗಳು ಹಾಗೂ ಪೊಲೀಸ್ ಸ್ವಯಂಸೇವಕರು ಸ್ಥಳೀಯ ಪ್ರದೇಶಗಳ ಮನೆಗಳಿಗೆ ನಿಯಮಿತವಾಗಿ ಭೇಟಿ ನೀಡಿ. ನಿವಾಸಿಗಳ ಸಮಸ್ಯೆಗಳು, ಸ್ಥಳೀಯ ಸುರಕ್ಷತಾ ವಿಚಾರಗಳು ಹಾಗೂ ಕಾನೂನು ಸಂಬಂಧಿತ ಅಗತ್ಯಗಳನ್ನು ದಾಖಲಿಸಿ ಅಗತ್ಯ ಕ್ರಮ ಕೈಗೊಳ್ಳತೊಡಗಿದ್ದಾರೆ.

ಮನೆ ಮನೆಗೆ ಭೇಟಿ ನೀಡುವ ಸಂದರ್ಭದಲ್ಲಿ ಪೊಲೀಸರು ಅಪರಾಧ ತಡೆಗಟ್ಟುವಿಕೆ, ಮಹಿಳೆಯರ ಸುರಕ್ಷತೆ, ಸೈಬರ್ ಅಪರಾಧಗಳು ಸೇರಿದಂತೆ ವಿವಿಧ ವಿಚಾರಗಳ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಲಿದ್ದಾರೆ. ನಾಗರಿಕರು ತಮ್ಮ ದೂರು, ಸಮಸ್ಯೆ ಹಾಗೂ ಸ್ಥಳೀಯವಾಗಿ ಕಂಡುಬರುವ ಅನುಮಾನಾಸ್ಪದ ಚಟುವಟಿಕೆಗಳ ಬಗ್ಗೆ ಪೊಲೀಸರೊಂದಿಗೆ ನೇರವಾಗಿ ಮಾಹಿತಿ ಹಂಚಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತದೆ.

**ಯೋಜನೆ ವೈಶಿಷ್ಟ್ಯಗಳು ಮನೆಗೆ ಪೊಲೀಸರ ಭೇಟಿ:**

ಪೊಲೀಸ್ ಅಧಿಕಾರಿಗಳು ತಮ್ಮ ಸ್ಥಳೀಯ ಪ್ರದೇಶದ ಪ್ರತಿ ಮನೆಗೂ ಭೇಟಿ ನೀಡಿ, ನಿವಾಸಿಗಳೊಂದಿಗೆ ಸೌಹಾರ್ದಯುತ ಸಂಬಂಧ ಬೆಳೆಸುತ್ತಾರೆ. ಅವರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುತ್ತಾರೆ ಮತ್ತು ಸುರಕ್ಷತೆ ಹಾಗೂ ಭದ್ರತಾ ಕ್ರಮಗಳ ಬಗ್ಗೆ ಮಾರ್ಗದರ್ಶನ ನೀಡುತ್ತಾರೆ.

**ಅರಿವು ಅಭಿಯಾನ:**

ಅಪರಾಧ ತಡೆಗಟ್ಟುವಿಕೆ, ಮಹಿಳೆಯರ ಸುರಕ್ಷತೆ ಮತ್ತು ಸೈಬರ್ ಭದ್ರತೆಯ ಬಗ್ಗೆ ಅಧಿಕಾರಿಗಳು ನಿವಾಸಿಗಳಿಗೆ ಮಾಹಿತಿ ನೀಡುತ್ತಾರೆ.

ನಾಗರಿಕರು ತಮ್ಮ ಪ್ರತಿಕ್ರಿಯೆಗಳು, ದೂರುಗಳು ಅಥವಾ ಮಾಹಿತಿಗಳನ್ನು ಭೇಟಿ ನೀಡುವ ಅಧಿಕಾರಿಗಳೊಂದಿಗೆ ನೇರವಾಗಿ ಹಂಚಿಕೊಳ್ಳಬಹುದು.

ನೆರೆಹೊರೆ ಕಾವಲು:

ಸ್ಥಳೀಯ ಪೊಲೀಸರು ನೆರೆಹೊರೆಯ ಕಾವಲು ಗುಂಪುಗಳನ್ನು ರಚಿಸಲು ಮತ್ತು ಸಾಮೂಹಿಕ ಕ್ರಮಗಳನ್ನು ಬಲಪಡಿಸಲು ಸಹಾಯ ಮಾಡುತ್ತಾರೆ.

- ***ಪೊಲೀಸ್ ಪಡೆ ಮತ್ತು ನಿವಾಸಿಗಳ ನಡುವೆ ನೇರ ಸಂವಹನವನ್ನು ಉತ್ತೇಜಿಸುವುದು.**
- ***ಸ್ಥಳೀಯ ಸುರಕ್ಷತೆ ಮತ್ತು ಅಪರಾಧ ತಡೆಗಟ್ಟುವಿಕೆಯಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವುದು.**
- ***ಪೊಲೀಸ್ ಸಿಬ್ಬಂದಿಯ ಪಾರದರ್ಶಕತೆ ಮತ್ತು ಸ್ಪಂದನಾಶೀಲತೆಯನ್ನು ಹೆಚ್ಚಿಸುವುದು.**

# ಶಾಸಕರ ಗೈರು

ಸದನವನ್ನು ಮುಂದೂಡಿ ಎಂದು ಆಗ್ರಹಿಸಿದರು.

ಇದಕ್ಕೆ ಧ್ವನಿಗೂಡಿಸಿ ಬಿಜೆಪಿಯ ಸುರೇಶ್‌ಕುಮಾರ್, ಪ್ರಭು ಚೌಹ್ವಾಣ್, ಅರವಿಂದ್ ಬೆಲ್ಲದ ಅವರು ಸದನವನ್ನು ಮುಂದೂಡಿ ಎಂದು ಒತ್ತಾಯಿಸಿದರು. ಇದರಿಂದ ಸದನದಲ್ಲಿ ಸ್ವಲ್ಪ ಹೊತ್ತು ಕಾವೇರಿದ ವಾತಾವರಣ ರೂಪುಗೊಂಡಿತು.

ಸದನದಲ್ಲಿ ಹಾಜರಿದ್ದ ಸಚಿವ ಕೃಷ್ಣಬೈರೇಗೌಡ ಎದ್ದು ನಿಂತು, ಅಭಿನಂದನಾ ಪ್ರಸ್ತಾವವನ್ನು ಆರಂಭಿಸೋಣ ಎಲ್ಲ ಸಚಿವರು, ಶಾಸಕರು ಬರುತ್ತಾರೆ ಎಂದು ಹೇಳಿದರರದಾರೂ ಅದಕ್ಕೆ ಒಪ್ಪದ ಪ್ರತಿಪಕ್ಷ ನಾಯಕ ಆರ್. ಅಶೋಕ್, ನೀವು ಸದನವನ್ನು ಈ ರೀತಿ ಖಾಲಿ ಇಟ್ಟುಕೊಂಡು ಅಭಿನಂದನಾ ಪ್ರಸ್ತಾವ ಮಾಡುವುದಾಗ ನಾವು ಆಚೆ ಹೋಗುತ್ತೇವೆ. ನೀವು ಮಾಡಿಕೊಳ್ಳಿ. ಕೊನೆಪಕ್ಷ ಮುಖ್ಯಮಂತ್ರಿಗಳಾದರೂ ಸದನಕ್ಕೆ ಬರಲಿ. ಪೇಮೆಂಟ್ ಸಚಿವರುಗಳು ಬೇಕಾದರೆ ಆಚೆ ಇರಲಿ. ಸೂಕ್ಷ್ಮ ಇರುವ 7–8 ಸಚಿವರಾದರೂ ಬರಲಿ ಸದನವನ್ನು ಮುಂದೂಡಿ ಇಲ್ಲದಿದ್ದರೆ ನಾವೇ ಸಭಾತ್ಯಾಗ ಮಾಡುತ್ತೇವೆ ಎಂದು ಮತ್ತೆ ಹೇಳಿದರು.

ಇದಕ್ಕೆ ಧ್ವನಿಗೂಡಿಸಿದ ಸುರೇಶ್‌ಕುಮಾರ್, ನಿನ್ನೆ ರಾಷ್ಟ್ರಪತಿ ದ್ರೌಪತಿ ಮುರ್ಮು ಅವರಿಗೆ ನಟ ಅನಂತ್‌ನಾಗ್ ಅವರಿಗೆ ದಾದಾ ಸಾಬಾ ಪ್ರಶಸ್ತಿ ನೀಡುವಾಗ ಸದನ ಖಾಲಿ ಇದ್ದಿದ್ದರೆ ಪ್ರಶಸ್ತಿ ಪ್ರದಾನ ಮಾಡಿದ್ದು ಸರಿ ಹೋಗುತ್ತಿತ್ತೆ, ಅಲ್ಲಿ ಸಭಾಂಗಣ ತುಂಬಿ ತುಳುಕುತ್ತಿತ್ತು. ಇಲ್ಲಿ ಖಾಲಿ ಇದೆ. ಸದನ ಖಾಲಿ ಇದ್ದಾಗ ಅಭಿನಂದನಾ ಕಲಾಪ ಬೇಡ ಎಂದರು

ಈ ಹಂತದಲ್ಲಿ ಮಧ್ಯ ಪ್ರವೇಶಿಸಿ ಮಾತನಾಡಿದ ಕಾಂಗ್ರೆಸ್‌ನ ಕೋನರೆಡ್ಡಿ ಅವರು, ಪ್ರತಿಪಕ್ಷ ಸದಸ್ಯರು ಯಾವ ಸಚಿವರು ಯಾರಿಗೆ ಪೇಮೆಂಟ್ ಕೊಟ್ಟಿದ್ದಾರೆ ಹೇಳಲಿ. ನಿಮ್ಮ ಕಾಲದಲ್ಲೂ ಸಚಿವರು ಪೇಮೆಂಟ್ ಕೊಟ್ಟು ಸಚಿವರಾಗಿದ್ದರಾ ಎಂದು ಪ್ರಶ್ನಿಸಿದರು.

ಕೋನರೆಡ್ಡಿ ಅವರ ಬೆಂಬಲಕ್ಕೆ ನಿಂತು ಮಾತನಾಡಿದ ಷಡಕ್ಷರಿ ಅವರು, ಪ್ರತಿಪಕ್ಷ ನಾಯಕರು ಪೇಮೆಂಟ್ ಸಚಿವರೆಂದು ಮಾತನಾಡುವುದು ಸರಿಯಲ್ಲ ಎಂದು ತಗಾದೆ ತೆಗೆದರಾದರೂ ಅದಕ್ಕೆ ಪ್ರತಿಪಕ್ಷಗಳು ಕಿವಿಗೊಡದೆ ಸದನವನ್ನು ಮುಂದೂಡಿ ಎಂಬ ಪಟ್ಟ ಮುಂದುವರೆಸಿದರು. ಆಗ ಸಭಾಧ್ಯಕ್ಷರು ಸದನವನ್ನು 10 ನಿಮಿಷಗಳ ಕಾಲ ಮುಂದೂಡಿ ಎಲ್ಲ ಚರ್ಚೆಗಳಿಗೂ ತೆರೆ ಎಳೆದರು.

# ಕೈ ಶಾಸಕನ ರಾಜೀನಾಮೆ

ಸೌಮ್ಯಸ್ವಭಾವದವರಿಗೆ ಯಾವುದೇ ಕೆಲಸಗಳಿಗೆ ಮನ್ನಣೆ ದೊರೆಯುತ್ತಿಲ್ಲ. ಆದ ಕಾರಣ ನನ್ನ ಕ್ಷೇತ್ರದ ಆಶಯ, ಆಶೋತ್ತರಗಳಿಗೆ ಸ್ಪಂದಿಸಲು ಸಾಧ್ಯವಾಗದ ಕಾರಣ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ ಎಂದು ಅವರು ರಾಜೀನಾಮೆ ಪತ್ರದಲ್ಲಿ ತಿಳಿಸಿದ್ದಾರೆ.

ಇಲ್ಲವೋ ಅದನ್ನು ಹೇಳಿ ಎಂದು ಸಭಾಧ್ಯಕ್ಷರಲ್ಲಿ ಮನವಿ ಮಾಡಿದರು.

ಒಂದು ಕಡೆ ಸರ್ಕಾರ ಪಾಪರ್ ಎಂದು ಹಣಕಾಸು ಇಲಾಖೆ ಹೇಳುತ್ತಿದೆ. ಇನ್ನೊಂದು ಕಡೆ ಬರ ನಿರ್ವಹಣೆ ಮಾಡುತ್ತಿಲ್ಲ ಎಂದು ಆರ್. ಅಶೋಕ್ ದೂರಿದರು.

ಈ ಹಂತದಲ್ಲಿ ಮತ್ತೆ ಸದನದಲ್ಲಿ ಪ್ರತಿಪಕ್ಷ ಮತ್ತು ಆಡಳಿತ ಪಕ್ಷದ ಸದಸ್ಯರ ನಡುವೆ ಮಾತಿನ ವಾಕ್ಸಮರ ನಡೆದು ಗದ್ದಲದ ಪರಿಸ್ಥಿತಿ ರೂಪುಗೊಂಡಿತು.

ಸಭಾಧ್ಯಕ್ಷ ಜಿ.ಎಸ್. ಪಾಟೀಲ್ ಅವರು, ಉಪಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ. ಈ ರೀತಿ ಮಧ್ಯೆ ಮಧ್ಯೆ ಮಾತನಾಡುವುದು ಸರಿಯಲ್ಲ ಎಂದು ಹೇಳಿದರಾದರೂ ಸದಸ್ಯರುಗಳ ನಡುವೆ ಮಾತಿನ ಚಕಮಕಿ ಮುಂದುವರೆದೇ ಇತ್ತು.

ಶಾಸಕರಾದ ಯಶವಂತರಾಯಗೌಡ ಪಾಟೀಲ್ ಅವರು ವಿಧಾನಸಭಾಧ್ಯಕ್ಷರಿಗೆ ರಾಜೀನಾಮೆ ಸಲ್ಲಿಸಿದ್ದು, ಅದು ಇನ್ನು ಅಂಗೀಕಾರವಾಗಿಲ್ಲ.

# ಆಡಳಿತ ವಿಪಕ್ಷ ಜಟಾಪಟಿ

ತಾಂಡ ವಾಡುತ್ತಿರುವಾಗ ಮುಖ್ಯಮಂತ್ರಿ ಡಿಕೆ ಶಿವಕುಮಾರ್ 12 ಲಕ್ಷ ಮೌಲ್ಯದ ಶಾಲು ಧರಿಸುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ವೇಳೆ ಆಡಳಿತ ಪಕ್ಷ ಹಾಗೂ ವಿಪಕ್ಷ ಸದಸ್ಯರ ನಡುವೆ ವಾಗ್ವಾದ ತೀವ್ರಗೊಂಡು, ಆಡಳಿತ ಪಕ್ಷದ ಸದಸ್ಯರು ಪ್ರಧಾನಿ ನರೇಂದ್ರ ಮೋದಿ 12 ಲಕ್ಷ ಮೌಲ್ಯದ ಚಿನ್ನದ ಎಳೆಯ ಬಟ್ಟೆ ಧರಿಸುತ್ತಿದ್ದಾರೆ ಎಂದಾಗ ಕೈಕೈ ಮಿಲಾಯಿಸುವ ಹಂತಕ್ಕೂ ತಲುಪಿತು. ಸರ್ಕಾರದ ವಿರುದ್ಧ ವಿಪಕ್ಷ ಸದಸ್ಯರು ಘೋಷಣೆ ಕೂಗಿದರೆ, ಮುಖ್ಯಮಂತ್ರಿ ಅವರನ್ನು ಅವಹೇಳನ ಮಾಡಲಾಗಿದೆ ಎಂದು ಆಡಳಿತ ಪಕ್ಷದ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು. ಪರಿಸ್ಥಿತಿ ನಿಯಂತ್ರಿಸಲು ಸಭಾಪತಿ ಸದನವನ್ನು 10 ನಿಮಿಷ ಮುಂದೂಡಿದರು.

ಕಲಾಪ ಮತ್ತೆ ಆರಂಭವಾದ ಬಳಿಕ ಬಿಜೆಪಿ ಸದಸ್ಯ ನವೀನ್ ಅವರು ಮುಖ್ಯಮಂತ್ರಿ ಅವರ ಯೋಗ್ಯತೆ ಕುರಿತು ಮಾತನಾಡಿದ್ದಕ್ಕೆ ಕಾಂಗ್ರೆಸ್ ಸದಸ್ಯರು ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿದರು. ಪ್ರತಿಭಟನೆ ಕೈಬಿಡುವಂತೆ ಜೆಡಿಎಸ್ ಸದಸ್ಯ ಭೋಜೇಗೌಡ ಹಾಡಿನ ಮೂಲಕ ಮನವಿ ಮಾಡಿದರು.

ಬಳಿಕ ಮುಖ್ಯಮಂತ್ರಿ ಕುರಿತು ತಾವು ನೀಡಿದ್ದ ಹೇಳಿಕೆಯನ್ನು ನವೀನ್ ಹಿಂಪಡೆದರು. “ನನ್ನ ಮಾತಿನಿಂದ ಮುಖ್ಯಮಂತ್ರಿ ಸೇರಿದಂತೆ ಯಾರಿಗಾದರೂ ನೋವಾಗಿದ್ದರೆ ಆ ಮಾತನ್ನು ಹಿಂಪಡೆಯುತ್ತೇನೆ” ಎಂದು ಸ್ಪಷ್ಟಪಡಿಸಿದರು. ಇದಾದ ಬಳಿಕ ಕಾಂಗ್ರೆಸ್ ಸದಸ್ಯರು ಪ್ರತಿಭಟನೆ ಕೈಬಿಟ್ಟರು.

**ರೈತರ ಪರ ಸಾಂಕೇತಿಕ ಕ್ರಮ:**

ಬಳಿಕ ಮಾತನಾಡಿದ ನವೀನ್, “ನಾನು ವೈಯಕ್ತಿಕವಾಗಿ ಯಾರ ಬಗ್ಗೆಯೂ ಮಾತನಾಡಿಲ್ಲ. ರೈತರ ಸಮಸ್ಯೆಗಳ ಚರ್ಚೆಗೆ ಕರೆದ ಅಧಿವೇಶನ ಇದಾಗಿದ್ದು, ಅದಕ್ಕಾಗಿ ಸಾಂಕೇತಿಕವಾಗಿ ಹಸಿರು ಶಾಲು ಧರಿಸಿದ್ದೆ. ಆರಂಭದಲ್ಲಿ ಇದನ್ನು ಲಘುವಾಗಿಯೇ ತೆ–ಗೆದುಕೊಂಡಿದ್ದೆ. ಆದರೆ ನನ್ನ ನಿಲುವನ್ನು ಪ್ರಚಾರದ ವಿಷಯ ಎಂದು ಹೇಳಿದ್ದರಿಂದ ಬೇಸರವಾಗಿ ಆಕ್ರೋಶ ಹೊರಹಾಕಿದೆ” ಎಂದು ಹೇಳಿದರು.

ಮುಂದುವರಿದು, “ನನ್ನ ಮಾತಿನಿಂದ ಸಿಎಂ ಸೇರಿದಂತೆ ಯಾರಿಗೇ ನೋವಾಗಿದ್ದರೂ ಆ ಮಾತನ್ನು ಹಿಂಪಡೆಯುತ್ತೇನೆ” ಎಂದು ಹೇಳಿ, ಬಳಿಕ ಬರ ಪರಿಸ್ಥಿತಿ ಕುರಿತು ಚರ್ಚೆ ಆರಂಭಿಸಿದರು.

ಕಾಂಗ್ರೆಸ್ ಸದಸ್ಯ ರವಿ ಮಾತನಾಡಿ, “ನಾನು ಸಾಂದರ್ಭಿಕವಾಗಿ ಮಾತನಾಡಿದ್ದೆ. ನವೀನ್ ನನ್ನ ವೈರಿಯಲ್ಲ. ನಮ್ಮ ಕಾಂಗ್ರೆಸ್‌ನಿಂದ ಹೋಗಿದ್ದವರು ಅವರು. ನಾನು ವಿಚಾರಾಧಾರಿತವಾಗಿಯೇ ಶಾಲಿನ ಬಗ್ಗೆ ಮಾತನಾಡಿದ್ದೆ. ಸದನದಲ್ಲಿ ಲಘು ಹಾಸ್ಯ, ಕುಹಕ, ಛೇಡಿಸುವಿಕೆ ಇರಬೇಕು. ನಾನು ಆ ದೃಷ್ಟಿಯಿಂದ ಮಾತನಾಡಿದ್ದೆ” ಎಂದು ಸ್ಪಷ್ಟಪಡಿಸಿದರು.

ವೇಷಭೂಷಣದಲ್ಲಿ ನಾವೆಲ್ಲರೂ ವಿಭಿನ್ನವಾಗಿದ್ದೇವೆ. ಅದು ಅವರ ಆಯ್ಕೆ. ಆದರೆ ರೈತರ ಕಾಳಜಿ ಬಗ್ಗೆ ನವೀನ್ ಮಾತನಾಡಿದ ರೀತಿಗೆ ನಮ್ಮ ಆಕ್ಷೇಪವಿದೆ. ಮುಖ್ಯಮಂತ್ರಿಯವರ ಯೋಗ್ಯತೆ ಬಗ್ಗೆ ಮಾತನಾಡಿದಾಗ ಅದನ್ನು ಹೇಗೆ ಸಹಿಸಿಕೊಳ್ಳಲು ಸಾಧ್ಯ?” ಎಂದು ರವಿ ಹೇಳಿದರು.

ಬಿಜೆಪಿ ಸದಸ್ಯ ನವೀನ್ ಅವರು ಸಿಎಂ ಕುರಿತ ಹೇಳಿಕೆ ಹಿಂಪಡೆದ ಬಳಿಕ ಶಾಲು ವಿಚಾರದ ಜಟಾಪಟಿಗೆ ಸಭಾಪತಿ ಸುಖಾಂತ್ಯ ಹಾಡಿದರು.

# ಕೆಪಿಎಸ್‌ಸಿ ನೇಮಕಾತಿ ಅಕ್ರಮ

ತಾಂತ್ರಿಕ ಸಾಕ್ಷ್ಯಗಳು ಹಾಗೂ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಲಾಗಿದೆ ಎಂದು ಸರ್ಕಾರ ಹೇಳಿದೆ.

ಈ ಹಂತದಲ್ಲಿ ಹೊಸದಾಗಿ ಎಸ್‌ಐಟಿ ರಚಿಸುವ ಅಗತ್ಯವೇನು ಎಂಬುದನ್ನು ಸರ್ಕಾರ ಪ್ರಶ್ನಿಸಿದೆ. ಅಲ್ಲದೆ, ನಿರ್ದಿಷ್ಟ ಅಧಿಕಾರಿಗಳನ್ನೇ ತನಿಖಾ ತಂಡಕ್ಕೆ ನೇಮಿಸುವಂತೆ ನ್ಯಾಯಾಲಯ ನಿರ್ದೇಶಿಸಿರುವುದಕ್ಕೂ ಆಕ್ಷೇಪ ವ್ಯಕ್ತಪಡಿಸಿದೆ.

ಎಸ್‌ಐಟಿ ರಚನೆ ಕುರಿತು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೂಡ ಪ್ರತಿಕ್ರಿಯಿಸಿದ್ದು, ಅಧಿಕಾರಿಗಳು ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಹೇಳಿದ್ದಾರೆ.

ಎಸ್‌ಐಟಿ ರಚನೆಗೆ ಸರ್ಕಾರದ ವಿರೋಧವಿಲ್ಲ. ಆದರೆ, ನಿರ್ದಿಷ್ಟ ಅಧಿಕಾರಿಗಳನ್ನೇ ನೇಮಿಸುವಂತೆ ಸೂಚಿಸುವುದು ಸರಿಯಾದ ಸಂದೇಶ ನೀಡುವುದಿಲ್ಲ ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದ್ದಾರೆ.

ಹೈಕೋರ್ಟ್ ನಿರ್ದೇಶನವು ಕೇವಲ ಪಶುವೈದ್ಯಾಧಿಕಾರಿ ನೇಮಕಾತಿ ಅಕ್ರಮಕ್ಕೆ ಸೀಮಿತವಾಗಿಲ್ಲ. ಜ್ಞಾನೇಂದ್ರ ಕುಮಾರ್ ಅವರು ಕೆಪಿಎಸ್‌ಸಿಯಲ್ಲಿ ಕಂಟ್ರೋಲರ್ ಆಗಿದ್ದ ಅವಧಿಯಲ್ಲಿ ನಡೆದ ಕೆಪಿಎಸ್‌ಸಿ, ಕೆಎಎಸ್, ಎಇ ಸೇರಿದಂತೆ ವಿವಿಧ ನೇಮಕಾತಿ ಪರೀಕ್ಷೆಗಳಲ್ಲಿನ ಅಕ್ರಮಗಳ ಬಗ್ಗೆಯೂ ತನಿಖೆ ನಡೆಸುವಂತೆ ಸೂಚಿಸಲಾಗಿದೆ.

ಕಳೆದ ಮೂರ್ನಾಲ್ಕು ವರ್ಷಗಳಲ್ಲಿ ನಡೆದ ಹಲವು ನೇಮಕಾತಿ ಪ್ರಕ್ರಿಯೆಗಳು ತನಿಖೆಯ ವ್ಯಾಪ್ತಿಗೆ ಬರುವ ಸಾಧ್ಯತೆ ಇದೆ. ಹೀಗಾಗಿ ಪ್ರಕರಣದ ತನಿಖೆ ವಿಸ್ತರಣೆಯಾಗುವ ಸಾಧ್ಯತೆಯೂ ಇದೆ.

**ಒದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ–ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**PUBLIC NOTICE**

It is brought to the notice of the general public that my clients Sri Shashidhara Shivashankar Yalagach and Smt. Srishti Bhangarshettar, R/at Flat No. 201, Oak Ville Apartments, 22nd Main, 16th Cross, 5th Phase J.P. Nagar Bangalore -78, intends to jointly purchase the Schedule Property from Sri Shravan Gupta, S/o Sri R.A. Nagaraj Gupta, R/at No. 10, 1st cross, South End Road, Basavanagudi, Bengaluru -560004, who represents that he is the sole and absolute owner in peaceful possession and enjoyment of the Schedule Property and that the Schedule Property is free from all kinds of encumbrances whatsoever and that there are no third party claims or rights on the Schedule Property.

Any person/s having any claim/s over the Schedule Property or having any objection/s about the above mentioned transaction may write to the undersigned within 15 (Fifteen) days from the date of publication of this notice along with documentary evidence, on which they are basing their claim, failing which my client will proceed on the basis that there are no claim/s, objection/s of whatsoever nature.

**SCHEDULE A PROPERTY**

All that piece and parcel of Immovable building bearing No. 20/4, Later No. 48/A, Corporation No. 48/4 situated at J.C. Road, Bengaluru, Building Known as Gopal Building, measuring East to West 40-0 ft and North to South 22-0 ft, with First floor having RCC roofing, Red-oxide Flooring, windows made of Steel and wood, building constructed the in the year 1964 with all amenities, presently coming within the jurisdiction of the Bengaluru Central City Corporation Bengaluru, together with all appurtenances whatsoever, whether situated on, below or above the surface, and bounded on the:

**East by** : J.C. Road
**West by** : Remaining portion of Same Property
**North by** : Property of Dr. K.V. Subbarajau
**South by** : Remaining Portion of Property No. 20/4, Then 48/4, New No. 48/A

**SCHEDULE B PROPERTY**

An undivided share of the land conveyed in this document for each floor measures **293 Sqft or 27.2 Sqmts** out of entire land mentioned in the SCHEDULE A PROPERTY.

**SCHEDULE C PROPERTY**

**Item No. 1:-** All that piece and parcel of immovable commercial property bearing No. **48/6,** (old No. 20/4 then 48/A) First Floor, situated at Gopal Building, J.C. Road, Near Mayuri Hotel Bengaluru -02, **E-PID No. 1995638267,** Flat/Shop constructed on the SCHEDULE A PROPERTY with a super built up area 760 Sqft or 70.6 Sqmts having R.C.C. Roofing, Cement Flooring, and Steel door & Windows, along with electricity, water and sanitary connection, together with all appurtenances whether situated on below or above the surface.

**Item No. 2:-** All that piece and parcel of immovable commercial property bearing No. **48/4,** (old No. 20/4 then 48/A) Second Floor, situated at Gopal Building, J.C. Road, Near Mayuri Hotel Bengaluru -02, **E-PID No. 2875375382,** Flat/Shop constructed on the SCHEDULE A PROPERTY with a super built up area **760 Sqft** or 70.6 Sqmts having R.C.C. Roofing, Cement Flooring, and Steel door & Windows, along with electricity, water and sanitary connection, together with all appurtenances whether situated on below or above the surface.

**M. MUNEGOWDA**
Advocate & Consultant
No. 64/1, S.M. Plaza, 2nd Floor, Dr. D.V.G. Road, Basavanagudi, Bangalore -04:
M: 9342878205 Dated: 23/09/2026

**CHANGE OF NAME**

I, **SHOBHANA V D/o VASU A,** R/o at Site No.39, MSP Green Woods, Kadaagrahara Village, Bidarahalli Hobli, Virgonagar Post, Bangalore - 560049, Karnataka, declare that name of mine has been wrongly written as **A.SOABANA, SHOBANA V, SHOBHANA A** and that name of my father has been wrongly written as **A.ARUMUGAM, ARUMUGAM A, ARUMUGAM** in my identity, educational and legal documents. All variations refer to one and the same person which is myself and my father respectively, that the actual name of my father is VASU A and further I have changed my name to **SHOBHANA SHRII,** vide affidavit dated 18-08-2026 sworn before Notary, **K.B.Sadha Shivappa ,** Bangalore.

**IN THE COURT OF THE CIVIL JUDGE (SENIOR DIVISION): PUTTUR, A.P**
**O.S.No: 107/2012**

Between:
M.Ramakrishna Reddy (Died) and others ....Petitioners/plaintiffs
And:
K.Munirathnam (died) and others ....Respondents/defendants

**SUMMONS TO THE DEFENDANT NO: 20**

To
**K.Gopi Krishna,**
S/o late K.Eswara Chetty,
Residing at, Door No: 65/56,
7th Main, Devasandra,
Near Raja Rajeswari Temple,
K.R. Puram, Bangalore North,
Bangalore Karnataka-560036,

Please take summons that the plaintiffs have filed above petition against you and others before the Hon'ble Civil Judge (Senior Division): puttur and the same is posted to **29-09-2026** for your appearance. Hence you are directed to appear before the afore said court on: **29-09-2026** at about **10.30 A.M**. and file your objections if any through advocate (or) in person otherwise the matter will be decided exparte.

**By order**

Sd/- **G.PAYANI,** B.A. B.L.,
Advocate for the Plaintiffs.
Puttur,A.P

ನೋಂದಣಿ ಸಂಖ್ಯೆ: ಎ.ಆರ್.ಬಿ. 45/ನೋಂದಣಿ 14/2008–2009. ದೂರವಾಣಿ : 8453651140

**ಮಠದಹಳ್ಳಿ ಮಹಿಳಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್**
**MATADAHALLI MAHILA CREDIT CO-OPERATIVE SOCIETY LTD**
ನಂ. 12/1, 3ನೇ ಅಡ್ಡರಸ್ತೆ, ನ್ಯೂ ಮಾರ್ಡನ್ ಸ್ಕೂಲ್ ಹತ್ತಿರ, ಮಠದಹಳ್ಳಿ, ಬೆಂಗಳೂರು– 560 032.

**18ನೇ ವರ್ಷದ ವಾರ್ಷಿಕ ಸರ್ವ ಸದಸ್ಯರ ಸಭೆ**

ಮೇಲ್ಕಂಡ ಸಂಘವು ದಿನಾಂಕ: 25.09.2026 ರಂದು ಶುಕ್ರವಾರ ಬೆಳಿಗ್ಗೆ 10.30ಕ್ಕೆ ಕಚೇರಿಯ ಆವರಣದ ಮುಂಭಾಗದಲ್ಲಿ ಸಭೆಯನ್ನು ನೆರವೇರಿಸಲು ಸಂಘದ ಪದಾಧಿಕಾರಿಗಳು ಒಪ್ಪಿರುತ್ತಾರೆ. ಈಗಾಗಲೇ ಸದಸ್ಯರ ವಿಳಾಸಗಳಿಗೆ ಸೂಚನಾ ಪತ್ರವನ್ನು ಅಂಚೆಯ ಮೂಲಕ ಕಳುಹಿಸಲಾಗಿದೆ. ಒಂದು ವೇಳೆ ತಲುಪದಿದ್ದಲ್ಲಿ ಇದೇ ಸೂಚನಾ ಪತ್ರವೆಂದು ಪರಿಗಣಿಸಿ ತಪ್ಪದೇ ಸರ್ವ ಸದಸ್ಯರ ಸಭೆಗೆ ಹಾಜರಾಗಬೇಕೆಂದು ಈ ಮೂಲಕ ಕೋರಲಾಗಿದೆ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ದಿನಾಂಕ: 17.9.2026 ಸಹಿ/– ಹೆಚ್. ಶೈಲಜಾ
ಸ್ಥಳ: ಬೆಂಗಳೂರು. ಕಾರ್ಯದರ್ಶಿ.

**ಕರ್ನಾಟಕ ವೃತ್ತ ಅಂಚೆ ಮತ್ತು ಇತರ ಕೇಂದ್ರ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ.**
192/1, 1ನೇ ಮಹಡಿ, ದೊಮ್ಮಲೂರು, ಹಳೆಯ ವಿಮಾನ ನಿಲ್ದಾಣ ರಸ್ತೆ, ಬೆಂಗಳೂರು–560071.

**15ನೇ ಸಾಮಾನ್ಯ ಸಭೆಯ ಸೂಚನೆಯ ಪತ್ರಿಕಾ ಪ್ರಕಟಣೆ**

ನಮ್ಮ ಸಂಘದ 2025–26ನೇ ಸಾಲಿನ 15ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ:24–09–2026ನೇ ಗುರುವಾರ, ಸಂಜೆ–5:00 ಘಂಟೆಯಿಂದ ಇಂದಿರಾನಗರ ಕ್ಲಬ್, 9ನೇ ಮುಖ್ಯ ರಸ್ತೆ, 4ನೇ ಅಡ್ಡ ರಸ್ತೆ HAL ಎರಡನೇ ಹಂತ ಇಂದಿರಾನಗರ, ಬೆಂಗಳೂರು–560008. ಇಲ್ಲಿ ಸಂಘದ ಅಧ್ಯಕ್ಷರಾದ **ಶ್ರೀ ಜಿ.ಜಾನಕಿರಾಮ್**‌ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ಆಯೋಜಿಸಲಾಗಿದೆ.

ಮಾನ್ಯ ಸದಸ್ಯರ ವಿಳಾಸಕ್ಕೆ ನೋಟೀಸ್‌ನ್ನು ಅಂಚೆ ಮೂಲಕ ಜಾರಿಗೊಳಿಸಲಾಗಿದೆ. ಒಂದು ವೇಳೆ ಸೂಚನಾ ಪತ್ರ ನಿಗಧಿತ ಅವಧಿಯಲ್ಲಿ ತಲುಪದೇ ಇದ್ದಲ್ಲಿ ಇದನ್ನೇ ಸೂಚನಾ ಪತ್ರವೆಂದು ಪರಿಗಣಿಸಿ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಕೋರಲಾಗಿದೆ.

ಆಡಳಿತ ಮಂಡಳಿ ಪರವಾಗಿ
ಸಹಿ/– (ಯುವನೇಶ್ ಬಿ.ಎನ್.)
ದಿನಾಂಕ:23–09–2026 ಪ್ರಭಾರ ಕಾರ್ಯದರ್ಶಿ

**ಸಂಜೆವಾಣಿ ಶಾಪರ್ ಗೈಡ್**
**SANJEVANI SHOPPER GUIDE**
For Details Contact
Mo: 9449871825
Ph: 22868882 22866213

**ಬೇಕಾಗಿದ್ದಾರೆ**
**ಮೈಸೂರಿನಲ್ಲಿ ಟ್ಯಾಂಕ್ ಸಂಪ್ ಕ್ಲೀನಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಊಟ ವಸತಿ ವ್ಯವಸ್ಥೆ ಇದೆ.**
**M : 9743409275**

**ಅತಿ ಕಡಿಮೆ ದರದಲ್ಲಿ ಜಾಹೀರಾತು ನೀಡಿ**
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:
ಮ್ಯಾನೇಜರ್
ಜಾಹೀರಾತು ವಿಭಾಗ
ಸಂಜೆವಾಣಿ
ಫೋನ್:
22868882, 22866213

Sanjevani - Printed and Published by B.T.Amuthan on behalf of M/s Karnataka News Publications (P) Ltd. Printed at Dinasudar Printing Division, 11/2, Queen's Road, Bangalore, Karnataka - 560052.
Published at M/s Karnataka News Publications (P) Ltd. 11/2, Queen's Road, Bangalore, Karnataka - 560052. Editor: B.T. Amuthan. RNI No.36667/82

# ವೇಟ್‌ಲಿಫ್ಟಿಂಗ್‌ನಲ್ಲಿ ಮೀರಾಗೆ ಬೆಳ್ಳಿ

ಐಚಿ–ನಗೋಯಾ, ಸೆ.23 : ಭಾರತದ ತಾರಾ ವೇಟ್ ಲಿಫ್ಟರ್ ಮೀರಾಬಾಯಿ ಚಾನು ಅವರು ತಮ್ಮ ವೃತ್ತಿಜೀವನದ ಮೊದಲ ಏಷ್ಯನ್ ಗೇಮ್ಸ್ ಪದಕವನ್ನು ಗೆದ್ದ ಸಾಧನೆ ಮಾಡಿದ್ದಾರೆ. ಇದಕ್ಕೂ ಮುನ್ನ ಜಯ ಮೀನಾ ಸಾಫ್ಟ್ ಟೆನಿಸ್ ನಲ್ಲಿ ಐತಿಹಾಸಿಕ ಕಂಚಿನ ಪದಕ ಜಯಿಸಿದರು. ಇದರೊಂದಿಗೆ ಭಾರತದ ಸ್ಪರ್ಧೆಯ ನಾಲ್ಕನೇ ದಿನವೂ ಪದಕ ಬೇಟೆಯನ್ನು ಮುಂದುವರಿದಿದೆ. ಸದ್ಯ 1 ಚಿನ್ನ, 5 ಬೆಳ್ಳಿ 3 ಕಂಚು ಗೆದ್ದಿರುವ ಭಾರತ ಒಟ್ಟು 9 ಪದಕಗಳನ್ನು ತನ್ನದಾಗಿಸಿಕೊಂಡಿದೆ.

ಪದಕಗಳ 9 ಸಂಖ್ಯೆ ಕ್ಕೇರಿಕೆ




ಇಂದು ನಡೆದ ಮಹಿಳೆಯರ 49 ಕೆ.ಜಿ. ವಿಭಾಗದ ವೇಟ್‌ಲಿಫ್ಟಿಂಗ್ ಸ್ಪರ್ಧೆಯಲ್ಲಿ ಮೀರಾಬಾಯಿ ಚಾನು (ಸ್ನ್ಯಾಚ್ –87, ಜರ್ಕ್ –111 ಮತ್ತು ಒಟ್ಟು 198 ಕೆ.ಜಿ) ಬೆಳ್ಳಿ ಪದಕಕ್ಕೆ ಮುತ್ತಿಕ್ಕಿದರು. ಉತ್ತರ ಕೊರಿಯಾದ ರಿ ಸಾಂಗ್–ಗಮ್ ಚಿನ್ನದ ಪದಕ ಗೆದ್ದಿದ್ದು, ಏಷ್ಯನ್ ಗೇಮ್ಸ್ ನಲ್ಲಿ ಸತತ ಮೂರನೇ ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡಿದ್ದಾರೆ. ಗ್ಲಾಸ್ಗೊದಲ್ಲಿ ಇತ್ತೀಚೆಗೆ ನಡೆದ ಕಾಮನ್ ವೆಲ್ತ್ ಗೇಮ್ಸ್ ನಲ್ಲಿ ಬಂಗಾರ ಗೆದ್ದು ಹೊಸ ಭರವಸೆ ಮೂಡಿಸಿದ್ದ ಮೀರಾಬಾಯಿ, ಕೊನೆಗೂ ತಮ್ಮ ಮೊದಲ ಏಷ್ಯನ್ ಗೇಮ್ಸ್ ಪದಕ ಗೆದ್ದು ಐತಿಹಾಸಿಕ ಸಾಧನೆ ಮಾಡಿದರು.

ಕರ್ಣಂ ಮಲ್ಲೇಶ್ವರಿ ಅವರು ಭಾರತದ ಪರ ಏಷ್ಯನ್ ಗೇಮ್ಸ್ ನ ವೇಟ್‌ಲಿಫ್ಟಿಂಗ್‌ನಲ್ಲಿ ಕೊನೆಯ ಬಾರಿಗೆ ಪದಕ ಗೆದ್ದಿದ್ದರು. ಇದರೊಂದಿಗೆ 28 ವರ್ಷಗಳ ಸುದೀರ್ಘ ಕಾಯುವಿಕೆ ಕೊನೆಗೊಂಡಿತು. ಮಲ್ಲೇಶ್ವರಿ 1998ರ ಬ್ಯಾಂಕಾಕ್ ಏಷ್ಯನ್ ಗೇಮ್ಸ್ ನಲ್ಲಿ ಬೆಳ್ಳಿ ಪದಕ ಗೆದ್ದಿದ್ದರು.

ಇದೀಗ 28 ವರ್ಷಗಳ ಬಳಿಕ ಭಾರತ ಮತ್ತೆ ಈ ವಿಭಾಗದಲ್ಲಿ ಏಷ್ಯನ್ ಗೇಮ್ಸ್ ವೇದಿಕೆಯಲ್ಲಿ ಪದಕ ಲಭಿಸಿದೆ.

**ಸ್ಕೀಟ್‌ನಲ್ಲಿ ಧಿಲ್ಲೋನ್‌ಗೆ ನಾಲ್ಕನೇ ಸ್ಥಾನ:**

ಭಾರತದ ರೈಜಾ ಧಿಲ್ಲೋನ್ ಶೂಟಿಂಗ್ ಸ್ಕೀಟ್ ಸ್ಪರ್ಧೆಯಲ್ಲಿ ನಾಲ್ಕನೇ ಸ್ಥಾನಕ್ಕೆ ತೃಪ್ತಿಪಟ್ಟಿದ್ದಾರೆ. ಅಂತಿಮ ಸುತ್ತಿನ ಕೊನೆಯ ಸರಣಿಯಲ್ಲಿ ರೈಜಾ 4ರಲ್ಲಿ 3 ಗುರಿಗಳನ್ನು ಹೊಡೆದರು. ಇದರೊಂದಿಗೆ ವೈಯಕ್ತಿಕ ಸ್ಕೀಟ್ ಪದಕದ ಅವಕಾಶವನ್ನು ಕಳೆದುಕೊಂಡರು.

ಚೀನಾದ ಜಿಯಾಂಗ್ ಯಿಟಿಂಗ್ ಅಂತಿಮ ಸರಣಿಯಲ್ಲಿ 4ಕ್ಕೆ 4 ಗುರಿಗಳನ್ನು ಹೊಡೆದು ಮುನ್ನಡೆ ಸಾಧಿಸಿದರು. ಅಸೆಮ್ ಒರಿನ್ಬಾಯ್ ಮತ್ತು ಥಾಯ್ಲೆಂಡ್‌ನ ಇಸಾರಪಾ ಇಂಪ್ರಸೆರ್ಟ್ಸುಕ್ ಕೂಡ ರೈಜಾಗಿಂತ ಮುಂದಿದ್ದರು. ಆದರೆ ಸ್ಕೀಟ್‌ನಲ್ಲಿ ಭಾರತದ ಪದಕದ ಭರವಸೆ ಇನ್ನೂ ಜೀವಂತವಾಗಿದೆ. ಪುರುಷರ ವೈಯಕ್ತಿಕ ಸ್ಕೀಟ್ ಫೈನಲ್‌ನಲ್ಲಿ ಅನಂತ್‌ಜೀತ್ ಸಿಂಗ್ ನರುಕಾ ಮಧ್ಯಾಹ್ನ ಕಣಕ್ಕಿಳಿಯಲಿದ್ದಾರೆ.

**ಸೆಮಿಫೈನಲ್‌ನಲ್ಲಿ ಭಾರತ–ಚೀನಾ ಮುಖಾಮುಖಿ**

ಜಪಾನ್ ವಿರುದ್ಧ ನಿನ್ನೆ 3–0 ಅಂತರದ ಭರ್ಜರಿ ಗೆಲುವು ಸಾಧಿಸಿದ್ದ ಭಾರತದ ಬ್ಯಾಡ್ಮಿಂಟನ್ ತಂಡ ಇದೀಗ ಸೆಮಿಫೈನಲ್‌ನಲ್ಲಿ ಚೀನಾವನ್ನು ಎದುರಿಸಲಿದೆ.ಈ ಪಂದ್ಯವು 2022ರ ಏಷ್ಯನ್ ಗೇಮ್ಸ್ ಫೈನಲ್‌ನ ಪುನರಾವರ್ತನೆಯಾಗಿದೆ. ಹೀಗಾಗಿ ಭಾರತ ಮತ್ತು ಚೀನಾ ನಡುವಿನ ಈ ಸೆಮಿಫೈನಲ್ ಸಾಕಷ್ಟು ಕುತೂಹಲ ಮೂಡಿಸಿದೆ.

**ಜಯ್ ಮೀನಾ ಐತಿಹಾಸಿಕ ಕಂಚು**

ಪುರುಷರ ಸಿಂಗಲ್ಸ್ ಸಾಫ್ಟ್ ಟೆನಿಸ್‌ನಲ್ಲಿ ಭಾರತದ ಜಯ್ ಮೀನಾ ಅವರ ಐತಿಹಾಸಿಕ ಪಯಣ ಸೆಮಿಫೈನಲ್‌ನಲ್ಲಿ ಅಂತ್ಯಗೊಂಡಿದೆ. ಆದರೆ ಸೆಮಿಫೈನಲ್ ಸೋಲಿನ ನಡುವೆಯೂ ಅವರು ಭಾರತಕ್ಕೆ ಸಾಫ್ಟ್ ಟೆನಿಸ್‌ನಲ್ಲಿ ಏಷ್ಯನ್ ಗೇಮ್ಸ್ ನ ಮೊದಲ ಪದಕವನ್ನು ಖಚಿತಪಡಿಸಿದ್ದಾರೆ.

45 ನಿಮಿಷಗಳ ಕಾಲ ನಡೆದ ಸೆಮಿಫೈನಲ್‌ನಲ್ಲಿ ಮೀನಾ ಜಪಾನ್‌ನ ಟಕುಯಾ ಕುರೊಸಾಕಾ ವಿರುದ್ಧ 2–4 ಅಂತರದಲ್ಲಿ ಸೋಲನುಭವಿಸಿದರು. ಕುರೊಸಾಕಾ ಆರಂಭಿಕ ಮೂರು ಗೇಮ್‌ಗಳನ್ನು ಗೆದ್ದು ಪಂದ್ಯದ ಮೇಲೆ ಹಿಡಿತ ಸಾಧಿಸಿದ್ದರು. ಆದರೆ ಮೀನಾ ಸುಲಭವಾಗಿ ಶರಣಾಗಲಿಲ್ಲ. 0–3ರಿಂದ ಹಿನ್ನಡೆ ಅನುಭವಿಸಿದ ಬಳಿಕ ಭರ್ಜರಿ ಹೋರಾಟ ನಡೆಸಿದ ಅವರು ನಾಲ್ಕನೇ ಗೇಮ್ ಅನ್ನು 4–1ರಿಂದ ಗೆದ್ದರು. ಬಳಿಕ ಐದನೇ ಗೇಮ್ ಅನ್ನು 6–4ರಿಂದ ತಮ್ಮದಾಗಿಸಿಕೊಂಡು ಅಂತರವನ್ನು 2–3ಕ್ಕೆ ಇಳಿಸಿದರು.

ಆದರೆ ಆರನೇ ಗೇಮ್‌ನಲ್ಲಿ ಕುರೊಸಾಕಾ ತಮ್ಮ ಸ್ಥೈರ್ಯ ಕಾಪಾಡಿಕೊಂಡು 4–1ರಿಂದ ಗೆದ್ದು ಪಂದ್ಯವನ್ನು ಮುಕ್ತಾಯಗೊಳಿಸಿದರು.

ಪಂದ್ಯದ ಗೇಮ್‌ಗಳ ಸ್ಕೋರ್ 3–5, 1–4, 1–4, 4–1, 6–4, 1–4 ಆಗಿತ್ತು. ಸೆಮಿಫೈನಲ್‌ನಲ್ಲಿ ಸೋತರೂ ಜಯ್ ಮೀನಾ ಗೆದ್ದ ಕಂಚಿನ ಪದಕ ಭಾರತೀಯ ಸಾಫ್ಟ್ ಟೆನಿಸ್ ಇತಿಹಾಸದಲ್ಲಿ ಮಹತ್ವದ ಮೈಲಿಗಲ್ಲಾಗಿದೆ.

# ಪ್ರತಾಪ್ ಸಿಂಹ ವಿರುದ್ಧ ಮತ್ತೊಂದು ಎಫ್‌ಐಆರ್

ಮೈಸೂರು.ಸೆ.23– ಮಾಜಿ ಸಂಸದ ಪ್ರತಾಪ್ ಸಿಂಹ ವಿರುದ್ಧ ಟೀ. ನರಸೀಪುರ ಪೊಲೀಸ್ ಠಾಣೆಯಲ್ಲಿ ಮತ್ತೊಂದು ಎಫ್‌ಐಆರ್ ದಾಖಲಾಗಿದೆ.



ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಮಧು ನೀಡಿದ ದೂರಿನ ಆಧಾರದ ಮೇಲೆ ಪ್ರಕರಣ ದಾಖಲಿಸಲಾಗಿದೆ.

ಪೊಲೀಸ್ ಇನ್ಸ್‌ಪೆಕ್ಟರ್ ಧನಂಜಯ್ ಅವರನ್ನು ಜಾತಿ ಹೆಸರಿನಲ್ಲಿ ಬೆದರಿಕೆ ಹಾಕಿದ್ದು, ಜಾತಿಯ ಬಗ್ಗೆ ಅವಹೇಳನಕಾರಿ ಮಾತುಗಳನ್ನು ಆಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಈ ಹಿನ್ನೆಲೆಯಲ್ಲಿ ತಿ. ನರಸೀಪುರ ಪೊಲೀಸರು ಪ್ರತಾಪ್ ಸಿಂಹ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಕಲಂ 352 ಮತ್ತು 356 ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆಯ ಕಲಂ 3(1)(ಆರ್) ಮತ್ತು 3(1)(ಯು) ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಈ ಪ್ರಕರಣದ ಕುರಿತು ಪೊಲೀಸರು ತನಿಖೆ ಮುಂದುವರಿಸಿದ್ದಾರೆ.




# ಚಿನ್ನಸ್ವಾಮಿ ಕ್ರೀಡಾಂಗಣ ಸುರಕ್ಷತೆ ವರದಿ ನೀಡಲು ಜಿಬಿಎಗೆ ಕೆಎಸ್‌ಸಿಎ ಮನವಿ

ಬೆಂಗಳೂರು, ಸೆ.23–ಮುಂದಿನ ತಿಂಗಳು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಭಾರತ ಹಾಗೂ ವೆಸ್ಟ್ ಇಂಡೀಸ್ ನಡುವಿನ ಕ್ರಿಕೆಟ್ ಪಂದ್ಯಗಳ ಹಿನ್ನೆಲೆಯಲ್ಲಿ ಕ್ರೀಡಾಂಗಣದ ಗುಣಮಟ್ಟ, ಸುರಕ್ಷತೆ ಹಾಗೂ ನಿರ್ವಹಣೆ ಕುರಿತು ವರದಿ ನೀಡುವಂತೆ ಕೆಎಸ್‌ಸಿಎ ಅಧಿಕಾರಿಗಳು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರನ್ನು ಭೇಟಿ ಮಾಡಿ ಮನವಿ ಮಾಡಿದ್ದಾರೆ.



ಅಂತರರಾಷ್ಟ್ರೀಯ ಮಟ್ಟದ ಪಂದ್ಯಾವಳಿಗಳನ್ನು ಆಯೋಜಿಸಲು ಚಿನ್ನಸ್ವಾಮಿ ಕ್ರೀಡಾಂಗಣದ ಸಿದ್ಧತೆ, ಮೂಲಸೌಕರ್ಯ ಹಾಗೂ ಸುರಕ್ಷತಾ ಕ್ರಮಗಳ ಕುರಿತು ವರದಿ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಬಂದಿರುವ ಹಿನ್ನೆಲೆಯಲ್ಲಿ ಕೆಎಸ್‌ಸಿಎ ಈ ಮನವಿ ಮಾಡಿದೆ. ಇದರ ಭಾಗವಾಗಿ ಜಿಬಿಎ ಅಧಿಕಾರಿಗಳು ಕ್ರೀಡಾಂಗಣವನ್ನು ಮತ್ತೊಮ್ಮೆ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ಮುಂದಾಗಿದ್ದಾರೆ.

**ಆರ್‌ಸಿಬಿ ಸಂಭ್ರಮದ ಬಳಿಕ ಸುರಕ್ಷತೆಗೆ ಒತ್ತು**

ಎರಡು ವರ್ಷಗಳ ಹಿಂದೆ ಆರ್‌ಸಿಬಿ ತಂಡ ಕಪ್ ಗೆದ್ದ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಹೊರಭಾಗದಲ್ಲಿ ನಡೆದ ಸಂಭ್ರಮಾಚರಣೆ ವೇಳೆ ಕಾಲ್ತುಳಿತ ಸಂಭವಿಸಿ 11 ಮಂದಿ ಮೃತಪಟ್ಟಿದ್ದರು. ಈ ಘಟನೆಯ ಬಳಿಕ ಕ್ರೀಡಾಂಗಣದಲ್ಲಿ ನಡೆಯುವ ಪ್ರಮುಖ ಪಂದ್ಯಾವಳಿಗಳ ವೇಳೆ ಪ್ರೇಕ್ಷಕರ ಸುರಕ್ಷತೆ, ಪ್ರವೇಶ–ನಿರ್ಗಮನ ವ್ಯವಸ್ಥೆ ಹಾಗೂ ತುರ್ತು ಸೇವೆಗಳ ಸಂಚಾರಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ.

ಈ ಹಿನ್ನೆಲೆಯಲ್ಲಿ ಹಿಂದಿನ ಬಾರಿ ಪಂದ್ಯಾವಳಿಗಳಿಗೆ ಮುನ್ನ ನಗರ ಪೊಲೀಸ್ ಆಯುಕ್ತರು, ಜಿಬಿಎ ಮುಖ್ಯ ಆಯುಕ್ತರು ಹಾಗೂ ಗೃಹ ಇಲಾಖೆಯ ಅಧಿಕಾರಿಗಳು ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳ ತಂಡ ಕ್ರೀಡಾಂಗಣವನ್ನು ಪರಿಶೀಲಿಸಿತ್ತು. ಪರಿಶೀಲನೆಯ ವೇಳೆ ಹಲವು ಮೂಲಸೌಕರ್ಯ ಹಾಗೂ ಸುರಕ್ಷತಾ ನ್ಯೂನತೆಗಳನ್ನು ಗುರುತಿಸಿ, ಅವುಗಳನ್ನು ಸರಿಪಡಿಸುವಂತೆ ಸೂಚಿಸಲಾಗಿತ್ತು.

**ಬೃಹತ್ ಗೇಟ್,ಆಂಬ್ಯುಲೆನ್ಸ್ ಸಂಚಾರಕ್ಕೆ ಜಾಗ**

ಕ್ರೀಡಾಂಗಣದ ಒಳಗೆ ಮತ್ತು ಹೊರಗೆ ಪ್ರೇಕ್ಷಕರ ಸಂಚಾರ ಸುಗಮವಾಗುವಂತೆ ಬೃಹತ್ ಗಾತ್ರದ ಪ್ರವೇಶ–ನಿರ್ಗಮನ ದ್ವಾರಗಳನ್ನು ನಿರ್ಮಿಸುವುದು, ತುರ್ತು ಸಂದರ್ಭದಲ್ಲಿ ಆಂಬ್ಯುಲೆನ್ಸ್‌ಗಳು ವೇಗವಾಗಿ ಸಂಚರಿಸಲು ಕ್ರೀಡಾಂಗಣದ ಸುತ್ತ ಅಗತ್ಯ ಜಾಗ ಕಲ್ಪಿಸುವುದು ಸೇರಿದಂತೆ ಹಲವು ಕ್ರಮಗಳನ್ನು ಕೈಗೊಳ್ಳುವಂತೆ ಹಿಂದಿನ ಸಮಿತಿ ಸೂಚಿಸಿತ್ತು.

ಸಮಿತಿ ನೀಡಿದ್ದ ಸೂಚನೆಗಳಂತೆ ಕ್ರೀಡಾಂಗಣದ ಹಲವು ಭಾಗಗಳಲ್ಲಿ ಅಗತ್ಯ ಮಾರ್ಪಾಡು ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಎಂದು ಕೆಎಸ್‌ಸಿಎ ಆಡಳಿತ ಮಂಡಳಿ ಅಧಿಕಾರಿಗಳಿಗೆ ಮಾಹಿತಿ ನೀಡಿದೆ. ಈ ಹಿನ್ನೆಲೆಯಲ್ಲಿ ಪಂದ್ಯಾವಳಿಗಳಿಗೆ ಅನುಮತಿ ನೀಡುವಂತೆ ಮನವಿ ಸಲ್ಲಿಸಲಾಗಿದೆ.

**ಮತ್ತೊಮ್ಮೆ ಪರಿಶೀಲನೆ**

ಕೆಎಸ್‌ಸಿಎ ಮನವಿ ಹಿನ್ನೆಲೆಯಲ್ಲಿ ಜಿಬಿಎ ಮುಖ್ಯ ಆಯುಕ್ತರು ಕ್ರೀಡಾಂಗಣವನ್ನು ಪರಿಶೀಲಿಸಿ, ಅದರಲ್ಲಿರುವ ಮೂಲಸೌಕರ್ಯ, ಸುರಕ್ಷತಾ ವ್ಯವಸ್ಥೆ ಹಾಗೂ ಹಿಂದಿನ ಸೂಚನೆಗಳ ಅನುಷ್ಠಾನದ ಸ್ಥಿತಿಗತಿ ಕುರಿತು ವರದಿ ಸಿದ್ಧಪಡಿಸಲಿದ್ದಾರೆ. ಜಿಬಿಎ ಮುಖ್ಯ ಆಯುಕ್ತರು, ಕೇಂದ್ರ ನಗರಪಾಲಿಕೆ ಆಯುಕ್ತರು ಸೇರಿದಂತೆ ಹಿರಿಯ ಅಧಿಕಾರಿಗಳು ಕ್ರೀಡಾಂಗಣ ಪರಿಶೀಲನೆ ನಡೆಸಿದ್ದು, ಇಂದು ಅಥವಾ ನಾಳೆ ಸಂಜೆಯೊಳಗೆ ಪರಿಶೀಲನಾ ವರದಿಯನ್ನು ಗೃಹ ಇಲಾಖೆಗೆ ಸಲ್ಲಿಸುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಪಂದ್ಯಕ್ಕೆ ಸದ್ಯ ಅಡ್ಡಿಯಿಲ್ಲ?**

ಹಿಂದೆ ಸೂಚಿಸಲಾಗಿದ್ದ ಬಹುತೇಕ ನ್ಯೂನತೆಗಳನ್ನು ಸರಿಪಡಿಸಲಾಗಿದ್ದು, ಸದ್ಯ ಪಂದ್ಯಾವಳಿಗಳನ್ನು ಆಯೋಜಿಸಲು ಯಾವುದೇ ಪ್ರಮುಖ ಸಮಸ್ಯೆ ಇಲ್ಲ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಆದಾಗ್ಯೂ, ಅಂತಿಮವಾಗಿ ಸುರಕ್ಷತಾ ವ್ಯವಸ್ಥೆ ಹಾಗೂ ಮೂಲಸೌಕರ್ಯಗಳ ಪರಿಶೀಲನಾ ವರದಿ ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ.

ಭಾರತ–ವೆಸ್ಟ್ ಇಂಡೀಸ್ ಪಂದ್ಯಗಳ ಹಿನ್ನೆಲೆಯಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಸುರಕ್ಷತೆ ಮತ್ತು ನಿರ್ವಹಣೆಯ ಕುರಿತು ಜಿಬಿಎ ನೀಡಲಿರುವ ವರದಿ ಮಹತ್ವ ಪಡೆದು–ಕೊಂಡಿದೆ.

# ಡಿಸೆಂಬರ್‌ನಲ್ಲಿ ಮೋದಿ ಕೆನಡಾಗೆ ಭೇಟಿ

ನವದೆಹಲಿ, ಸೆ. 23– ಭಾರತ ಮತ್ತು ಕೆನಡಾ ನಡುವಿನ ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಡಿಸೆಂಬರ್‌ನಲ್ಲಿ ಕೆನಡಾಗೆ ಭೇಟಿ ನೀಡುವ ಸಾಧ್ಯತೆ ಇದೆ ಎಂದು ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ತಿಳಿಸಿದ್ದಾರೆ.



ನ್ಯೂಯಾರ್ಕ್‌ನಲ್ಲಿ ನಡೆಯುತ್ತಿರುವ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಹಿನ್ನೆಲೆಯಲ್ಲಿ ಮಾತನಾಡಿದ ಕಾರ್ನಿ, ಭಾರತ ಮತ್ತು ಕೆನಡಾ ನಡುವಿನ ಸಂಬಂಧವು "ಅತ್ಯಂತ ಮಹತ್ವದ್ದಾಗಿದೆ" ಎಂದು ಹೇಳಿದರು. ಎರಡೂ ದೇಶಗಳು ವರ್ಷದ ಅಂತ್ಯದೊಳಗೆ ವ್ಯಾಪಾರ ಒಪ್ಪಂದಕ್ಕೆ ಬರಲು ಪ್ರಯತ್ನಿಸುತ್ತಿವೆ ಎಂದು ಅವರು ತಿಳಿಸಿದರು.

"ಭಾರತದೊಂದಿಗೆ ನಡೆಯುತ್ತಿರುವ ವ್ಯಾಪಾರ ಮಾತುಕತೆಗಳಲ್ಲಿ ನಾವು ಉತ್ತಮ ಪ್ರಗತಿ ಸಾಧಿಸುತ್ತಿದ್ದೇವೆ. ಹಲವು ಹಂತಗಳಲ್ಲಿ ಭಾರತ–ಕೆನಡಾ ಸಂಬಂಧ ಅತ್ಯಂತ ಮಹತ್ವದ್ದಾಗಿದೆ. ಜನರ ನಡುವಿನ ಸಂಬಂಧ, ಭದ್ರತೆ, ವ್ಯಾಪಾರ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿಯೂ ಇದು ಮಹತ್ವ ಹೊಂದಿದೆ," ಎಂದು ಕಾರ್ನಿ ಹೇಳಿದ್ದಾರೆ.

"ಪ್ರಧಾನಿ ಮೋದಿ ಅವರು ಆ ಸಮಯದಲ್ಲಿ ಕೆನಡಾಗೆ ಭೇಟಿ ನೀಡಲಿದ್ದಾರೆ. ಅವರನ್ನು ಆತಿಥ್ಯ ವಹಿಸಲು ನಾನು ತುಂಬಾ ಎದುರು ನೋಡುತ್ತಿದ್ದೇನೆ," ಎಂದು ಅವರು ಹೇಳಿದರು.

ಈ ಬೆಳವಣಿಗೆಯ ಬೆನ್ನಲ್ಲೇ, ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಅವರು ಭಾರತ ಮತ್ತು ಕೆನಡಾ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದದ ಮಾತುಕತೆಗಳನ್ನು ತ್ವರಿತಗೊಳಿಸಲು ಒಪ್ಪಿಕೊಂಡಿವೆ ಎಂದು ತಿಳಿಸಿದ್ದಾರೆ. ಮುಂದಿನ ಸುತ್ತಿನ ಮಾತುಕತೆಗಳು ಅಕ್ಟೋಬರ್ 5ರಿಂದ ಆರಂಭವಾಗಲಿವೆ ಎಂದು ಅವರು ಹೇಳಿದ್ದಾರೆ.

ಕೆನಡಾದ ಅಂತಾರಾಷ್ಟ್ರೀಯ ವ್ಯಾಪಾರ ಸಚಿವ ಮನೀಂದರ್ ಸಿಧು ಅವರೊಂದಿಗೆ ಮುಂಬೈನಲ್ಲಿ ನಾಲ್ಕನೇ ಸುತ್ತಿನ ಮಾತುಕತೆ ಪೂರ್ಣಗೊಳಿಸಿದ ಬಳಿಕ ಗೋಯಲ್ ಈ ಮಾಹಿತಿ ನೀಡಿದರು.

ಭಾರತ ಮತ್ತು ಕೆನಡಾ ಒಂದು ದಶಕಕ್ಕೂ ಹೆಚ್ಚು ಕಾಲದಿಂದ ಸಮಗ್ರ ವ್ಯಾಪಾರ ಒಪ್ಪಂದದ ಕುರಿತು ಚರ್ಚೆ ನಡೆಸುತ್ತಿವೆ. 2022ರ ಮಾರ್ಚ್‌ನಲ್ಲಿ ಅಧಿಕೃತವಾಗಿ ಮಾತುಕತೆಗಳನ್ನು ಪುನರಾರಂಭಿಸಲಾಗಿತ್ತು. ಮಧ್ಯಂತರ ಹಂತವಾಗಿ ಅರ್ಲಿ ಪ್ರೋಗ್ರೆಸ್ ಟ್ರೇಡ್ ಅಗ್ರಿಮೆಂಟ್ ಕುರಿತಾಗಿಯೂ ಎರಡೂ ದೇಶಗಳು ಚರ್ಚೆ ನಡೆಸಿದ್ದವು.

2022ರಿಂದ 2023ರವರೆಗೆ ಒಟ್ಟು ಒಂಬತ್ತು ಸುತ್ತಿನ ಮಾತುಕತೆಗಳು ನಡೆದಿದ್ದವು. ಆದರೆ ಉಭಯ ದೇಶಗಳ ನಡುವಿನ ರಾಜತಾಂತ್ರಿಕ ಸಂಬಂಧಗಳಲ್ಲಿ ಉಂಟಾದ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ 2023ರ ಆಗಸ್ಟ್ ನಲ್ಲಿ ಮಾತುಕತೆಗಳು ಸ್ಥಗಿತಗೊಂಡಿದ್ದವು.

# ನಕಲಿ ಆರ್‌ಸಿ, ಎನ್‌ಒಸಿ ಬಳಸಿ ಕಾರು ಮಾರಾಟ ಮೂವರ ಸೆರೆ - 2 ಕೋಟಿ ಮೌಲ್ಯದ ವಾಹನ ಜಪ್ತಿ




ವಶಪಡಿಸಿಕೊಳ್ಳಲಾದ ಎರಡು ಕೋಟಿ ರೂ. ಮೌಲ್ಯದ ಕಾರುಗಳನ್ನು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್‌ಸಿಂಗ್ ಪರಿಶೀಲಿಸಿದರು.

ಬೆಂಗಳೂರು,ಸೆ.23– ಕಾರುಗಳ ಆರ್‌ಸಿ ಕಾರ್ಡ್, ಬ್ಯಾಂಕ್ ಎನ್‌ಒಸಿ ಹಾಗೂ ಸರ್ಕಾರಿ ಕಚೇರಿ ಮತ್ತು ಅಧಿಕಾರಿಗಳ ಸೀಲ್‌ಗಳನ್ನು ನಕಲಿ ಮಾಡಿ ಸಾರ್ವಜನಿಕರಿಗೆ ಕಾರುಗಳನ್ನು ಮಾರಾಟ ಮಾಡುತ್ತಿದ್ದ ಮೂವರು ಖದೀಮರನ್ನು ವಿಲ್ಸನ್ ಗಾರ್ಡನ್ ಪೊಲೀಸರು ಬಂಧಿಸಿ 2 ಕೋಟಿ ಮೌಲ್ಯದ ವಾಹನಗಳು ಜಪ್ತಿಮಾಡಿದ್ದಾರೆ.

ಕೆಂಗೇರಿಯ ಬಂಡೇಮಠದ ಸೋಮೇಶ್(46) ಜ್ಞಾನಭಾರತಿಯ ಉಲ್ಲಾಳ ಉಪನಗರದ ಸಂತೋಷ್ ಅಲಿಯಾಸ್ ಅಪ್ಪು(37) ಹಾಗೂ ಸೋಲದೇವನಹಳ್ಳಿಯ ಪ್ರಭಾಕರ್ (43)ಬಂಧಿತ ಆರೋಪಿಗಳಾಗಿದ್ದಾರೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಬಂಧಿತ ಆರೋಪಿಗಳಿಂದ 2 ಕೋಟಿ ಮೌಲ್ಯದ 10 ಕಾರುಗಳು ಹಾಗೂ ಸ್ಕೂಟರ್ ವಶಪಡಿಸಿಕೊಂಡು ಹೆಚ್ಚಿನ ತನಿಖೆಯನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು.

ವಿಲ್ಸನ್ ಗಾರ್ಡನ್ ಮೆಹಬೂಬ್ ಲೇಔಟ್‌ನ ಉಮರ್ ನಗರ ನೌಷಾದ್ ಖಾನ್ ಅವರು ಕಳೆದ ಸೆ.3ರಂದು ನೀಡಿದ ದೂರಿನಲ್ಲಿ ಪರಿಚಯದ ಕಾರು ಡೀಲರ್‌ವೊಬ್ಬರು ಟಯೋಟಾ ಫಾರ್ಚುನರ್ ಕಾರು ಇರುವುದಾಗಿ ತಿಳಿಸಿ, ಅದರ ಫೋಟೋಗಳನ್ನು ವಾಟ್ಸ್‌ಆಪ್‌ನಲ್ಲಿ ಕಳುಹಿಸಿ ಕಾರು ಖರೀದಿಗೆ ಮುಂಗಡವಾಗಿ 20 ಸಾವಿರವನ್ನು ಫೋನ್‌ಪೇ ಮೂಲಕ ಪಾವತಿಸಿದ ಬಳಿಕ, ವಿಲ್ಸನ್ ಗಾರ್ಡನ್ ಪಾರ್ಕ್ ಬಳಿ ಕಾರನ್ನು ತಂದು ತೋರಿಸಿ ಆರ್‌ಸಿ ಕಾರ್ಡ್ ಸಮೇತ ಹಸ್ತಾಂತರಿಸಿದ್ದರು. ಆದರೆ ಆರ್‌ಸಿ ಪರಿಶೀಲಿಸಿದಾಗ ಅದು ನಕಲಿ ಎಂಬುದು ಬೆಳಕಿಗೆ ಬಂದಿತ್ತು ತಿಳಿಸಿದ್ದರು.

ಪ್ರಕರಣದ ತನಿಖೆ ಕೈಗೊಂಡ ಪೊಲೀಸರು ಸೆ.14ರಂದು ಕಾರು ಡೀಲರ್‌ನ ಸಹಚರನೊಬ್ಬನನ್ನು ವಶಕ್ಕೆ ಪಡೆದು ನಡೆಸಿದ ವಿಚಾರಣೆ ವೇಳೆ ಆರೋಪಿಗಳು ನಕಲಿ ಆರ್‌ಸಿ ಕಾರ್ಡ್‌ಗಳು, ಬ್ಯಾಂಕ್ ಎನ್‌ಒಸಿಗಳು ಹಾಗೂ ಸರ್ಕಾರಿ ಕಚೇರಿ ಮತ್ತು ಅಧಿಕಾರಿಗಳ ಸೀಲ್‌ಗಳನ್ನು ಸಿದ್ಧಪಡಿಸಿ, ಅವುಗಳನ್ನು ಬಳಸಿ ಕಾರುಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದ ವಿಚಾರ ಬಯಲಾಗಿದೆ.

ಆರೋಪಿಯ ವಶದಿಂದ ನಕಲಿ ಆರ್‌ಸಿ ಕಾರ್ಡ್‌ಗಳು, ಕಾರ್ಡ್ ತಯಾರಿಸುವ ಯಂತ್ರ, ವಿವಿಧ ಸರ್ಕಾರಿ ಕಚೇರಿ ಮತ್ತು ಅಧಿಕಾರಿಗಳ ಸೀಲ್‌ಗಳು, ಸ್ಟಾಂಪ್ ಪೇಪರ್‌ಗಳು, ಕಂಪ್ಯೂಟರ್ ಹಾಗೂ ಪ್ರಿಂಟರ್‌ಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಬಳಿಕ ನ್ಯಾಯಾಲಯದ ಅನುಮತಿಯೊಂದಿಗೆ ಪೊಲೀಸ್ ಅಭಿರಕ್ಷೆಗೆ ಪಡೆದು ವಿಚಾರಣೆ ನಡೆಸಿದಾಗ, ಕಾರು ಡೀಲರ್ ಹಾಗೂ ಇತರ ಸಹಚರರ ಬಗ್ಗೆ ಮಾಹಿತಿ ದೊರೆತಿದೆ.

ಈ ಮಾಹಿತಿ ಆಧರಿಸಿ ಸೆ.21ರಂದು ಮತ್ತೋರ್ವ ಸಹಚರನನ್ನು ವಿಚಾರಣೆಗೊಳಪಡಿಸಲಾಗಿದ್ದು, ನಕಲಿ ಆರ್‌ಸಿ ಕಾರ್ಡ್‌ಗಳನ್ನು ಬಳಸಿ ವಂಚಿಸಿದ್ದ ಕಾರುಗಳನ್ನು ಮಾರಾಟ ಮಾಡಲು ಬಿಟಿಎಸ್ ರಸ್ತೆಯ ಖಾಲಿ ಜಾಗದಲ್ಲಿ ನಿಲ್ಲಿಸಿರುವುದಾಗಿ ಬಾಯ್ಬಿಟ್ಟಿದ್ದಾನೆ. ಪೊಲೀಸರು ಸ್ಥಳಕ್ಕೆ ತೆರಳಿ 9 ಕಾರುಗಳು, ಒಂದು ದ್ವಿಚಕ್ರ ವಾಹನ ಹಾಗೂ ನಕಲಿ ಆರ್‌ಸಿ ಕಾರ್ಡ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ದೂರುದಾರರ ಬಳಿಯಿದ್ದ ಟಯೋಟಾ ಫಾರ್ಚುನರ್ ಕಾರನ್ನೂ ಠಾಣೆಗೆ ತರಲಾಗಿದೆ.

ಇದಲ್ಲದೆ, ಸೆ.22ರಂದು ಡಬಲ್ ರೋಡ್ ಬಳಿ ಮತ್ತೋರ್ವ ಸಹಚರನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದ್ದು, ಪ್ರಕರಣದಲ್ಲಿ ಭಾಗಿಯಾಗಿರುವುದಾಗಿ ಆತ ಒಪ್ಪಿಕೊಂಡಿದ್ದಾನೆ ಎಂದು ತಿಳಿಸಿದರು.

ಪ್ರಕರಣದ ಪ್ರಮುಖ ಕಾರು ಡೀಲರ್ ಹಾಗೂ ಇತರ ಸಹಚರರು ತಲೆಮರೆಸಿಕೊಂಡಿದ್ದು, ಅವರ ಪತ್ತೆಗೆ ಪೊಲೀಸರು ಕಾರ್ಯಾಚರಣೆಯನ್ನು ತೀವ್ರಗೊಳಿಸಿದ್ದಾರೆ ಎಂದು ಹೇಳಿದರು.

ಈ ಕಾರ್ಯಾಚರಣೆಯನ್ನು ಕೇಂದ್ರ ವಿಭಾಗದ ಉಪ ಪೊಲೀಸ್ ಆಯುಕ್ತರಾದ ಅಕ್ಷಯ್ ಎಂ. ಹಾಕೆ ಎಸಿಪಿ ಸುದೀರ್ ಎಸ್. ಅವರ ಮಾರ್ಗದರ್ಶನದಲ್ಲಿ, ವಿಲ್ಸನ್ ಗಾರ್ಡನ್ ಪೊಲೀಸ್ ಇನ್ಸ್‌ಪೆಕ್ಟರ್ ಪ್ರಕಾಶ್ ಕೆ. ಹಾಗೂ ಸಿಬ್ಬಂದಿ ಕೈಗೊಂಡಿದ್ದರು ಎಂದು ತಿಳಿಸಿದರು.

## ಬೀದರ್‌ನಲ್ಲಿ ಸಿಡಿಲು ಬಡಿದು ರೈತ ಸಾವು

ಬೀದರ್.ಸೆ.23– ಚಿಟಗುಪ್ಪ ತಾಲೂಕಿನ ಉಡಮನಳ್ಳಿ ಗ್ರಾಮದಲ್ಲಿ ಸಿಡಿಲು ಬಡಿದು ರೈತರೊಬ್ಬರು ಮೃತಪಟ್ಟಿರುವ ದಾರುಣ ಘಟನೆ ನಡೆದಿದೆ.

ಉಡಮನಳ್ಳಿ ಗ್ರಾಮದ ನಿವಾಸಿ ಝುರಣಪ್ಪ ತಂದೆ ರೇವಣಪ್ಪ ಮೃತಪಟ್ಟ ರೈತ.ಜಮೀನಿನಲ್ಲಿ ಕೆಲಸ ಮುಗಿಸಿಕೊಂಡು ಮನೆಗೆ ವಾಪಸ್ ಬರುತ್ತಿದ್ದ ವೇಳೆ ಮಳೆ ಆರಂಭವಾಗಿದೆ.

ಮಳೆಯಿಂದ ರಕ್ಷಣೆ ಪಡೆಯಲು ಮರದ ಕೆಳಗೆ ನಿಂತಿದ್ದ ಸಂದರ್ಭದಲ್ಲಿ ಏಕಾಏಕಿ ಸಿಡಿಲು ಬಡಿದಿದ್ದು, ಝುರಣಪ್ಪ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಘಟನೆಯು ಬೆಮಳಖೇಡ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಮನ್ನಾಏಖೆಳ್ಳಿ ಸರ್ಕಾರಿ ಆಸ್ಪತ್ರೆಗೆ ಸಾಗಿಸಲಾಗಿದೆ.

ಘಟನೆ ಕುರಿತು ಬೆಮಳಖೇಡ ಪೊಲೀಸ್ ಠಾಣೆಯಲ್ಲಿ ಪ್ರಕರಣದ ದಾಖಲಾತಿ ಹಾಗೂ ಮುಂದಿನ ತನಿಖೆ ನಡೆಯುತ್ತಿದೆ.

# ಖಾಸಗಿ ವಿವಿಗಳ ಲಾಭದಾಟಕ್ಕೆ ಸುಪ್ರೀಂ ಅಂಕುಶ

## ವಿವಿಗಳ ಹಣಕಾಸು ವಿವರ ಕೇಳಿದ ಕೋರ್ಟ್

ನವದೆಹಲಿ.ಸೆ.23– ಖಾಸಗಿ ವಿಶ್ವ ವಿದ್ಯಾಲಯಗಳ ಹಣಕಾಸಿನ ವ್ಯವಹಾರಗಳ ಕುರಿತು ಸುಪ್ರೀಂ ಕೋರ್ಟ್ ಮಹತ್ವದ ಸೂಚನೆ ನೀಡಿದ್ದು, ಅವುಗಳ ಆದಾಯ ಮತ್ತು ವೆಚ್ಚದ ಸಂಪೂರ್ಣ ವಿವರಗಳನ್ನು ಸಲ್ಲಿಸುವಂತೆ ಸೂಚಿಸಿದೆ.

ನೋಯ್ಡ ಮೂಲದ ಖಾಸಗಿ ವಿಶ್ವ ವಿದ್ಯಾಲಯದ ವಿದ್ಯಾರ್ಥಿಯೊಬ್ಬರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಜಸ್ಟಿಸ್ ಅಹ್ಸಾನುದ್ದೀನ್ ಅಮಾನುಲ್ಲಾ ಮತ್ತು ಜಸ್ಟಿಸ್ ಎನ್.ವಿ. ಅಂಜಾ–ರಿಯಾ ಅವರನ್ನೊಳಗೊಂಡ ಪೀಠವು, ಖಾಸಗಿ ವಿಶ್ವವಿದ್ಯಾಲಯಗಳು ಶಿಕ್ಷಣ ನೀಡುವ ಸಂಸ್ಥೆಗಳಾಗಿದ್ದು, ಅವುಗಳ ಹಣಕಾಸಿನ ಚಟುವಟಿಕೆಗಳು ಯಾವ ರೀತಿಯಲ್ಲಿ ನಡೆಯುತ್ತಿವೆ ಎಂಬುದನ್ನು ಪರಿಶೀಲಿಸುವ ಅಗತ್ಯವಿದೆ ಎಂದು ವಿಚಾರಣೆ ವೇಳೆ ಅಭಿಪ್ರಾಯಪಟ್ಟಿದೆ.

ವಿಶ್ವವಿದ್ಯಾಲಯಗಳಿಗೆ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾಗುವ ಶುಲ್ಕ, ವಿವಿಧ ಮೂಲಗಳಿಂದ ಬರುವ ಆದಾಯ, ಸಂಸ್ಥೆಯ ನಿರ್ವಹಣೆಗೆ ಮಾಡಲಾಗುವ ವೆಚ್ಚ ಹಾಗೂ ಇತರ ಹಣಕಾಸಿನ ವಹಿವಾಟುಗಳ ವಿವರಗಳನ್ನು ಒದಗಿಸುವಂತೆ ಪೀಠ ಸೂಚಿಸಿದೆ.

ಶಿಕ್ಷಣ ಸಂಸ್ಥೆಗಳ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆ ಇರಬೇಕು ಎಂಬುದನ್ನು ನ್ಯಾಯಾಲಯದ ಸೂಚನೆ ಒತ್ತಿಹೇಳುತ್ತದೆ. ವಿಶ್ವವಿದ್ಯಾಲಯಗಳು ಶಿಕ್ಷಣದ ಉದ್ದೇಶವನ್ನು ಮುಖ್ಯವಾಗಿಟ್ಟುಕೊಂಡು ಕಾರ್ಯನಿರ್ವಹಿಸಬೇಕೇ ಅಥವಾ ಅವುಗಳ ಹಣಕಾಸಿನ ಚಟುವಟಿಕೆಗಳಿಗೆ ವಾಣಿಜ್ಯ ಉದ್ದೇಶದ ಅಂಶಗಳು ಸೇರಿಕೊಂಡಿವೆಯೇ ಎಂಬ ವಿಚಾರವೂ ಚರ್ಚೆಗೆ ಬಂದಿದೆ.

ಖಾಸಗಿ ವಿಶ್ವವಿದ್ಯಾಲಯಗಳ ಹಣಕಾಸಿನ ವಿವರಗಳು ಲಭ್ಯವಾದ ಬಳಿಕ ಅವುಗಳ ಆದಾಯ ಮತ್ತು ವೆಚ್ಚದ ಸ್ವರೂಪದ ಕುರಿತು ಹೆಚ್ಚಿನ ಪರಿಶೀಲನೆ ನಡೆಸಲು ಸಾಧ್ಯವಾಗಲಿದೆ. ಈ ಹಿನ್ನೆಲೆಯಲ್ಲಿ ದೇಶದ ಖಾಸಗಿ ವಿಶ್ವವಿದ್ಯಾಲಯಗಳ ಹಣಕಾಸಿನ ಮಾಹಿತಿಯನ್ನು ನ್ಯಾಯಾಲಯ ಕೋರಿರುವುದು ಮಹತ್ವ ಪಡೆದಿದೆ.

**ಲಾಭದ ಸಂಸ್ಥೆಯಲ್ಲ**

ಶಿಕ್ಷಣ ಸಂಸ್ಥೆಗಳ ಸ್ವರೂಪ ಮತ್ತು ಅವುಗಳ ಹಣಕಾಸಿನ ಚಟುವಟಿಕೆಗಳ ನಡುವಿನ ಸಂಬಂಧದ ಬಗ್ಗೆಯೂ ಸುಪ್ರೀಂ ಕೋರ್ಟ್ ವಿಚಾರಣೆ ನಡೆಸಿದೆ. ಶಿಕ್ಷಣ ನೀಡುವ ಉದ್ದೇಶದ ಸಂಸ್ಥೆಗಳು ಕೇವಲ ಲಾಭ ಗಳಿಸುವ ಉದ್ದೇಶದಿಂದ ಕಾರ್ಯನಿರ್ವಹಿಸಬಾರದು ಎಂಬ ಅಂಶವನ್ನು ನ್ಯಾಯಾಲಯದ ಮುಂದೆ ಪ್ರಸ್ತಾಪಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಖಾಸಗಿ ವಿಶ್ವವಿದ್ಯಾಲಯಗಳ ಹಣಕಾಸಿನ ವ್ಯವಸ್ಥೆ, ಶುಲ್ಕ ಸಂಗ್ರಹ ಮತ್ತು ವೆಚ್ಚದ ವಿವರಗಳ ಮೇಲೆ ಹೆಚ್ಚಿನ ಗಮನ ಹರಿಸಲಾಗಿದೆ.

**ರಾಜ್ಯಗಳಿಗೆ 6 ವಾರಗಳ ಗಡುವು**

ಕೇಂದ್ರ ಸರ್ಕಾರ, ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ತಮ್ಮ ವ್ಯಾಪ್ತಿಯಲ್ಲಿರುವ ಖಾಸಗಿ ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳಿಂದ ಈ ಎಲ್ಲ ಮಾಹಿತಿಯನ್ನು ಕಲೆ ಹಾಕಬೇಕು.ಆಯಾ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು 6 ವಾರಗಳ ಒಳಗಾಗಿ ಈ ಕುರಿತು ಅಫಿಡವಿಟ್ ಸಲ್ಲಿಸಬೇಕು ಎಂದು ಕೋರ್ಟ್ ಗಡುವು ವಿಧಿಸಿದೆ. ಈ ಪ್ರಕರಣದ ಮುಂದಿನ ವಿಚಾರಣೆಯು ನವೆಂಬರ್ 19 ರಂದು ನಡೆಯಲಿದೆ.

# ಸಂವಿಧಾನದ ಅಡಿಯಲ್ಲೇ ಮಾತನಾಡಿದ್ದೇನೆ - ಪ್ರತಾಪ್ ಸಿಂಹ

ಮೈಸೂರು.ಸೆ.23– ತಮ್ಮ ವಿರುದ್ಧ ದಾಖಲಾಗಿರುವ ಎರಡು ಎಫ್‌ಐಆರ್ ಕುರಿತು ಮಾಜಿ ಸಂಸದ ಪ್ರತಾಪ್ ಸಿಂಹ ಪ್ರತಿಕ್ರಿಯಿಸಿದ್ದು,ತಾವು ಸಂವಿಧಾನದ ಅಡಿಯಲ್ಲೇ ಮಾತನಾಡಿದ್ದು, ಕಾನೂನಾತ್ಮಕವಾಗಿಯೇ ಮುಂದುವರಿಯುವುದಾಗಿ ಹೇಳಿದ್ದಾರೆ.

ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,ಪ್ರಚೋದನೆ ನೀಡಿದ್ದು ಇನ್ಸ್‌ಪೆಕ್ಟರ್, ಆದರೆ ನನ್ನ ವಿರುದ್ಧ ಎಫ್‌ಐ ಆರ್ ದಾಖಲಿಸಲಾಗಿದೆ.ನನ್ನ ವಿರುದ್ಧ ಯಾರು ಎಫ್‌ಐಆರ್ ಮಾಡಿಸಿದ್ದಾರೆ ಎಂಬುದು ಗೊತ್ತಿದೆ. ನನ್ನ ಮೇಲೆ ದೌರ್ಜನ್ಯ ಕೇಸ್ ಹಾಕುವಂತಹದ್ದು ನಾನು ಏನು ಮಾತನಾಡಿದ್ದೇನೆ? ಎಂದು ಪ್ರಶ್ನಿಸಿದರು.

ನೀಲಿ ಶಾಲು ಕುರಿತು ಮಾತನಾಡಿದ ಪ್ರತಾಪ್ ಸಿಂಹ, ಅಂಬೇಡ್ಕರ್ ನೀಲಿ ಬಣ್ಣವನ್ನು ಸಮಾನತೆಯ ಸಂಕೇತವಾಗಿ ಬಳಸುತ್ತಿದ್ದರು. ತಾವು ನೀಲಿ ಶಾಲಿನ ವಿರುದ್ಧವಾಗಿಲ್ಲ, ಅದನ್ನು ಗೌರವಿಸುತ್ತೇವೆ ಎಂದು ಸ್ಪಷ್ಟಪಡಿಸಿದರು.

ದಲಿತ ಸಂಘಟನೆಗಳ ವಿರುದ್ಧವೂ ಪ್ರಶ್ನೆಗಳನ್ನು ಮುಂದಿಟ್ಟ ಅವರು,ನಾವು ಶೋಭಾಯಾತ್ರೆ ನಡೆಸಿದ ದಿನ ದಲಿತ ಸಂಘಟನೆಗಳು ಸಾಮರಸ್ಯ ಯಾತ್ರೆ ನಡೆಸಿದ್ದವು.ಧಿಕ್ಕಾರ ಕೂಗುವುದೇ ಸಾಮರಸ್ಯವೇ? ಎಂದು ಪ್ರಶ್ನಿಸಿದರು. ಅಂಬೇಡ್ಕರ್ ಅವರ ವಿಚಾರಗಳನ್ನು ಸಂಪೂರ್ಣವಾಗಿ ತಿಳಿದುಕೊಳ್ಳದೆ ತಮ್ಮ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ ಎಂದು ಹೇಳಿದರು.

ಅಖಂಡ ಶ್ರೀನಿವಾಸ ಮೂರ್ತಿ ಮನೆ ಮೇಲಿನ ದಾಳಿ, ಎಸ್‌ಟಿಪಿ–ಸಿಎಸ್‌ಪಿ ಹಣದ ವಿಚಾರ ಹಾಗೂ 2016ರಲ್ಲಿ ಶ್ರೀನಿವಾಸ ಪ್ರಸಾದ್ ಅವರನ್ನು ಸಚಿವ ಸಂಪುಟದಿಂದ ಕೈಬಿಟ್ಟ ಸಂದರ್ಭ ಸೇರಿದಂತೆ ಹಲವು ವಿಚಾರಗಳನ್ನು ಪ್ರಸ್ತಾಪಿಸಿದ ಅವರು,ಆ ಸಂದರ್ಭಗಳಲ್ಲಿ ದಲಿತ ಸಂಘಟನೆಗಳು ಎಲ್ಲಿ ಇದ್ದವು ಎಂದು ಪ್ರಶ್ನಿಸಿದರು.

ನಾನು ದಲಿತ ವಿರೋಧಿಯಲ್ಲ. ಅಂಬೇಡ್ಕರ್ ನಿಮಗೆ ಮಾತ್ರ ಸೇರಿಲ್ಲ,ನಮಗೂ ಸೇರಿದವರು.ಹಿಂದಿನ ತಲೆಮಾರಿನವರು ಮೋಸ ಮಾಡಿದ್ದಾರೆ. ಅದಕ್ಕಾಗಿ ನಮ್ಮನ್ನು ದ್ವೇಷಿಸಿದರೆ ನಾವೆಲ್ಲ ಒಂದಾಗುವುದು ಯಾವಾಗ? ಎಂದು ಪ್ರತಾಪ್ ಸಿಂಹ ಹೇಳಿದರು.

ಅನ್ಯಾಯವಾಗಿರುವ ವಿಚಾರಗಳ ವಿರುದ್ಧ ದನಿ ಎತ್ತುವಂತೆ ದಲಿತ ಸಂಘಟನೆಗಳಿಗೆ ಮನವಿ ಮಾಡಿದ ಅವರು, ಒಳ್ಳೆಯ ವಿಚಾರಗಳಿಗೆ ಧ್ವನಿ ಎತ್ತಿದರೆ ತಾವು ಅವರೊಂದಿಗೆ ನಿಲ್ಲುವುದಾಗಿ ತಿಳಿಸಿದರು.

**ಪ್ರದೀಪ್ ಈಶ್ವರ್ ವಿರುದ್ಧ ವಾಗ್ದಾಳಿ**

ತಮ್ಮ ವಿರುದ್ಧ ಶಾಸಕ ಪ್ರದೀಪ್ ಈಶ್ವರ್ ನೀಡಿರುವ ಹೇಳಿಕೆಗಳ ಕುರಿತು ಪ್ರತಿಕ್ರಿಯಿಸಿದ ಪ್ರತಾಪ್ ಸಿಂಹ, ಪ್ರದೀಪ್ ಈಶ್ವರ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಪ್ರದೀಪ್ ಈಶ್ವರ್‌ನಂತಹ ಹುಚ್ಚರಿಗೆ ಮಾಧ್ಯಮದವರು ಯಾಕೆ ರಿಯಾಕ್ಷನ್ ಕೇಳುತ್ತಾರೆ ಎಂಬುದು ಗೊತ್ತಿಲ್ಲ ಎಂದು ಟೀಕಿಸಿದರು.

ಈ ಹಿಂದೆ ಡಾ. ಕೆ. ಸುಧಾಕರ್ ಚಿಕ್ಕಬಳ್ಳಾಪುರಕ್ಕೆ ಮೆಡಿಕಲ್ ಕಾಲೇಜು ತೆಗೆದುಕೊಂಡು ಹೋದ ವಿಚಾರವನ್ನು ಉಲ್ಲೇಖಿಸಿದ ಪ್ರತಾಪ್ ಸಿಂಹ, ಪ್ರದೀಪ್ ಈಶ್ವರ್ ಬಗ್ಗೆ ತಮಗೆ ಮೊದಲೇ ತಿಳಿದಿದ್ದರೆ ಹುಚ್ಚಾಸ್ಪತ್ರೆಗೆ ತೆಗೆದುಕೊಂಡು ಹೋಗಿ ಎಂದು ಹೇಳುತ್ತಿದ್ದೆ ಎಂದು ವ್ಯಂಗ್ಯವಾಡಿದರು.

# ಆರ್ಥಿಕವಾಗಿ ರಾಜ್ಯ ದಿವಾಳಿಯಾಗಿಲ್ಲ: ಲಾಡ್ ತಿರುಗೇಟು

ಬೆಂಗಳೂರು.ಸೆ.23 – ಹಣಕಾಸು ಇಲಾಖೆ ಸರ್ಕಾರಗಳಿಗೆ ಸಲಹೆ ನೀಡುವುದು ಸಹಜ. ಸಲಹೆ ನೀಡಿರುವುದರಿಂದಲೇ ರಾಜ್ಯ ದಿವಾಳಿಯಾಗಿದೆ ಎಂದು ಎಲ್ಲಿಯೂ ಹೇಳಲಾಗಿದೆಯೇ ಎಂದು ಪ್ರಶ್ನಿಸುವ ಮೂಲಕ ಬಿಜೆಪಿ ಹಾಗೂ ಜೆಡಿಎಸ್ ನಾಯಕರಿಗೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ತಿರುಗೇಟು ನೀಡಿದ್ದಾರೆ.

ವಿಧಾನಸೌಧದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ತನ್ನ ಗ್ಯಾರಂಟಿ ಯೋಜನೆಗಳಿಗೆ ವಾರ್ಷಿಕ ಸುಮಾರು 60 ಸಾವಿರ ಕೋಟಿ ವೆಚ್ಚ ಮಾಡುತ್ತಿದ್ದು, ಸರ್ಕಾರಿ ನೌಕರರ ವೇತನ ಸೇರಿದಂತೆ ಅಭಿವೃದ್ಧಿ ಕಾರ್ಯಗಳನ್ನೂ ಮುಂದುವರಿಸುತ್ತಿದೆ ಎಂದು ಹೇಳಿದರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರಾಜೀನಾಮೆ ನೀಡಬೇಕೆಂಬ ಬಿಜೆಪಿ ಆಗ್ರಹಕ್ಕೆ ಪ್ರತಿಕ್ರಿಯಿಸಿದ ಅವರು,ಬಿಜೆಪಿ ಕೇಳಿದೆ ಎಂಬ ಕಾರಣಕ್ಕೆ ಮುಖ್ಯಮಂತ್ರಿ ರಾಜೀನಾಮೆ ನೀಡಬೇಕೇ ಎಂದು ಪ್ರಶ್ನಿಸಿದರು.ಮುಂದಿನ ದಿನಗಳಲ್ಲಿ ಸಂಪನ್ಮೂಲ ಕ್ರೋಢೀಕರಣ ಹೇಗೆ ಮಾಡಬೇಕು ಎಂಬ ಬಗ್ಗೆ ಮುಖ್ಯಮಂತ್ರಿಗೆ ಸ್ಪಷ್ಟ ಯೋಜನೆ ಇದೆ ಎಂದರು.



ದೇಶದ ಆರ್ಥಿಕ ಪರಿಸ್ಥಿತಿ, ಉದ್ಯೋಗ ಹಾಗೂ ವಿದೇಶಾಂಗ ನೀತಿ ವಿಚಾರದಲ್ಲಿಯೂ ಕೇಂದ್ರ ಸರ್ಕಾರವನ್ನು ಟೀಕಿಸಿದ ಲಾಡ್, ಕೇಂದ್ರದ ಆರ್ಥಿಕ ನೀತಿಗಳ ಕುರಿತು ಶ್ವೇತಪತ್ರ ಹೊರಡಿಸಿ ಚರ್ಚೆಗೆ ಬಂದರೆ ರಾಜ್ಯ ಸರ್ಕಾರವೂ ಚರ್ಚೆಗೆ ಸಿದ್ಧವಿದೆ ಎಂದು ಹೇಳಿದರು.

ಬರ ಪರಿಹಾರ ವಿಚಾರದಲ್ಲಿ ಕೇಂದ್ರ–ಕ್ಕೆ ರಾಜ್ಯ ಸರ್ಕಾರ ವರದಿ ಸಲ್ಲಿಸಬೇಕಿದೆ. ರಾಜ್ಯಕ್ಕೆ ಬರ ಪರಿಹಾರದ ಹಣ ದೊರೆ–ಯದ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ಮೊರೆ ಹೋಗಬೇಕಾಯಿತು.ಕರ್ನಾಟಕದಿಂದ ಕೇಂದ್ರಕ್ಕೆ ದೊಡ್ಡ ಪ್ರಮಾಣದಲ್ಲಿ ತೆರಿಗೆ ಹಣ ಹೋಗುತ್ತಿದ್ದರೂ, ರಾಜ್ಯಕ್ಕೆ ಅನುಗುಣವಾದ ಅನುದಾನ ದೊರೆಯುತ್ತಿಲ್ಲ ಎಂಬುದು ರಾಜ್ಯ ಸರ್ಕಾರದ ನಿಲುವು ಎಂದು ಹೇಳಿದರು.

ಗುಜರಾತ್, ಮಧ್ಯಪ್ರದೇಶ, ಬಿಹಾರ ಹಾಗೂ ರಾಜಸ್ಥಾನ ಸೇರಿದಂತೆ ವಿವಿಧ ರಾಜ್ಯಗಳಿಗೆ ಕಳೆದ 10 ವರ್ಷಗಳಲ್ಲಿ ನೀಡಿರುವ ಕೇಂದ್ರದ ಅನುದಾನ ಮತ್ತು ಕರ್ನಾಟಕಕ್ಕೆ ನೀಡಿರುವ ಅನುದಾನದ ಪ್ರಮಾಣವನ್ನು ಹೋಲಿಕೆ ಮಾಡಬೇಕು ಎಂದು ಲಾಡ್ ಆಗ್ರಹಿಸಿದರು.ಸದನದಲ್ಲಿ ಬಿಜೆಪಿ ಬರ ಪರಿಹಾರ ವಿಚಾರವಾಗಿ ಪ್ರತಿಭಟನೆ ನಡೆಸುವುದಾಗಿ ಹೇಳಿರುವ ಕುರಿತು ಪ್ರತಿಕ್ರಿಯಿಸಿದ ಅವರು, ಪ್ರತಿಭಟನೆ ನಡೆಸಲಿ, ಸರ್ಕಾರ ಉತ್ತರ ನೀಡಲು ಸಿದ್ಧವಿದೆ.ಕೇಂದ್ರ ಸರ್ಕಾರ ಕರ್ನಾಟಕಕ್ಕೆ ನೀಡಿರುವ ಹಣದ ಕುರಿತು ಬಿಜೆಪಿ ಚರ್ಚಿಸಲಿ ಎಂದು ಸವಾಲು ಹಾಕಿದರು.

ಇದೇ ವೇಳೆ ಅದಾನಿ ಸಮೂಹದ ಆಸ್ತಿ ಮೌಲ್ಯ ಏರಿಕೆ, ಕಾರ್ಪೊರೇಟ್ ಸಾಲ ಮನ್ನಾ ಹಾಗೂ ಕೇಂದ್ರದ ವಿವಿಧ ಆರ್ಥಿಕ ನೀತಿಗಳ ಬಗ್ಗೆಯೂ ಲಾಡ್ ಪ್ರಶ್ನೆಗಳನ್ನು ಎತ್ತಿದರು. ಕೇಂದ್ರ ಸರ್ಕಾರದ ವಿವಿಧ ನೀತಿಗಳ ಕುರಿತು ಮುಕ್ತ ಚರ್ಚೆಗೆ ರಾಜ್ಯ ಸರ್ಕಾರ ಸಿದ್ಧವಿದೆ ಎಂದು ಹೇಳಿದರು.

ಎಥನಾಲ್ ನೀತಿ ಸೇರಿದಂತೆ ಕೇಂದ್ರ ಸರ್ಕಾರದ ವಿವಿಧ ವಿಚಾರಗಳನ್ನು ಪ್ರಸ್ತಾಪಿಸಿದ ಲಾಡ್, ಈ ವಿಷಯಗಳ ಕುರಿತು ಕೇಂದ್ರದ ನಾಯಕರು ಸ್ಪಷ್ಟ ಉತ್ತರ ನೀಡಬೇಕು. ಕೇಂದ್ರ ಸರ್ಕಾರದ ಆರ್ಥಿಕ ನೀತಿ, ರಾಜ್ಯಕ್ಕೆ ಬರಬೇಕಾದ ಪರಿಹಾರ ಹಾಗೂ ಅನುದಾನ ಸೇರಿದಂತೆ ಹಲವು ವಿಚಾರಗಳನ್ನು ಮುಂದಿಟ್ಟುಕೊಂಡು ಸಚಿವರು ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.